ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೭೦

ನೇಮಿಚಂದ್ರ

ಎನ್. ಅನಂತರಂಗಾಚಾರ್, ಎಂ.ಎ.,

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೯

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ
—ಡಾ|| ಬಿ. ಎನ್. ಶ್ರೀನಿವಾಸ ಅಯ್ಯಂಗಾರ್
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್
೩. ತೆರಿಗೆ—ಬಿ. ಆರ್. ಸುಬ್ಬರಾವ್
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್
೧೦. ಪಂಪ—ತೀ. ನಂ. ಶ್ರೀಕಂಠಯ್ಯ
೧೧. ಪ್ರಾಣಿಜೀವನ—ಎ. ನಾರಾಯಣರಾವ್
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ
೧೩. ಮದುವೆ—ನಾ. ಕಸ್ತೂರಿ
೧೪. *ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್
೧೬. ಬೆಳಕು—ಟಿ. ಎಸ್. ಸುಬ್ಬರಾಯ
೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ
೨೧. ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್
೨೨. ಶಿಶುವಿಹಾರಗಳು—ಸಿ. ರಂಗಾಚಾರ್
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ
೨೪. ವಿಡಂಬನ—ಎಸ್. ವಿ. ರಂಗಣ್ಣ
೨೫. ಎಲ್ಲೋರ ಮತ್ತು ಅಜಂತ—ಡಾ|| ಎಂ. ಎಚ್. ಕೃಷ್ಣ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೮೦

ನೇಮಿಚಂದ್ರ

ಎನ್. ಅನಂತರಂಗಾಚಾರ್, ಎಂ.ಎ.,

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೯

ಮೊದಲನೆಯ ಮುದ್ರಣ ೧೯೫೯

೩೦೦೦ ಪ್ರತಿಗಳು

ಬೆಲೆ

ಸಾದಾ ಪ್ರತಿ ೨೫ ನಯೆ ಪೈಸೆ

ಉತ್ತಮ ಪ್ರತಿ ೩೭ ನಯೆ ಪೈಸೆ

ಮುದ್ರಕರು :

ಮೈಸೂರು ಯೂನಿವರ್ಸಿಟಿ ಮುದ್ರಣಾಲಯ,

ವಿ. ವಿ. ಮೊಹಲ್ಲ, ಮೈಸೂರು.

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಪ್ರಾರಂಭವಾಗಿ ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಈ ಅವಧಿಯಲ್ಲಿ ೭೯ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಕಾಲಾವಧಿಯನ್ನು ಗಮನಿಸಿದರೆ ಈಗ ಹೊರಬಿದ್ದಿರುವ ಕಿರುಹೊತ್ತಗೆಗಳ ಸಂಖ್ಯೆ ಈಗಿರುವುದಕ್ಕಿಂತಲೂ ದ್ವಿಗುಣವೊ ತ್ರಿಗುಣವೊ ಆಗಿರಬೇಕಾಗಿತ್ತೆಂದು ಹೇಳಬಹುದು. ಆದರೂ ಅವುಗಳ ಗುಣವನ್ನೂ ಅವು ಮಾರಾಟವಾಗುತ್ತಿರುವ ವೇಗವನ್ನೂ ಗಮನಿಸಿದರೆ ಈ ಮಾಲೆಯ ಉಪಯುಕ್ತತೆ ಮತ್ತು ಜನಪ್ರಿಯತೆ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪುಸ್ತಿಕೆಯೂ ಮೂರು ನಾಲ್ಕು ಸಾರಿ ಮುದ್ರಿತವಾಗಿದೆ. ದಿನೇ ದಿನೇ ಈ ಮಾಲೆಯ ಬಗೆಗೆ ಜನರ ವಿಶ್ವಾಸಾದರಗಳು ಅಧಿಕವಾಗುತ್ತಿವೆ. "ಈ ತಿಂಗಳು ಏನಾದರೂ ಹೊಸ ಪುಸ್ತಿಕೆ ಬಂದಿದೆಯೆ? ಮುಗಿದು ಹೋಗಿರುವ ಪುಸ್ತಿಕೆಗಳು ಅಚ್ಚಾಗಿವೆಯೆ?" ಎಂದು ಮೇಲಿಂದ ಮೇಲೆ ಜನ ಕೇಳುತ್ತಿರುತ್ತಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿ; ನಾಡಿನ ಪ್ರಗತಿಯ ಒಂದು ಚಿಹ್ನೆ.

ನಾಡಿನಲ್ಲಿ ದಿನೇ ದಿನೇ ವಿದ್ಯಾವಂತರ ಮತ್ತು ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಕೇವಲ ಸಾಕ್ಷರತೆಯಿಂದ ಮಹತ್ತಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿಗಾಗಿ ಸಾಧನವೇ ಹೊರತು ಅದೇ ಪರಮ ಗುರಿಯಲ್ಲ; ಜ್ಞಾನ ಸಂಪಾದನೆಯೇ ಅದರ ಪರಮ ಗುರಿ. ಈ ಗುರಿಯ ಸಾಧನೆಗಾಗಿ ಸಕಲ ಅನುಕೂಲತೆಗಳನ್ನು ಕಲ್ಪಿಸುವುದು ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಆದ್ಯಕರ್ತವ್ಯ. ಈ ಮೂಲಕ ವಿಶ್ವ

ವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು, ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ.

ಈ ಮಾಲೆಯಿಂದ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರ ಕಾರ್ಯ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದಿರುವಂತೆಯೆ ಕನ್ನಡದಲ್ಲಿ ವಿಜ್ಞಾನ ಸಂಬಂಧವಾದ ವಿಷಯಗಳನ್ನು ಸುಲಭವಾಗಿ ಸರಳವಾಗಿ ಹೇಳಬಹುದು, ಮತ್ತು ಕನ್ನಡ ವೈಜ್ಞಾನಿಕ ಭಾಷೆಯಾಗಬಲ್ಲುದು ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪುಸ್ತಿಕೆಗಳ ಪಟ್ಟಿಯನ್ನೊಮ್ಮೆ ಓದಿದರೆ ಸಂದೇಹವಾದಿಗಳ ಶಂಕೆ ಸಂಪೂರ್ಣವಾಗಿ ನಿವಾರಣೆಗೊಂಡು ಧೈರ್ಯ ಮೂಡದಿರದು. ಇವುಗಳಲ್ಲಿ ೫೫ ಪುಸ್ತಿಕೆಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಇತಿಹಾಸ ಮೊದಲಾದುವುಗಳಿಗೆ ಸಂಬಂಧಿಸಿದವು. ಉಳಿದ ೨೪ ಪುಸ್ತಿಕೆಗಳು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದುವು. ಇವುಗಳ ಗ್ರಂಥಕರ್ತರು ಪ್ರಮುಖವಾಗಿ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಪಾಠ ಹೇಳಿ ನುರಿತಿರುವ ಘನ ವಿದ್ವಾಂಸರು. ಬಹಳ ಹಿಂದೆಯೇ ವೈಜ್ಞಾನಿಕ ಗ್ರಂಥಗಳ ರಚನೆಗೆ ಕೈಹಾಕಿ ಕನ್ನಡ ವೈಜ್ಞಾನಿಕ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿದೆ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವಾಗುವ ಶಕ್ತಿಯನ್ನು ಪಡೆದಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರೆಲ್ಲ ಅಭಿನಂದನಾರ್ಹರು.

ಈ ಮಾಲೆಯ ಕಾರ್ಯ ತ್ವರಿತಗೊಂಡು, ವಿಸ್ತಾರಗೊಂಡು ಪುಸ್ತಕಗಳ ಸಂಖ್ಯೆ ದಿನೇ ದಿನೇ ಬೆಳೆಯಬೇಕೆಂದೂ, ಇದರಿಂದ ಸಾಮಾನ್ಯ ಜನತೆ ಸಂಪೂರ್ಣ ಪ್ರಯೋಜನ ಪಡೆದು ಸಮಷ್ಟಿ

ಪ್ರಜ್ಞೆ ಸರ್ವತೋಮುಖವಾಗಿ ವಿಕಾಸಗೊಳ್ಳಬೇಕೆಂಬುದೂ ವಿಶ್ವವಿದ್ಯಾನಿಲಯದ ಆಸೆ. ಕನ್ನಡನಾಡು ಒಂದುಗೂಡಿರುವ ಈ ಶುಭಮುಹೂರ್ತದಲ್ಲಿ ಕನ್ನಡನುಡಿ ಆಡಳಿತದ ಭಾಷೆಯಾಗಿ, ವ್ಯವಹಾರದ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ, ಜನತೆಯ ಸಂಸ್ಕೃತಿವಿಕಾಸಸಾಧನದ ಭಾಷೆಯಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯದ ಈ ಸೇವೆಯನ್ನು ಕರ್ನಾಟಕ ಸಂಪೂರ್ಣವಾಗಿ ತನ್ನ ಮೇಲ್ಮೆಗೂ ಏಳ್ಗೆಗೂ ಬಳಸಿಕೊಳ್ಳುತ್ತದೆಂದು ನಾವು ಹಾರೈಸುತ್ತೇವೆ.

ಮೈಸೂರು
೫—೧—೫೯

ಕೆ. ವಿ. ಪುಟ್ಟಪ್ಪ
ವೈಸ್-ಛಾನ್ಸಲರ್.

ವಿಷಯಾನುಕ್ರಮಣಿಕೆ.

ನೇಮಿಚಂದ್ರ

ಹಿನ್ನೆಲೆ

ಕನ್ನಡ ಸಾಹಿತ್ಯದ ಉಗಮವು ಬಹುಶಃ ಒಂಬತ್ತನೆಯ ಶತಮಾನದ ಉತ್ತರಾರ್ಧವಲ್ಲಿದ್ದ ನೃಪತುಂಗನಿಗಿಂತ ಒಂದೆರಡು ಶತಮಾನಗಳ ಹಿಂದೆ ಇದ್ದಿರಬಹುದಾದರೂ ಅವರ ಸ್ಪಷ್ಟವಾದ ರೂಪರೇಖೆಗಳನ್ನೂ, ಧ್ಯೇಯಸಾಧನೆಗಳನ್ನೂ ಆಕಾರ ಅವಸ್ಥೆಗಳನ್ನೂ ಪ್ರೇರಣಶಕ್ತಿಗಳನ್ನೂ ಸ್ಪಷ್ಟವಾಗಿ ಕಾಣುವುದು ಹತ್ತನೆಯ ಶತಮಾನವಲ್ಲಿ. ಹತ್ತನೆಯ ಶತಮಾನವು ಕನ್ನಡ ಸಾಹಿತ್ಯ ದೃಷ್ಟಿಯಿಂದ ಸುವರ್ಣಯುಗ. ಕನ್ನಡ ಸಾಹಿತ್ಯದ ಸರ್ವತೋಮುಖವಾದ ಅಭಿವೃದ್ಧಿಯನ್ನು ಆಗ ಕಾಣಬಹುದು. ಈ ಶತಮಾನದ ಪೂರ್ವಾರ್ಧದಲ್ಲಿ ರಾಷ್ಟ್ರಕೂಟರು ತಮ್ಮ ಅದ್ಭುತ ಶಕ್ತಿಯನ್ನು ಭರತಖಂಡದ ಅನೇಕ ಭಾಗಗಳಲ್ಲಿ ಪ್ರದರ್ಶಿಸಿ ತಮ್ಮ ಚಕ್ರವರ್ತಿತ್ವವನ್ನು ಸ್ಥಾಪಿಸಿಕೊಂಡರು. ಶತಮಾನದ ಉತ್ತರಾರ್ಧದಲ್ಲಿ ಕಲ್ಯಾಣಿಚಾಳುಕ್ಯವಂಶದ ಮೂಲ ಪುರುಷನಾದ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿ ತಾನೇ ಚಕ್ರವರ್ತಿಯಾದನು. ಅವನೂ ಅವನ ಪುತ್ರನಾದ ಇರಿವ ಬೆಡಂಗ ಸತ್ಯಾಶ್ರಯನೂ ತಮ್ಮ ರಾಜ್ಯವನ್ನು ಗುಜರಾತಿನವರೆಗೆ ವಿಸ್ತರಿಸಿದರು. ಚಾವುಂಡರಾಯನಂತಹ ಸೇನಾನಿಗಳೂ ಶಂಕರ ಗಂಡನಂತಹ ಮಂತ್ರಿಗಳೂ ರಾಜ್ಯವಿಸ್ತರಣದ ಕಾರ್ಯದಲ್ಲಿ ಸಹಾಯಮಾಡಿದರು. ಇವರಲ್ಲಿ ಅನೇಕರು ಜೈನಧರ್ಮಾನುಯಾಯಿಗಳು. ಅಲ್ಲದೆ ರಾಜರುಗಳು ಸ್ವತಃ ಕಲಿಗಳಾಗಿದ್ದುದಲ್ಲದೆ ಕವಿಗಳೂ ಕವಿಜನಾಶ್ರಯರೂ ಆಗಿದ್ದರು. ಪ್ರಜೆಗಳೂ

ಶೂರರೂ ಧಾರ್ಮಿಕರೂ ಆದುದರಿಂದ ಅವರ ದೇಶಪ್ರೇಮ, ರಾಜಭಕ್ತಿ, ಧರ್ಮನಿಷ್ಠೆ ಅನ್ಯಾದೃಶವಾಗಿ ಆ ಕಾಲದ ಗ್ರಂಥಗಳಲ್ಲಿಯೂ ಶಾಸನಗಳಲ್ಲಿಯೂ ಪ್ರತಿಬಿಂಬಿತವಾಗಿವೆ. ರಾಜರ ಮತ್ತು ಧರ್ಮವೀರರ ಆಶ್ರಯದಲ್ಲಿದ್ದ ಗ್ರಂಥಕರ್ತರೂ ಆಶ್ರಯದಾತರಂತೆಯೇ ಕವಿಗಳೂ ಕಲಿಗಳೂ ಆಗಿ ಧರ್ಮೋದ್ಧಾರಕ್ಕಾಗಿ ಧಾರ್ಮಿಕ ಗ್ರಂಥಗಳನ್ನೂ ಆಶ್ರಯದಾತರುಗಳ ಕೀರ್ತಿಸ್ಥಾಪನೆಗಾಗಿ ಲೌಕಿಕ ಗ್ರಂಥಗಳನ್ನೂ ರಚಿಸಿ ಮುಂದಿನ ಪೀಳಿಗೆಯವರಿಗೆ ಆದರ್ಶರಾದರು. ಭಿನ್ನಮತಗಳ ಘರ್ಷಣೆಯಿದ್ದರೂ ಪೂರ್ಣವಾದ ಮತಸಹಿಷ್ಣುತೆಯಿತ್ತು. ಕವಿಪುಂಗವರಾದ ಪಂಪರನ್ನಾದಿಗಳು ತಮ್ಮ ಅದ್ಭುತ ಪ್ರತಿಭೆಯಿಂದಲೂ ಉಜ್ವಲ ಧರ್ಮಾಭಿಮಾನದಿಂದಲೂ ಕನ್ನಡದ ಕಾವ್ಯರತ್ನಗಳನ್ನು ರಚಿಸಿ ಕನ್ನಡ ಸಾಹಿತ್ಯದ ಸೀಮಾಪುರುಷರಾದರು. ಮೇರುಸದೃಶವಾದ ಅವರ ಗ್ರಂಥಗಳು ಆಮೇಲೆ ಬಂದವರಿಗೆ ಅನುಕರಣೀಯವಾದುವು.

ಈ ಪರಿಸ್ಥಿತಿ ಬಹುಕಾಲ ಉಳಿಯಲಿಲ್ಲ. ಒಂದೆರಡು ಶತಮಾನಗಳಲ್ಲಿ ಕರ್ಣಾಟಕದ ರಾಜಕೀಯ ಧಾರ್ಮಿಕಸ್ಥಿತಿಗಳು ವ್ಯತ್ಯಾಸಗೊಂಡವು. ೧೨—೧೩ನೆಯ ಶತಮಾನಗಳವೇಳೆಗೆ ತೀರ ಭಿನ್ನವಾದ ಚಿತ್ರವು ಕಣ್ಣಿಗೆ ಗೋಚರವಾಗುತ್ತದೆ. ೧೨ನೆಯ ಶತಮಾನದ ಆದಿಭಾಗದಲ್ಲಿ ಕರ್ಣಾಟಕದ ಉತ್ತರಭಾಗದಲ್ಲಿ ಪಶ್ಚಿಮ ಚಾಳುಕ್ಯರೂ ಅವರಿಗೆ ಸಾಮಂತರಾಗಿ ಗಂಗವಾಡಿಯಲ್ಲಿ ಹೊಯ್ಸಳರೂ ರಾಜ್ಯಭಾರ ಮಾಡುತ್ತಿದ್ದರು. ಈ ಮನೆತನದವರಿಗೂ ಮೂಡಣ ಚಾಳುಕ್ಯರಿಗೂ ದಕ್ಷಿಣದ ಚೋಳರಿಗೂ ಆಗಾಗ ಘರ್ಷಣೆಗಳುಂಟಾಗುತ್ತಲೇ ಇದ್ದವು. ಆದರೆ ಚಾಳುಕ್ಯರಲ್ಲಿ ಪ್ರಖ್ಯಾತನಾದ ಆರನೆಯ ವಿಕ್ರಮಾ

ದಿತ್ಯನು ದೀರ್ಘಕಾಲ ರಾಜ್ಯಭಾರಮಾಡಿ ತನ್ನ ಆಳ್ವಿಕೆಯಲ್ಲಿ ದೇಶದಲ್ಲಿದ್ದ ಅಂತಃಕಲಹಗಳನ್ನೂ ದೇಶ ಕ್ಷೋಭೆಗಳನ್ನೂ ಅಡಗಿಸಿ ದೇಶದಲ್ಲಿ ಸುಖಶಾಂತಿಗಳನ್ನು ನೆಲೆಗೊಳಿಸಿದನು. ಅವನ ತರುವಾಯ ಬಂದ ಮುಮ್ಮಡಿ ಸೋಮೇಶ್ವರನ ಕಾಲ ದಲ್ಲಿಯೂ ಈ ಶಾಂತವಾತಾವರಣ ಮುಂದುವರಿಯಿತು. ಮುಂದೆ ರಾಜನಾದ ಇಮ್ಮಡಿ ಜಗದೇಕಮಲ್ಲನೂ ಬಹು ಪ್ರತಾಪಶಾಲಿ. ಈತನು ಚೋಳರನ್ನೂ ಹೊಯ್ಸಳರನ್ನೂ ಸೋಲಿಸಿ ಚಾಳುಕ್ಯ ರಾಜ್ಯವನ್ನು ಭದ್ರಗೊಳಿಸಿದನು. ಬಹುಶಃ ಈ ಕಾಲದಲ್ಲಿ ಚಾಳುಕ್ಯರಿಗೂ ಹೊಯ್ಸಳರಿಗೂ ಸ್ಪರ್ಧೆ ಪ್ರಾರಂಭವಾಗಿರ ಬೇಕು. ಚಾಳುಕ್ಯರ ಸಾಮಂತರಲ್ಲಿ ಪ್ರಬಲನಾಗಿದ್ದ ಬಿಜ್ಜಳನು ಮುಂದೆ ಬಂದ ಮುಮ್ಮಡಿ ತೈಲಪ, ನೂರ್ಮಡಿ ತೈಲ ಎಂಬುವ ರನ್ನು ಮೂಲೆಗೊತ್ತಿ ತಾನೇ ಚಕ್ರವರ್ತಿಯಾಗಿ ಕಾಲಚೂ ರ್ಯರ ಅಧಿಕಾರವನ್ನು ಸ್ಥಾಪಿಸಿದನು. ಅವನ ಮಗನಾದ ರಾಯಮುರಾರಿ ಸೋಯಿದೇವನೂ ಮೊಮ್ಮಗನಾದ ಸೋಮೇ ಶ್ವರನೂ ದಕ್ಷರಾಗಿದ್ದುದರಿಂದ ರಾಜ್ಯದಲ್ಲಿ ಶಾಂತಿಸ್ಥಾಪನೆಗೆ ಬಹು ಸಹಾಯಕಾರಿಗಳಾದರು. ಇವರಾದ ಮೇಲೆ ಪುನಃ ಚಾಳುಕ್ಯಾಧಿಕಾರ ಸ್ಥಾಪನೆಗೆ ಪ್ರಯತ್ನಗಳೂ ನಡೆದರೂ ಆವೇ ಳೆಗೆ ಪ್ರಬಲರಾಗಿದ್ದ ಹೊಯ್ಸಳರೂ ಯಾದವರೂ ಚಾಳುಕ್ಯ ವಂಶವನ್ನು ನಿರ್ನಾಮಗೊಳಿಸಿ ಚಾಳುಕ್ಯ ರಾಜ್ಯವನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡರು. ಚಾಳುಕ್ಯ ವಂಶವೂ ಅದರ ಅವನತಿಗೆ ಕಾರಣರಾದ ಕಾಲಚೂರ್ಯವಂಶವೂ ನಾಶವಾದವು. ಹೊಯ್ಸಳರು, ಕರ್ಣಾಟಕ ರಾಜ್ಯರಮಾರಮಣರಾಗಿ ಶಾಂತಿ ವೈಭವಗಳಿಂದ ರಾಜ್ಯವಾಳಲು ಪ್ರಾರಂಭಮಾಡಿದರು. ಮೇಲೆ ಹೇಳಿದ ರಾಜರುಗಳೆಲ್ಲ ಸ್ವತಃ ಕವಿಗಳೂ ಕವಿ ಜನಾಶ್ರಯರೂ

ಮತಸಹಿಷ್ಣುಗಳೂ ಆಗಿದ್ದುದರಿಂದ ಸಾಹಿತ್ಯ ರಚನೆಗೆ ಪ್ರೋತ್ಸಾಹವೇನೂ ಕಡಮೆಯಾಗಲಿಲ್ಲ.

ಧಾರ್ಮಿಕ ಕ್ಷೇತ್ರದಲ್ಲಿ ಮತ್ತೂ ಹೆಚ್ಚಿನ ಪರಿವರ್ತನೆಗಳಾದುವು. ಹಿಂದಿನಿಂದ ಬೆಳೆದುಬಂದ ಜೈನಮತವು ಖಿಲವಾಗುತ್ತ ಬಂದಿತು. ಬಹುಶಃ ಆರನೆಯ ವಿಕ್ರಮಾದಿತ್ಯನು ಮೊದಲು ಜೈನನಾಗಿದ್ದು ಆಮೇಲೆ ಶೈವನಾಗಿರಬೇಕು. ಅವನ ಕಾಲದಲ್ಲಿ ಕಾಳಾಮುಖರೆಂಬ ಶೈವಪಂಥದವರು ಪ್ರಬಲರಾದರು. ಇವರ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಿಂದ ಜನರಲ್ಲಿ ಇವರಿಗೆ ವಿಶೇಷ ಗೌರವವುಂಟಾಯಿತು. ಇದೇ ಕಾಲದಲ್ಲಿ ತಮಿಳು ನಾಡಿನಲ್ಲಿ ಹುಟ್ಟಿ ಬೆಳೆದ ರಾಮಾನುಜಾಚಾರ್ಯರು ಚೋಳರ ಹಿಂಸೆಯನ್ನು ಸಹಿಸಲಾರದೆ ಹೊಯ್ಸಳ ರಾಜ್ಯಕ್ಕೆ ಬಂದು ಜೈನನಾಗಿದ್ದ ಬಿಟ್ಟಿದೇವನನ್ನು ವೈಷ್ಣವ ವಿಷ್ಣುವರ್ಧನನ್ನಾಗಿಸಿ ತಮ್ಮ ಮತವನ್ನು ಕನ್ನಡ ನಾಡಿನಲ್ಲಿ ಪ್ರಚಾರ ಮಾಡ ತೊಡಗಿದರು. ಜೊತೆಯಲ್ಲಿಯೇ ತಮಿಳು ದೇಶದ ಶೈವಮತವೂ ಕರ್ಣಾಟಕದಲ್ಲಿ ತನ್ನ ಪ್ರಭಾವವನ್ನು ಬೀರಲು ಮೊದಲು ಮಾಡಿತು. ಅಲ್ಲದೆ ಭಾರತದ ಬೇರೆಬೇರೆಯ ಭಾಗಗಳಿಂದ ಕಾಶ್ಮೀರದ ಶೈವರು, ಪಾಶುಪತಿಗಳು, ಸೌರರು, ಗಾಣಾಪತ್ಯರು, ಆರಾಧ್ಯರು ಎಂಬ ಭಿನ್ನ ಭಿನ್ನ ಪಂಥಗಳು ಬಂದು ಕರ್ಣಾಟಕದಲ್ಲಿ ಮನೆಮಾಡಿದುವು. ಇವುಗಳಲ್ಲೆಲ್ಲಾ ಒಂದು ಐಕಮತ್ಯವನ್ನುಂಟುಮಾಡಲೂ ಮತ್ತು ಉತ್ತಮ ಸಮಾಜವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಲೂ ಇವುಗಳೆಲ್ಲದರ ಸಾರವನ್ನು ಸಂಗ್ರಹಿಸಿ ಬಸವೇಶ್ವರರು ವೀರಶೈವ ಮತವನ್ನು ಸ್ಥಾಪಿಸಿದರು. ಇಷ್ಟೇ ಅಲ್ಲದೆ ಮಧ್ವಾಚಾರ್ಯರಿಂದ ಸ್ಥಾಪಿತವಾದ ದಾಸಕೂಟದವರೂ ತಮ್ಮ ವೈಷ್ಣವ ಪಂಥವನ್ನು ಜನಪ್ರಿಯವಾಗುವ ರೀತಿಯಲ್ಲಿ ಪ್ರಚಾರಪಡಿಸಿದ್ದರು.

ಇವೆಲ್ಲದರ ಪ್ರಭಾವ ಆ ಕಾಲದ ಸಾಹಿತ್ಯದ ಮೇಲೆ ಪರಿಣಾಮ ಬೀರದಿರಲಿಲ್ಲ. ಸಾಹಿತ್ಯರಚನೆಯ ಪ್ರಮಾಣ ಕಡಿಮೆಯಾಗದಿದ್ದರೂ ಕಾವ್ಯದೃಷ್ಟಿ, ಉದ್ದೇಶ, ಆಕಾರ ವ್ಯತ್ಯಾಸವಾಯಿತು. ಹೊಸ ಹೊಸ ಪಂಥದವರು ತಮ್ಮ ಧರ್ಮ ವನ್ನು ಸಾಮಾನ್ಯ ಜನಗಳಲ್ಲಿ ಪ್ರಚಾರಮಾಡುವುದಕ್ಕಾಗಿ ಭಾಷೆಯ ಬಿಗಿಯನ್ನು ಕಡಿಮೆ ಮಾಡಿ ಅವರಿಗೆ ತಿಳಿಯುವ ಸರಳ ಭಾಷೆಯಲ್ಲಿ ಹೊಸ ಸಾಹಿತ್ಯರೂಪಗಳನ್ನು ಕಲ್ಪಿಸಿ ಕೊಂಡು ಕೃತಿಗಳನ್ನು ರಚಿಸಲು ಮೊದಲುಮಾಡಿದರು. ಸ್ವಧರ್ಮದ ಶ್ರೇಷ್ಠತ್ವವನ್ನು ಸಿದ್ಧಾಂತಗೊಳಿಸುವ ಕೋಲಾ ಹಲದಲ್ಲಿ ಅನ್ಯಧರ್ಮದ ಅವಹೇಳನವು ಪರಮಾವಧಿಯನ್ನು ಮುಟ್ಟಿತು. ಈ ಕಾಲದ ಜೈನ ಕವಿಗಳು ಈ ತತ್ತ್ವಕ್ಕೆ ಅಪವಾದವೇನೂ ಅಲ್ಲ. ಅವರಿಗೆ ಮೊದಲಿದ್ದ ಧರ್ಮದ ಕಾವು ಬಹುಮಟ್ಟಿಗೆ ಕಡಿಮೆಯಾಯಿತು. ಪ್ರತಿಭೆಗೆ ಬದಲಾಗಿ ಪಾಂಡಿತ್ಯವು ಪ್ರಾಧಾನ್ಯವನ್ನು ಪಡೆಯಿತು. ಅವರು ಹಳೆಯ ಚಂಪೂ ಶೈಲಿಯನ್ನು ತಕ್ಷಣ ಬಿಡಲು ಸಾಧ್ಯವಾಗ ಲಿಲ್ಲ. ಶೈವ ವೈಷ್ಣವ ಮತಗಳ ಮಧ್ಯದಲ್ಲಿ ತಮ್ಮ ಮತದ ವೈಶಿಷ್ಟ್ಯಗಳನ್ನು ಸ್ಥಾಪಿಸುವುದಕ್ಕಾಗಿ ಅವರು ಪರಮತ ವನ್ನು ಅವಹೇಳನಮಾಡುವ ಅನೇಕ ಗ್ರಂಥಗಳನ್ನು ಬರೆಯ ತೊಡಗಿದರು. ಬಹು ಆಕರ್ಷಕವಾದ ಕಥಾಶೈಲಿಯಲ್ಲಿ ರಚಿತ ವಾಗಿರುವ ನಯಸೇನನ 'ಧರ್ಮಾಮೃತ'ವೂ ಬಹು ವ್ಯಂಗ್ಯ ವಿಡಂಬನಗಳಿಂದಕೂಡಿ ಹರಿತವಾದ ಭಾಷೆಯಲ್ಲಿ ರಚಿತ ವಾಗಿರುವ ವೃತ್ತವಿಲಾಸನ 'ಧರ್ಮಪರೀಕ್ಷೆ'ಯೂ ಬ್ರಹ್ಮಶಿವನ 'ಸಮಯಪರೀಕ್ಷೆ'ಯೂ ಈ ಜಾತಿಯ ಗ್ರಂಥಗಳು. ಇವುಗಳಲ್ಲಿ ಅಲ್ಲಲ್ಲಿ ಪ್ರಾಸಂಗಿಕವಾಗಿ ಕಾವ್ಯದ ಮಿಣುಕುಗಳು ಕಂಡು

ಬಂದರೂ ಇವುಗಳ ರಚನೆಯ ಉದ್ದೇಶ ಸಾಹಿತ್ಯರಸಾಸ್ವಾದನೆಯಲ್ಲ; ಧರ್ಮಸಂಸ್ಥಾಪನೆ.

ಲೌಕಿಕ ಗ್ರಂಥಗಳ ಧ್ಯೇಯ, ಸಾಧನೆಗಳಲ್ಲಿಯೂ ದೃಷ್ಟಿ ಮಾರ್ಪಾಡಾಯಿತು. ದೇಶದಲ್ಲಿ ಶಾಂತಿ ಸೌಭಾಗ್ಯಗಳ ಸ್ಥಾಪನೆಯ ಫಲವಾಗಿ ಪೌರುಷ ಪ್ರದರ್ಶನಕ್ಕೆ ಆವಶ್ಯಕತೆಯು ಕಡಿಮೆಯಾಯಿತು. ಅದರೊಡನೆಯೇ ಪ್ರಜೆಗಳಿಗೂ ಪಾಲಕರಿಗೂ ವೀರರಸ ಪ್ರತಿಪಾದನೆಯಲ್ಲಾಗಲಿ ಅನುಭವದಲ್ಲಿಯಾಗಲಿ ಉತ್ಸಾಹವು ಕಡಿಮೆಯಾಯಿತು. ರಾಜರೂ ಜನಗಳೂ ನಿಸ್ಸತ್ವರಾದರೆಂದು ಹೇಳಿದರೆ ಸತ್ಯದೂರವಾಗಲಾರದು. ಕವಿಗಳಂತೂ ತಮ್ಮ ಕಲಿತನಕ್ಕೆ ಪ್ರಾಶಸ್ತ್ಯವನ್ನು ಕೊಡಲಿಲ್ಲ. ವಿರಾಮಕಾಲದ ಸತ್ವಹೀನವಾದ ಮನಸ್ಸು ಸ್ವಭಾವವಾಗಿಯೇ ಶೃಂಗಾರದ ಕಡೆ ಹರಿಯಿತು. ಜನಜೀವನವು ಸಾಹಿತ್ಯದ ಮೇಲೆಯೂ ಸಾಹಿತ್ಯವು ಜನಜೀವನದ ಮೇಲೆಯೂ ಪರಸ್ಪರ ಪ್ರಭಾವಶಾಲಿಗಳಾಗಿರುವುದರಿಂದ ಆ ಕಾಲದ ಜನಗಳಿಗೆ ಬೇಕಾದ ಗ್ರಂಥಗಳನ್ನು ರಚಿಸಲು ಕವಿಗಳು ಉದ್ಯುಕ್ತರಾದರು.

ಕವಿಯ ಸ್ವವಿಷಯ

ನೇಮಿಚಂದ್ರನು ಈ ಯುಗದ ಪ್ರತಿನಿಧಿ. ಪ್ರಾಚೀನ ಕಾಲದಿಂದ ಬಂದ ಜೈನ ಕವಿಗಳ ಸಂಪ್ರದಾಯಕ್ಕನುಗುಣವಾಗಿ ಒಂದು ಧಾರ್ಮಿಕ ಗ್ರಂಥವನ್ನೂ ಒಂದು ಲೌಕಿಕ ಗ್ರಂಥವನ್ನೂ ಬರೆದಿದ್ದಾನೆ. 'ನೇಮಿನಾಥ ಪುರಾಣ' ಅಥವಾ 'ಅರ್ಧನೇಮಿ' ಎಂಬುದು ಧಾರ್ಮಿಕ ಗ್ರಂಥ. 'ಲೀಲಾವತಿ'ಯೇ ಲೌಕಿಕ ಗ್ರಂಥ. ಈತನು ತನ್ನ ಗ್ರಂಥಗಳಲ್ಲಿ ಪಂಪ ರನ್ನರಂತೆ ತನ್ನ ಕುಲ, ಗೋತ್ರ, ಗುರು, ತಂದೆ, ತಾಯಿ, ಮತ ಮೊದ

ಲಾದುವುಗಳ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಲೀಲಾವತಿಯ ಕೊನೆಯಲ್ಲಿ ಬರುವ

'ಅಂಬುಧಿವೇಷ್ಟಿತಾವನಿಗೆ ಲಕ್ಷ್ಮಣದೇವನೆ ರಾಜನೆಂದು ಲೋಕಾಂಬಿಕೆಯಪ್ಪ ಪುಣ್ಯಸತಿ ಚಂವಲದೇವಿಯೆ ದೇವಿಯೆಂದು ಸೇವ್ಯಂ ಬುಧನೇಮಿಚಂದ್ರನೆ ಕವೀಂದ್ರಂ' ಎಂದೂ

'ಧರೆಯಂ ರಕ್ಷಿಸುತಿರ್ಕೆ ಲಕ್ಕ ಬರಿಸಂ ಲಕ್ಷ್ಮೀಧರೋ-
ರ್ವೀಶ್ವರಂ
ಸಿರಿಯಂತಾತನ ತೋಳೊಳಿರ್ಕೆ ಸತತಂ ಶ್ರೀ ಚಂದ್ರಿಕಾದೇವಿ'

ಎಂದೂ ಹೇಳಿರುವುದರಿಂದ ಈತನು ಲಕ್ಷ್ಮಣರಾಜನ ಆಶ್ರಯದಲ್ಲಿ ಈ ಗ್ರಂಥವನ್ನು ರಚಿಸಿರಬೇಕು. ಸುಮಾರು ೧,೧೪೦ರಲ್ಲಿ ನೇಮಿನಾಥಪುರಾಣವನ್ನು ರಚಿಸಿರುವ ಕರ್ಣಪಾರ್ಯನು ತನ್ನ ಗ್ರಂಥಾಂತ್ಯದ ಪದ್ಯದಲ್ಲಿ 'ತಾರಾಚಳಪ್ರಸ್ಫುರಕೀರ್ತಿ ಶ್ರೀವಿಳಾಸಂ ಸಕಲಗುಣಗಣಾವಾಸನಾಗಿರ್ದ ಲಕ್ಷ್ಮೀಧರನಿಂ ಸಂಸಿದ್ಧಮಾದುದೀ ಕೃತಿ' ಎಂಬ ಭಾಗದಲ್ಲಿ ಇದೇ ಲಕ್ಷ್ಮೀಧರರಾಜನನ್ನೂ ಸ್ತೋತ್ರಮಾಡಿದ್ದಾನೆ. ಇವನು ಕಿಳಕಿಳದುರ್ಗಕ್ಕೆ ಅಧಿಪತಿಯಾದ ಗಂಗರಾದಿತ್ಯ ಶ್ರೀಭೂಷಣ ಇತ್ಯಾದಿ ಬಿರುದಾಂಕಿತನಾದ ಗೋಪಣ ಅಥವಾ ಗೋವರ್ಧನನೆಂಬುವನ ಎರಡನೆಯಮಗ. ಈತನ ಹೆಂಡತಿ ಚಂದಲದೇವಿ. ಕರ್ಣಪಾರ್ಯನ ಕಾಲದಲ್ಲಿ ಲಕ್ಷ್ಮೀಧರನು ಯುವರಾಜನಾಗಿದ್ದಿರಬೇಕು, ಅಲ್ಲದೆ ನೇಮಿಚಂದ್ರನು ತನ್ನ ನೇಮಿನಾಥ ಪುರಾಣವನ್ನು 'ಶ್ರೀಮತ್ಪ್ರತಾಪಚಕ್ರವರ್ತಿ' ವೀರಬಲ್ಲಾಳದೇವ ಪ್ರಸಾದಾಸಾಧಿತ ಮಹಾಪ್ರಧಾನ ಸೆಜ್ಜೆವಳ್ಳಪದ್ಮನಾಭದೇವಕಾರಿತಂ, ಎಂದು ಹೇಳಿಕೊಂಡಿದ್ದಾನೆ. ವೀರಬಲ್ಲಾಳನು ೧,೧೭೩ ರಿಂದ ೧,೨೨೦

ರವರಿಗೆ ಆಳಿದನು. ಇವನ ಮಂತ್ರಿಯ ಕಾಲವೂ ಅದೇ. ಡಾ|| ವೆಂಕಟಸುಬ್ಬಯ್ಯನವರ ಪ್ರಕಾರ ಸೌಂದತ್ತಿಯ ರಟ್ಟವಂಶಕ್ಕೆ ಸೇರಿದ ಇಬ್ಬರು ಲಕ್ಷ್ಮಣರಾಜರ ಹೆಸರು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಇವರಿಬ್ಬರೂ ವೀರಬಲ್ಲಾಳನ ಸಮಕಾಲೀನರು. ಮೊದಲನೆಯವನು ೧೧೯೦ ರಲ್ಲಿಯೂ ಎರಡನೆಯವನು ೧,೨೨೮ ರಲ್ಲಿಯೂ ರಾಜ್ಯವಾಳುತ್ತಿದ್ದರೆಂದು ಖಚಿತವಾಗಿದೆ. ಮೊದಲನೆಯವನ ಹೆಂಡತಿ ಚಂದಲದೇವಿಯಾದುದರಿಂದ ಅವನ ಆಶ್ರಯದಲ್ಲಿಯೇ ಅಂದರೆ ಸುಮಾರು ೧,೧೯೦ಕ್ಕೆ ಮುಂಚೆ ಲೀಲಾವತಿಯನ್ನೂ ಆಮೇಲೆ ವೀರಬಲ್ಲಾಳನು ಚಕ್ರವರ್ತಿಯಾದಮೇಲೆ ನೇಮಿನಾಥ ಪುರಾಣವನ್ನೂ ರಚಿಸಿರುವಂತೆ ಊಹಿಸಬಹುದು. ಪದ್ಮನಾಭನನ್ನು ಪ್ರತ್ಯಕ್ಷ ತೀರ್ಥೇಶ್ವರ ಎಂದು ಶ್ಲೇಷೆಯಿಂದ ಹೊಗಳಿದ್ದಾನೆ.

ನೇಮಿಚಂದ್ರನು ಚತುರ್ಭಾಷಾ ಪಂಡಿತ. ಅವನು ಕನ್ನಡ ಕವಿಗಳಲ್ಲಿ ಯಾರನ್ನೂ ಸ್ಮರಿಸಿಲ್ಲ. ಬಹುಶಃ ಅವರಾರೂ ಅವನ ಸ್ತೋತ್ರಕ್ಕೆ ಪಾತ್ರರಲ್ಲವೆಂದು ಅವನಿಗೆ ತೋರಿತೊ ಏನೊ ! ಪ್ರಾಚೀನರಲ್ಲಿ ಸಮಂತಭದ್ರಸ್ವಾಮಿಯ ಸಮ ವಿಷಮ ಕವಿತೆಯೂ ಅಕಲಂಕನ ವಿದ್ಯಾಮಹಿಮೆಯೂ ಪೂಜ್ಯಪಾದ ಸ್ವಾಮಿಯ ವಾಣೀವಿಲಾಸವೂ ತನಗೆ ಅಭಿಮತವೆಂದು ಹೇಳಿಕೊಂಡಿದ್ದಾನೆ. ಈತನ ಬಿರುದುಗಳು ಅಸಾಧಾರಣವಾದುವು. ವಿದಗ್ಧವಿದ್ಯಾಧರ, ಅಖಿಲಕಲಾಕೋವಿದ, ಉಚಿತ ಸಬುಧ ವಿದ್ಯಾಸದನ, ಕವಿಚಕ್ರವರ್ತಿ, ಭುವನಾಭರಣ, ಸುಕರಕವಿ–ಶೇಖರ, ತಾರ್ಕಿಕತಿಲಕ, ಮಾನಮೇರು, ಜಿನಶಾಸನದೀಪಕ, ಅಕಳಂಕ, ಭಾವುಕಮುಕುರ, ಕವಿರಾಜಮಲ್ಲ, ಅಪ್ರತಿಮಲ್ಲ, ಕಲಾಕಾಂತ, ಕವಿಧವಳ, ಶೃಂಗಾರಕಾರಾಗೃಹ, ಕವಿರಾಜ

ಕುಂಜರ, ಸಾಹಿತ್ಯವಿದ್ಯಾಧರ, ವಿದ್ಯಾವಧೂವಲ್ಲಭ, ಸುಕವಿಕಂಠಾಭರಣ, ವಿಶ್ವವಿದ್ಯಾವಿನೋದ, ಭಾರತೀಚಿತ್ತಚೋರ, ಕೃತಿಕುಲದೀಪ, ವಾಗ್ವಲ್ಲಕೀವೈಣಿಕ ಮೊದಲಾದವು ಅವುಗಳಲ್ಲಿ ಕೆಲವು. ಇವುಗಳೆಲ್ಲವೂ ಕವಿಯಿಂದ ಸ್ವಾರೋಪಿತನಾಮವೋ ಇತರರಿಂದ ಕೊಡಲ್ಪಟ್ಟವೋ ಹೇಳುವುದಕ್ಕಾಗುವುದಿಲ್ಲ.

ಸತ್ಕವಿಗಳ ಅಸಾಧಾರಣಶಕ್ತಿಯ ವಿಷಯದಲ್ಲಿ ಆತನಿಗಿದ್ದ ಅಭಿಪ್ರಾಯ ಅಮೋಘವಾದುದು. ಅವರು ಅಘಟನಘಟನಾಸಾಮರ್ಥ್ಯವುಳ್ಳವರೆಂಬುದು ಅವನ ಮತ.

ದಿಟ್ಟಗೆ ಬಂದ ಕೋಮಳಗುಣಂ [1]ಗೆಡೆಗೊಂಡಿರೆ[1], ಪೂವಿನಂತಿರಾ
ಯ್ದಿಟ್ಟ ಪದಂ, [2]ಬೆಡಂಗೆನಿಸೆ[2] [3]ಬಣ್ಣಸರಂ[3] ಪೊಸತಾಗೆ ನುಣ್ಪು+ಒಡಂ
ಬಟ್ಟಿರೆ ಬಂಧಂ+ಒಂದೆ ಚತುರಾಳಿ ಕರಂ ಬಸಮಾಗೆ ಬಾಸಿಗಂ
ಗಟ್ಟುವನಂತೆ ಕಟ್ಟುವುದು ಕಬ್ಬಮನುಬ್ಬಣಮಾಗೆ ಕಬ್ಬಿಗಂ.

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ, ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ, ಹರನಂ ನರನೊತ್ತಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ, ಕವಿಗಳ ಕೃತಿಬಂಧಮೊಳಲ್ತೆ ಕಟ್ಟಿದರ್

1. ಹೊಂದಿಕೊಂಡಿರಲು 2. ಮನೋಹರವಾಗಿರಲು 3. ಅಕ್ಷರ ಸಮೂಹ.

ಮುಟ್ಟಿದರೊತ್ತಿಮೆಟ್ಟಿದರದೇನಳವಗ್ಗಳವೋ ಕವೀಂದ್ರರಾ

[1] ಮರನೀಗುಂ [2] ಮಣಿ[2]ಯೀಗುಂ+ಒಂದು [3] ಪಶುವೀಗುಂ
ಕೇಳಿಮೆ[4]ಂದೋಳಿಯೊಳ್
ಪುರುಡಂ ಪುಟ್ಟಿಸಿ ಕಾವ್ಯಮಂ ಕೊನರಿಪರ್, ಕಲ್ಲಲ್ಲಿ
ನಾರೆತ್ತುವರ್
[5] ಮರುಳಂ ಪೋ [6]ಪುರುಳಾಗಿಪರ್, ಕಿವಿಗಳೊಳ್
[7] ಪೀಯೂಷಮಂ ಪಿಂಡಲ್+[8] ಉ
ರ್ವರೆಯೊಳ್ ಸಂದ ಕವಿ [9]ಪ್ರವೇಕರ ವಲಂ ಬಲ್ಲರ್
ಪೆಱರ್ ಬಲ್ಲರೆ? ||

ಕಮಳಕ್ಕಾವಗಮಲ್ತು ಲಕ್ಷ್ಮಿಯಿರವು+ [10]ಆಸ್ಯಾಬ್ಜಕ್ಕ
ಮುಂಟು+ಅಗ್ಗದ+ಇಂ
[11] ಪಮರ್ದಿಂಗೆ+[12] ಒಚ್ಚತ ಮಲ್ತು ಮತ್ತಿವರ
[13] ವಾಕ್ಪೀಯೂಷ ಪೂರಕ್ಕಮುಂ
ಟಮರರ್ಗರ್ಪಿತಮಲ್ತು ಸೌಖ್ಯಮಿವರೀ ಸಂಸೇವ್ಯ
ಕಾವ್ಯಂಗಳಂ
ಸಮಸಂದಾಲಿಸುವರ್ಗಮುಂಟೆನಿಪರೀಗೆ+ಒಳ್ಪಂ
ಕವೀಂದ್ರೋತ್ತಮರ್

[14]ಕುವಳಯದಲರಂ, [15] ಕೌಮುದಿ
ಯ ವಿಭವಮಂ ಕಂಡು ಕೊಂಡು ಕೊನೆವಂ ಕವಿಯೊ

---

1. ಕಲ್ಪವೃಕ್ಷ, 2. ಚಿಂತಾಮಣಿ, 3. ಕಾಮಧೇನು, 4. ಸಮೂಹ 5. ದಡ್ಡ, ಹುಚ್ಚ, 6. ಸತ್ವಶಾಲಿ, 7. ಅಮೃತ, 8. ಭೂಮಿ, 9. ಶ್ರೇಷ್ಠ, 10. ಮುಖ ಕಮಲ, 11. ಅಮೃತಕ್ಕೆ, 12. ಸಮನ್ವಯ, 13. ಮಾತೆಂಬ ಅಮೃತ, 14. ಕನ್ನೈದಿಲೆಯ ಹೂವು 15. ಬೆಳುದಿಂಗಳು.

ರವಿಯೊ, ರವಿ ಕಾಣದುದಂ
ಕವಿ ಕಾಣ್ಬನೆನಿಪ್ಪ ವಚನಮೇಂ ತಪ್ಪುಗುಮೇ

ಎಂದು ಸವಾಲ್ ಹಾಕುವನು.

ಶ್ರಿಯನೊಲಿಸುವೊಡೆ, ತಾಂ ಕವಿ
ನಾಯಕನೆನಿಸುವೊಡೆ, ತನ್ನ ಕೃತಿ ಕಲ್ಪಾಂತ
ಸ್ಥಾಯಿಯೆನಿಸುವೊಡೆ, ಬಲ್ಲರ
ಬಾಯಂ ಪೊಕ್ಕೋದಿ ಕಲ್ಗೆ ಕವಿ ಸಕಲಮುಮಂ

ಎಂದು ಬುದ್ಧಿವಾದ ಹೇಳುವನು. ಕವಿತ್ವದ ವಿಷಯದಲ್ಲಿ ಅವನಿಗಿದ್ದ ಪೂಜ್ಯ ಭಾವನೆಯಂತೂ ಅನ್ಯಾದೃಶವಾದುದು.

[1] ಕಡುಕಂಪಂ ಪಿಡಿಕಯ್ಯಲಕ್ಕುಮೆ, ಬಟಲ್ದೈತಂದ ತಂಗಾಳಿಯಂ
ಪಿಡಿಯಲ್ ಬರ್ಕುಮೆ, [2] ತೃಷೆಗೊರ್ಕುಡಿತೆಯಿಂ ಕೊಂಡಚ್ಚವೆಳ್ದಿಂಗಳಂ
ಕುಡಿಯಲ್ ಬರ್ಕುಮೆ, ಕೊರ್ವಿತೆಂದು ತರುಣೀ ಸಂಭೋಗ ಸೌಖ್ಯಂಗಳಂ
ನುಡಿಯಲ್ ಬರ್ಕುಮೆ, ಬಾರದು+ಇಂತುಟಿವಲಂ ಕಾವ್ಯಾಮೃತಾಸ್ವಾದನಂ

ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋೞ್ಪಂ
ಬೆಲೆಗೊಟ್ಟು ತಾರ [3] ಮಧುವಂ
[4] ಮಲಯಾನಿಲನಂ ಮನೋಜನಂ ಕೌಮುದಿಯುಂ

---

1. ತೀವ್ರವಾದ ವಾಸನೆ, 2. ಬಾಯಾರಿಕೆ, 3. ವಸಂತ, 4. ಮಲಯ ಪರ್ವತದ ಗಾಳಿ.

ಕವಿ ಕಾಂಚನ [1]ಕಣಿಕೆಗೆ[1] ಮಾ
ಱುವನೇಕೆಯೊ ಮರುಳನ್ +[2] ಅಳಿಗೆ ಮಾಣಿಕಮುಂ ಮಾ
ಱುವ ತೆಱದಿನೀ ಚತುರ್ದಶ
ಭುವನಮೆ ಬೆಲೆಯೆನಿಪ ಕೃತಿಯನಮಳಾಕೃತಿಯಂ ||

ಎಣಿಸದೆ ಗುಣಮುಂ ಗಾಜಿಗೆ
ಮಣಿಯಂ ಮಾಱುವ ವೊಲಹಹ ನಿನಗಂ ತನಗಂ
ಪಣಕೆ ಕೃತಿಯೆಂಬ ಚಿಂತಾ
ಮಣಿಯಂ ಮಾಱುವನ ಬುದ್ಧಿಗಾಂ ಬೆಱಗಾದೆಂ ||

ನಿಧಿ ದೊರೆಕೊಂಡೊಡಂ [3]ಬರವಿ[3]ಗಂಜುವರೇ ಮಿಗೆ
ಮುಗ್ಧರುಂ [4] ಸುಧಾಂ
ಬುಧಿ [4] ದೊರೆಕೊಂಡೊಡೇನೊಱೆವುದೋಡುವುರೇ
ಸಕಲಾರ್ಥ ಸಂಭವಾ
ವಧಿ ಜಿನರಾಜ ರಾಜಿತ ಕಥಾಕಥನಂ ದೊರೆಕೊಂಡೊಡಂ ಪಣ
ಕ್ಕಧ ಮರನಣ್ಣ ಬಣ್ಣಿಪರೆ ಚಾರು ವಿಚಾರಪರರ್ ಕವೀಶ್ವರರ್ ||

ಎಂದು ವಿಚಾರಪರನಾಗುವನು. ತಾನು ಚತುರ್ಭಾಷಾ ಪಂಡಿತನೂ ಸತ್ಕವಿಮಾರ್ಗದಲ್ಲಿ ಒಳಪೊಕ್ಕು ಸಾರಗ್ರಹಣ ಮಾಡಿದವನೂ ಆದುದರಿಂದ ತನ್ನ ಕೃತಿಗಳ ವಿಷಯದಲ್ಲಿಯೂ ತನ್ನ ಶಕ್ತಿ ಸಾಮರ್ಥ್ಯಗಳ ವಿಷಯದಲ್ಲಿಯೂ ಆತನ ಅಭಿಮಾನ ಬಲು ಹಿರಿದು.

ಪಿರಿದನುರಾಗದಿಂದೋದುವರ ನಾಲಗೆಗಳ್ಗೆ+ಅ
ಮರ್ದಾದುದು+ಒಲ್ದು ಕೇ

1 ಕಾಸು, ನಾಣ್ಯ. 2 ಮಜ್ಜಿಗೆ. 3 ಕ್ಷಾಮ. 4 ಅಮೃತ ಸಮುದ್ರ.

ಶ್ವರ ಕಿವಿಗಳ್ಗೆ ಮಾಣಿಕದ ಮಂಜರಿಯಾದುದು
ಭಾವಿಸುತ್ತಮಿ
ರ್ಪರ ಬಗೆಗಳ್ಗೆ ಪೊಚ್ಚ[1]ಪೊಸವೇಟವ[5] ಪೆಣ್ಣ ವೊಲಾದುದು+
ಇಂಪಿನಿಂ
ಸುರುಚಿರ ಕಾಂತಿಯಿಂ ಸೊಬಗಿನಿಂದೆಸೆವೀ ಕೃತಿ
ನೇಮಿಚಂದ್ರನಾ ||

ಸಾತಿಶಯಾರ್ಥಮುಮಂ ನ,
ಲ್ವಾತುಮನೊಪ್ಪಿಸಿದರ್+ಒಸೆದು ತಮಗಿಲ್ಲಮದಂ
ಖ್ಯಾತಂಗೆ ಸುಕವಿ ನೇಮಿಗೆ
ಭೂರಿಭವದ್ಭಾವಿ ಕವಿಗಳೇನೊಳ್ಳಿದರೋ ?

ಯುವತಿ ಸರಸತಿ ಪುರಾತನ
ಕವಿರಮಣನನಱಿವಳಿಲ್ಲ ನಿರ್ಮಳ[2] ದಶನ
ಚ್ಛವಿ ಕುಸುಮಿತ ರಸನಾಪ
ಲ್ಲವತಲ್ಪ[2]ದೊಳಿರ್ದು ಸುಕರಕವಿಶೇಖರನಾ |

ಚತುರರೆರ್ದೆಯಿಂದ ಮಿಱಿಯುಳ್
ಸ್ತುತಿಯಿಂ ನಾಲಗೆಯನಗಲಳೆಂದುಂ ತನ್ನೀ
ಕೃತಿಕಾಂತೆ ನಿಜಕಳಾಕುಶ
ಲತೆಯಿಂ ಮತ್ತೆಂತು ಮೆಱೆವನೋ ಕವಿಧವಳಂ ||

[3]ಓತರ ಗೆಯ್ತ[3]ದಂತೆ ರಸಭಾವಮೊಡಂಬಡೆ [4]ನಲ್ಲರ[4]ಟ್ಟಿದೊ
ಳ್ಮಾತುಗಳಂತೆ ಮಾತುಗಳೊಳಿಂಪು+ಒಸಱುತ್ತಿರೆ
ಕಾವ್ಯಭೂಷಣಾ

---

1 ಹೊಸ ಪ್ರೇಮ. 2 ಹಲ್ಲಿನ ಕಾಂತಿಯಿಂದ ಕುಸುಮಿತ (ಬೆಳಗುತ್ತಿರುವ)ವಾದ ನಾಲಗೆಯೆಂಬ ಚಿಗುರಿನ ಹಾಸಿಗೆ. 3 ಪ್ರೀತಿಪಾತ್ರರಾದವರ ಕಾರ್ಯ 4. ಪ್ರಿಯರು.

ರ್ಥಾತಿಶಯಂ ಪ್ರಿಯರ್ ತುಡಿಸಿದರ್ಥವಿಭೂಷಣದಂತಿ
ರೊಪ್ಪೆಪೇ
ಚ್ಚಾತನದಾರೊ ನಾನಱಿಯೆನೆಂತಿನಿಯಂ ರತಿರಾಗದೋಹಳಂ

ಇನ್ನು ಕವಿವ್ರಜಂ ಪಡೆಯಲೀ ಪೊಸದೇಸೆಯನೀ ಸದರ್ಥಮಂ
ಮುನ್ನಿನ ಸತ್ಕವೀಶ್ವರರ್ಗಮೇಂ ದೊರಿಕೊಂಡುದೆ ಕೂಡೆ
ಬಿನ್ನಣಂ
ಸನ್ನಿದ [1]ಮಾದುದಕ್ಕರದ[1]ಮರ್ಕೆಯಿನೀ ಕೃತಿಯಂ
ಕೃತಾರ್ಥನೊ
[2]ಲ್ದಿನ್ನನೊ ಪೇೞ್ದನೇನಱಿಯ ನಮ್ಮರಸಂ ಕವಿರಾಜಕುಂಜರಂ

ಈಯಂದದಿನತಿಚತುರ
ಸ್ತ್ರೀಯರುಮತಿಚತುರ ಕವಿಗಳುಂ ಕೇಳ್ದೊಲವಿಂ
ಬಾಯಂಬಿಡುತಿರೆ ಕರ್ಣರ
ಸಾಯನಮೆನೆ ಪೇೞ್ವನೆಸೆಯೆ ಲೀಲಾವತಿಯಂ

ಇದು ಲೀಲಾವತಿಯ ರಚನೆಗೆ ಪ್ರೇರಣೆ ದೊರಕಿದ ವಿಷಯ. ನೇಮಿನಾಥ ಪುರಾಣಕ್ಕಂತು ಇನ್ನೂ ಮಿಗಿಲಾದ ಪ್ರಚೋದನೆಯುಂಟಾಯಿತಂತೆ.

ನವರಸಪೂರ್ಣದೊಳ್ ಲಲಿತಬಿಂಬಿತಸರ್ವಪದಾರ್ಥದೊಳ್
ಮಹಾ
ಕವಿಕುಲ ಸೇವ್ಯದೊಳ್ ಲಸದಳಂಕೃತಿ [3]ಕಂಜನಿವಾಸ[3]ದೊಳ್
ಜನೋ

1. ಸೇರುವಿಕೆ, ಹೊಂದಾಣಿಕೆ 2. ಎಂತಹವನೊ 3. ಸರೋವರ

ತ್ಸವಕರದೊಳ್ ಸರಸ್ವತಿ ಮನೋಮುದದಿಂ ಜಲಕೇಳಿ
ಯಾಡುವಳ್
ಪ್ರವಿಮಳ [1]ನವ್ಯಕಾವ್ಯಕಮಳಾಕರ[1]ದೊಳ್ ಕವಿರಾಜ
ಮಲ್ಲನಾ ||

ಧರೆ ಲೇಸೆಂಬಾಸೆಗಾಱಂ ಪರಪುರುಷಗುಣಾನ್ವೇಷದೊಳ್
[2]ಸೈಪುಗಾಱಂ[2]
ಸಿರಿಯೊಳ್ ಕಟ್ಟ[3]ಣ್ಮುಕಾಱಂ[3] ವಿತತ ವಿತರಣೋತ್ಸಾಹ
ದೊಳ್ [4]ಗೆಲ್ಲಕಾಱಂ
ಪರವಾದಿವ್ರಾತದೊಳ್ ಬಿತ್ತರಿಪ [5]ತುಱಿಪಕಾಱಂ[5] ಮಹಾ
ಧರ್ಮದೊಳ್ [6]ಮ
ಚ್ಚರಕಾಱಂ[6] ಭಾವಕೋತ್ಪಾದಕ ರಸಿಕಕವಿಸ್ತೋಮದೊಳ್
ನೇಮಿಚಂದ್ರಂ ||

ರುಚಿರಕಲಾಧರನಿಂ ನೇ
ಮಿಚಂದ್ರನಿಂ ಸತ್ಕವೀಶಚೂಡಾಮಣಿಯಿಂ
ಶುಚಿಪದ [7]ಶಶಿಕಾಂತೋಪಲ[7]
ನಿಚಯಂ [8]ರಸಮೊಸರುತಿರ್ಪುದೇನ[8]ಚ್ಚರಿಯೋ

ರಸಮೊ ರಸಾಯನವೋ ಶ್ರುತಿ
ವಸಂತಮೊ ಕಿವಿಗಳಮೃತವೋ ನೇಮಿಯ ವಾಕ್
ಪ್ರಸರಮುದದೆಸಕದಿಂ [9]ನಿ
ಪ್ಪೊಸತಾ[9]ದುದು ಜಗಕ್ಕೆ ನೇಮಿನಾಥ ಪುರಾಣಂ

1. ಹೊಸ ಕಾವ್ಯವೆಂಬ ಸರೋವರ. 2. ಅದೃಷ್ಟಶಾಲಿ 3. ಪರಾಕ್ರಮಿ 4. ಜಯಶಾಲಿ 5. ಆತುರವುಳ್ಳವನು 6. ಸ್ಪರ್ಧೆಯುಳ್ಳವನು 7 ಚಂದ್ರಕಾಂತಶಿಲೆ 8. ರಸವನ್ನು ಸ್ರವಿಸುತ್ತಿರುವುದು 9. ಬಹು ಹೊಸದು.

ಎಂದು ಗುರು ಜನವು ಪರಸಿ ಹೊಗಳಲಾಗಿ ನೇಮಿನಾಥ ಪುರಾಣವನ್ನು ರಚಿಸಿದನಂತೆ. ಈ ಹೊಗಳಿಕೆಯ ವಾಸ್ತವಾಂಶವನ್ನು ಮುಂದೆ ಆತನ ಕಾವ್ಯ ಪರಿಚಯವಾದಮೇಲೆ ವಿಮರ್ಶಿಸತಕ್ಕ ವಿಷಯ.

ಲೀಲಾವತಿ

ಮೊದಲೇ ತಿಳಿಸಿರುವಂತೆ 'ಲೀಲಾವತಿ' ನೇಮಿಚಂದ್ರನ ಪ್ರಥಮಕೃತಿ. ಇದೊಂದು ಲೌಕಿಕಕಾವ್ಯ. ಶೃಂಗಾರರಸಪ್ರಧಾನವಾದ ಒಂದು ಕಟ್ಟುಕತೆ. ಇಂತಹ ಕೃತಿಗಳು ಕನ್ನಡದಲ್ಲಿಯಾಗಲಿ ಅದಕ್ಕೆ ಆಕರವೂ ಪ್ರೇರಕವೂ ಆದ ಸಂಸ್ಕೃತ ಭಾಷೆಯಲ್ಲಿಯಾಗಲಿ ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಬಹುಕಾಲದವರೆಗೆ ಕನ್ನಡ ಸಾಹಿತ್ಯದ ಧಾರ್ಮಿಕ ಕ್ಷೇತ್ರದಲ್ಲಾಗಲಿ ಲೌಕಿಕ ಕ್ಷೇತ್ರದಲ್ಲಾಗಲಿ ಶೃಂಗಾರರಸಕ್ಕೆ ಐಹಿಕಾಮುಷ್ಮಿಕ ದೃಷ್ಟಿಯಿಂದ ಪರಮೋಚ್ಚಸ್ಥಾನವೇನೂ ಲಭಿಸಿರಲಿಲ್ಲವೆಂದು ಕಾಣುತ್ತದೆ. ಆದುದರಿಂದಲೇ ಪೂರ್ಣವಾಗಿ ಶೃಂಗಾರರಸಮಯವಾದ ಪ್ರತ್ಯೇಕ ಗ್ರಂಥ ಕನ್ನಡದಲ್ಲಿ ಹೇರಳವಾಗಿಲ್ಲದಿರಬಹುದು. ಈ ಶಾಖೆಯಲ್ಲಿ ಹಿಂದಿನ ಸಂಪ್ರದಾಯವನ್ನೂ ಸ್ವಲ್ಪ ಒತ್ತೆಗಿಟ್ಟು ಕನ್ನಡದಲ್ಲಿಯೂ ಮೊದಲು ಕತೆಯನ್ನು ರಚಿಸಿದವನು ಒಂದನೆಯ ನಾಗವರ್ಮ. ಈತನು ಹತ್ತನೆಯ ಶತಮಾನದ ಅಂತ್ಯಭಾಗದಲ್ಲಿ ಸಂಸ್ಕೃತ ಗದ್ಯರೂಪದಲ್ಲಿದ್ದ ಬಾಣನ ಕಾದಂಬರಿಯನ್ನು ಕನ್ನಡ ಚಂಪೂರೀತಿಯಲ್ಲಿ ಬಹಳ ಯಶಸ್ವಿಯಾಗಿ ರಚಿಸಿದನು. ಇವನ ದಾರಿಯನ್ನೇ ಹಿಡಿದು ನೇಮಿಚಂದ್ರನು ತನ್ನ ಲೀಲಾವತಿಯೆಂಬ ಕಥೆಯನ್ನು ಕನ್ನಡ ಚಂಪೂಮಾರ್ಗದಲ್ಲಿ ಬರೆದಿದ್ದಾನೆ.

ಲೀಲಾವತಿಯ ರಚನೆಯಲ್ಲಿ ಕವಿಯೇ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.

ಸ್ತ್ರೀರೂಪವೆ ರೂಪಂ ಶೃಂ
ಗಾರವೆ ರಸಂ+ಅತುಳ ಸುರತ ಗಂಧವೆ ಗಂಧಂ
ಸಾರಸ್ಪರ್ಶಂ ಗುರುಕುಚ
ಭಾರಸ್ಪರ್ಶಂ ಗಳಪ್ರಶಬ್ದವೆ ಶಬ್ದಂ

ಎಂಬ 'ಉನ್ನತಾದರ್ಶ'ವನ್ನು ಹೊಂದಿ 'ಶೃಂಗಾರಮಂ ಕಾವ್ಯಬಂಧನದೊಳ್ ಸೆಱೆಗೆಯ್ದ ಮೆಯ್ಮೆ ತನ್ನದು' ಎಂದು ಹೊಗಳಿಕೊಂಡು ಅದಕ್ಕನುಗುಣವಾಗಿಯೆ '[1]ಅಂಗಭವ[1]ನಂ ಭವಸಾರನನ್ [2]ಆರ್ದು[2] ಸುಟ್ಟ ಭೂತೇಶನ ಬುದ್ಧಿಗುದ್ದವಱಿದಾಂ ಪೊಗಱೆಂ; ಪೊಗೞ್ವಂ ಮನೋಜನಂ [3]ಕೇಸುರಿ[3]ಯಂತುರ್ಬಿ....ಕಾಸಿ [4]ಕಪಾಲಿ[4]ಯಂ ಪಿಡಿದೊಱ[5]ಲ್ದರಿವೆಣ್ಣ[5]ನೆ ಮಾಡಿಬಿಟ್ಟನಂ' ಎಂದು ಮನ್ಮಥ ಪ್ರಾರ್ಥನೆಯಿಂದಲೆ ಕಥೆಯನ್ನು ಪ್ರಾರಂಭಿಸುವನು. ಮಹಾಕಾವ್ಯ ಸಹಜವಾದ ಅಷ್ಟಾದಶವರ್ಣನೆಗಳನ್ನು ಬಿಟ್ಟರೆ ಕಥಾಸೂತ್ರವನ್ನು ಮುಂದಿನ ರೀತಿಯಲ್ಲಿ ಸಂಗ್ರಹಿಸಬಹುದು.

ಭೂಮಂಡಲದಲ್ಲಿ ಪ್ರಖ್ಯಾತವಾದ ಜಯಂತೀಪುರವೆಂಬ ಪಟ್ಟಣದಲ್ಲಿ ಚೂಡಾಮಣಿಯೆಂಬ ರಾಜನಿದ್ದನು. ಆತನ ಹೆಂಡತಿ ಪದ್ಮಾವತಿ. ಅವರಿಬ್ಬರಿಗೂ ಕಂದರ್ಪದೇವನೆಂಬ ಕುಮಾರನು ಜನಿಸಿದನು. ಅವನ ರೂಪು ಪರಮಮೋಹಕವಾದುದು.

---

1 ಮನ್ಮಥ 2 ಆರ್ಭಟಮಾಡಿ 3 ಕೆಂಪಿನ ಉರಿ 4 ಈಶ್ವರ 5 ಅರ್ಧ ಹೆಂಗಸು, ಅರ್ಧನಾರೀಶ್ವರ

ನಿಡುಗಣ್ ಪದ್ಮದಳೋಪಮಂ ಸ್ಮಿತಮುಖಂ
ಚಂದ್ರೋಪಮಂ ತೋಳ್ಗಳ
ಪ್ಪೊಡೆ [1]ದಿಙ್ನಾಗಕರೋ[1]ಪಮಂಗಳ್+ಉರಮುಂ ಶ್ರೀರತ್ನ
ಪೀಠೋಪಮಂ
ಪೊಡೆ ರಂಭಾಲಲಿತೋಪಮಂ ಪದಯುಗಂ [2]ಕೂರ್ಮೋ[2]ಪಮಂ
ತಾನದಾ
ದೊಡಮೇಂ ರೂಪು ವಿಚಾರಿಪಂದನುಪಮಂ
ಶ್ರೀರೂಪಕಂದರ್ಪನಾ ||

ಲಲನೆಯರಾತನಂ ಬಯಸಿ ನೋಡಲೊಡಂ
ಮದನಾಗ್ನಿದಾಹಮ
ಗ್ಗಳಿಸದೆ ಮಾಣದೆಂದು ಕೃಪೆಯಿಂ ಪಡೆದಂ ಬಿದಿ
ಚಂದ್ರಬಿಂಬಮಂ
[3]ಮಳಯಜ[3]ಮಂ [4]ಮೃಣಾಳ[4]ಕುಳಮಂ ಕೊಳನಂ
[5]ಲತಿಕಾಗೃಹಂ[5]ಗಳಂ
[6]ತಳಿರ್ಗ[6]ಳನೆಂದೊಡಂದಮನದೇವೊಗಳ್ವೆಂ ಕವಿತಾ
ವಿಲಾಸನಾ ||

ಜನತಾನಂದೈಕನೇತ್ರಂ ಪ್ರಿಯಮಧುಸಮಯಂ
ರೂಪಕಂದರ್ಪದೇವಂ
ಮುನಿಸಿಂ ಚಾಪಕ್ಕೆ ಕೈನೀಡಿದೊಡೆ ನಡುಗುವರ್
ಪೊಕ್ಕು ನೀರೊಳ್ ಪೊರಳ್ವರ್

---

1. ದಿಗ್ಗಜಗಳ ಸೊಂಡಿಲು 2. ಆಮೆ 3. ಶ್ರೀಗಂಧ 4. ತಾವರೆಯ ದಂಟು 5. ಬಳ್ಳಿಮನೆ 6. ಚಿಗುರು

ವನವಮಂ ಸಾರ್ದಿರ್ಪರೆಂದುಂ ತಳಿರನುಡುವರ್
ಅಂಭೋಜವಮಂ ಪಾಸುವರ್ ಬೆ
ಚ್ಚನೆ ಸುಯ್ವರ್ [1]ಪ್ರಾಜ್ಯರಾಜ್ಯಾಂಗನೆ[1]ಯ ವಿರಹದಿಂ
[2]ವೈರಿವೀರಾವನೀಶರ್[2] ||

ಇಂತಹ ರಾಜಕುಮಾರನು ಯೌವ್ವನ ಪ್ರಾದುರ್ಭಾವದಲ್ಲಿ ಯುವರಾಜ ಪದವಿಯನ್ನು ಪಡೆದು ಒಂದು ದಿನ " ಚಂದ್ರೋದಯದೊಳ್ [3]ಪುರಪುರಂಧ್ರೀಜನ[3]ದ ಚಂದ್ರಿಕಾಮಹೋತ್ಸವಮಂ ನೋಡಲುತ್ಸುಕನಾಗಿ ನಾಗರಿಕ ವಿಟವಿದೂಷಕ ಪೀಠಕರುಮತಿಚತುರನಪ್ಪಮಕರಂದನುಂ ಬೆರಸು ಅರಮನೆಯುಂ ಪೊಱಮಟ್ಟು ವೇಶ್ಯಾವಾಟಮಂ ಮುಟ್ಟೆವಂದು ಅಂತಪ್ಪಾರಾತ್ರಿ ಸಂಭೋಗಮನತಿ ಮುದದಿಂ ನೋಡಿಯುಂ ನಿರ್ವಿಕಾರ ಸ್ವಾಂತಂ" ರಾಜಾಲಯಕೆ ತಿರುಗಿ

ಶ್ರೀಪತಿ [4]ಫಣಿಶಯ್ಯೆ[4]ಗೆ ಗಂ
ಗಾ[5]ಪುಳಿನತಳ[5]ಕ್ಕೆ ದಿವಿಜವಾರಣಹಂಸಂ
ಪೋಪಂತೆ ಪೋಗಿ ಕೃತಿಕುಲ
ದೀಪಂ ಪವಡಿಸದನಮಳಶಯ್ಯಾತಳದೊಳ್

ಕುಮಾರನು ನಿದ್ರಾಂಗನಾಸಂಗದಿಂದ ಪರವಶನಾಗಿ ಮಲಗಿರಲು

---

1. ಉತ್ತಮಳಾದ ರಾಜ್ಯಲಕ್ಷ್ಮಿ 2. ಪರಾಕ್ರಮಶಾಲಿಗಳಾದ ಶತ್ರು ರಾಜರು 3. ಪಟ್ಟಣದ ಸ್ತ್ರೀಯರು 4. ಹಾವಿನ ಹಾಸಿಗೆ 5. ಮರಳಿನ ದಿಬ್ಬ

ಪಿರಿದುಂ ಕಣ್ಣಿಂ ಮುನ್ನಂ
ನೆರೆದುದು ತವಕದೊಳೆ ಚಿತ್ತವೆನೆ ಕನಸಿನೊಳಾ
ದರಿಸಿ ಪದಿನಾಱು ಬರಿಸದ
ಹರೆಯದ ಕನ್ನಿಕೆಯನವನಿಪಾಲಂ ಕಂಡಂ

[1]ಕರುವಿಟ್ಟಂ[1] ಕಾಮದೇವಂ ರತಿಯತಿಶಯದಿಂ
ಬಣ್ಣಮಿಟ್ಟಳ್ ಬಸಂತಂ
ಬರೆದಂ ಸರ್ವಾಂಗಮಂ ಕಣ್ದೆಱೆದನೊಸೆದು [2]ಶೀತಾಂಶು[2]
ಚೈತ್ರಾನಿಳಂ ತೀ
ವಿರೆ [3]ಜೀವಂಬೊಯ್ದ[3]ನಂತಲ್ಲದೊಡೆ ಸೊಗಯಿಪೀ
ರೂಪಮೀ ಬಣ್ಣಮೀ ಮೆ
ಯ್ಸಿರಿಯೀ [4]ಕಣ್ಚೆಲ್ವ[4]ಮೀ ಭಾವಕಮೊಗೆಯದೆನಲ್ ಕಾಂತೆ
[5]ಕಣ್ಗೆಡ್ಡಮಾದಳ್[5] ||

ಸ್ವಪ್ನವೊಡೆಯಿತು, ಎಚ್ಚರವಾಯಿತು. ಕನ್ಯೆ ಕಾಣದಾದಳು.

ಅಂಗಂಗಳೊಳುಟಿದಳೊ ಕರ
ಣಂಗಳ್ ತಮ್ಮೊಳಗೆ [6]ಪಚ್ಚುಗೊಂಡವೊ[6] ಚಿತ್ತಂ
ನುಂಗಿದುದೊ ಪೇಱನಲ್ಕೆ+ಆ
ಗಂಗನೆಯಂ ಕಾಣದರಸನಿದು ಕನಸೆಂದಂ.

ಬೆದಱಿದ ಮನಮಂ ಸಂತೈ
ಸಿದನೊಯ್ಯನೆ ವಿಕಳಮಾದ ಸಕಳೇಂದ್ರಿಯಮಂ

---

1. ಚಿತ್ರಿಸು, ಕೊರೆ, ಲೇಪ್ಯಕರ್ಮ ಮಾಡು 2. ಚಂದ್ರ 3. ಪ್ರಾಣವನ್ನು ಹೊಯ್ದು 4. ಸೌಂದರ್ಯ 5. ಕಣ್ಣಿಗೆ ಮನೋಹರಳಾದಳು. 6 ಭಾಗಮಾಡಿಕೊಂಡವೊ.

[1] ಪದುಳಿಸಿದಂ[1] [2] ಪಾಡಟಿದ
ಳ್ಕಿದ ತನ್ನನೆ ತಾನೆ ಪೊಸತುಮಾಟ್ಪೊಲರಸಂ

ಆದರೂ ವಿರಹವು ಅಸಹನೀಯವಾಯಿತು.

[3] ಪೆಱತು[3] ನುಡಿ ಪೆಱತು ಭಾವನೆ
ಪೆಱತೆಸಕಂ ಪುಗದು ತರುಣಿ [4]ತೀವಿದ[4] ಮನದೊಳ್
ಪೆಱತೇಂ ತನ್ನ ಮನಂದೇಂ
ಮಱೆದನೊ ಪರವಶತೆಯಿಂದ ವಿತರಣಮುಗ್ಧಂ.

ಹೀಗಿರುವವನನ್ನು ಸ್ನೇಹಿತನಾದ ಮಕರಂದನು ಮಾರನೆಯ ದಿನ ಕಂಡು

[5] ಮನದನ್ನ [5]ನೆನಿಸುವೆನ್ನೊಳ
[6] ಮಿನಿತುವರಂ[6] ನಾಣ್ಚಲೇಕೆ ಮಿಥ್ಯಾಮೋಹ
ಕ್ಕಿನಿವಿರಿದು ವಿಕಳನಪ್ಪುದೆ
ಕನಸಿನ ಬತ್ತಕ್ಕೆ [7]ಗೋಣಿಯಾಂಪರೆ[7] ನೃಪತಿ

ಎಂದು ಎಷ್ಟು ಸಮಾಧಾನ ಮಾಡಿದರೂ ಪ್ರಯೋಜನವಾಗದೆ ನೋಯುತ್ತಿರಲು ಒಂದು ದಿನ ಪ್ರತಿಹಾರಿಯೊರ್ವಳು ಕಂದರ್ಪ ದೇವನಲ್ಲಿಗೆ ಬಂದು ಅಪೂರ್ವಿಗರಾದ ಇಂದ್ರಜಾಲಿಕನೂ ಜೋಗಿಣಿಯೂ ಬಂದಿರುವರು, ಕುತೂಹಲವಿದ್ದರೆ ಕಾಣ ಬಹುದು ಎನಲು ಅವರನ್ನು ಒಳಹೊಗಿಸೆಂದು ಅರಸನ

---

1 ಸಮಾಧಾನ ಮಾಡಿಕೊಂಡ, 2 ಸ್ವಭಾವ ಸ್ಥಿತಿಯನ್ನುಳಿದು ಚೆದರಿದ್ದ, 3 ಬೇರೆ, 4 ತುಂಬಿರುವ 5 ಸ್ನೇಹಿತ, 6 ಇಲ್ಲಿಯ ವರೆಗೆ, 7 ಗೋಣಿ (ಚೀಲ) ಯನ್ನು ಒಡ್ಡುತ್ತಾರೆಯೆ ?

ಕಣ್ಣರಿದ ಮಕರಂದನು ಆಜ್ಞಾಪಿಸಿದನು. ಒಡನೆಯೇ ಮಾಯಾಭುಜಂಗನೂ ಜೋಗಿಣಿಯೂ ಒಳಹೊಕ್ಕು ತಮ್ಮ ಅದ್ಭುತವಾದ ಇಂದ್ರಜಾಲ ವಿದ್ಯೆಯನ್ನು ಪ್ರದರ್ಶಿಸಿದರು. ಸಭೆಯೆಲ್ಲ ಮೆಚ್ಚಿಗೆಯಿಂದ ತಲೆದೂಗುತ್ತಿರಲು ಮಕರಂದನು ಇದಿರಲಿ, 'ಮೂಲೋಕದೊಳ್ ಮೇಲೆನಿಸುವ ವನಿತಾರತ್ನಮಂ ರಾಜವಂಶಾಧಿಕಮಂ ತೋರು' ಎಂದನು. ಹಾಗೆ ಹೇಳುವುದಕ್ಕೆ ಮೊದಲೆ ಮಾಯಾ ಭುಜಂಗನು ಜೋಗಿಣಿಯ ಮುಖವನ್ನು ನೋಡಲು ತಕ್ಷಣವೇ ಅವಳು ಆಕಾಶ ಪ್ರದೇಶದಲ್ಲಿ ವಿರಹ ವ್ಯಾಕುಲೆಯಾದ ರಾಜಕುಮಾರನ ಕನಸಿನಲ್ಲಿ ಬಂದ ಕನ್ಯೆಯನ್ನು ತೋರಿಸಿದಳು.

[1] ಬಿಸುಸುಯ್ಯಿಂ[1] ನಸುಗುಂದಿ ಬಾಡಿದಧರಂ ಕಣ್ಣೀರ
[2] ಬಾನಲ್ಗಳಿಂ[2]
ಬಸಿವಾಸ್ಯಂ ತಳಗೆಯ್ಯ ಪಜ್ಜೆ [3]ಪಸರಂಗೊಂಡಿರ್ದ[3]
ಗಂಡಸ್ಥಳಂ
ಪೊಸವೆಳ್ಪಂ ಮಿಸುಪಂಗಯಷ್ಟಿ ನೊಸಲೊಳ್ ನೀಳ್ದಿರ್ದ
[4]ನೀಲಾಳಕಂ[4]
[5] ಪಿಸುಣಾಡಿತ್ತು[5]ಸಮಾಸ್ತ್ರನಸ್ತ್ರ ಹತಿಯಂ
[6] ತತ್ಕಾಮಿನೀರೂಪಕಂ

ಇದನ್ನು ನೋಡಿದ ಕಂದರ್ಪದೇವನು ಮೂರ್ಛಾಗತನಾದನು. ಐಂದ್ರಜಾಲಿಕನು ಸನ್ಮಾನಿತನಾಗಿ ಹೊರಟುಹೋದನು.

---

1 ಬಿಸಿಯಾದ ಉಸಿರಿನಿಂದ 2 ಪ್ರವಾಹಗಳಿಂದ, 3 ಹರಡಿಕೊಂಡಿದ್ದ, 4 ಕರಿಯ ಮುಂಗುರುಳು, 5 ಚಾಡಿಹೇಳಿತು, 6 ಆ ಹೆಂಗಸಿನ ರೂಪು.

ಎಚ್ಚೆತ್ತ ರಾಜಕುಮಾರನಿಗೆ ಊರಿನಲ್ಲಿರಲು ಮನಸ್ಸಾಗದೆ ಆ ಕನ್ನಿಕೆಯನ್ನು ಹುಡುಕಿಕೊಂಡು ಮಕರಂದನೊಡನೆ ಹೊರಟು ದಾರಿಯಲ್ಲಿರುವ ಪ್ರಕೃತಿ ಸೌಂದರ್ಯಗಳನ್ನು ಆಸ್ವಾದಿಸುತ್ತ ಮುಂದು ಮುಂದೆ ನಡೆಯುತ್ತಿರಲು ಒಂದುಕಡೆ ಕಾಡುಹಂದಿಯನ್ನು ಬೇಟೆಯಾಡುತ್ತಿರುವುದು ಕಣ್ಣಿಗೆ ಬೀಳುವುದು. ಕಂದರ್ಪದೇವನೂ ಮಕರಂದನೂ ಆ ಬೇಟೆಯಲ್ಲಿ ಭಾಗಿಗಳಾಗಿ ಒಂದು ಹಂದಿಯನ್ನು ಬೆನ್ನಟ್ಟಬರಲು ಅದು ಅವರನ್ನು ವಿಂಧ್ಯಾಚಳಕ್ಕೆ ಕರೆದುಯ್ಯುವುದು. ಆಯಾಸದಿಂದಲೂ ಬಾಯಾರಿಕೆಯಿಂದಲೂ ಬಳಲಿ ಬೆಂಡಾಗಿ ಬರುತ್ತಾ ದಾರಿಯಲ್ಲಿ ಆಕಸ್ಮಿಕವಾಗಿ ಒಬ್ಬ ಮುನಿಕುಮಾರಿಯಿಂದ ಪಡೆದ ತೀರ್ಥವನ್ನು ಅದಕ್ಕಾಗಿಯೇ ಆಸೆಪಡುತ್ತಿದ್ದ ಬ್ರಾಹ್ಮಣನಿಗೆ ಕೊಟ್ಟು ಅವನ ಆಶೀರ್ವಚನವನ್ನು ಪಡೆದು ಎಲ್ಲೆಲ್ಲಿಯೂ ಅಲೆದು ಸುತ್ತಿ ಬೆಂಡಾಗಿಬಂದು ಒಂದು ಮಾವಿನಮರದಕೆಳಗೆ ಕುಳಿತುಕೊಳ್ಳುವರು. ಮಕರಂದನು ಪಕ್ಕದ ಕೊಳದಿಂದ ಶೀತಲವಾದ ನೀರನ್ನು ತಂದು ಕುಮಾರನಿಗೆ ಕೊಟ್ಟು ಸವಿಯಾದ ಆಹಾರದಿಂದ ತೃಪ್ತಿಪಡಿಸಲು ಕಂದರ್ಪನು ಅಲ್ಲಿಯೇ ಇದ್ದ ಲತಾಗೃಹದಲ್ಲಿ ಮಲಗಿದನು. ಆ ವೇಳೆಗೆ ಸರಿಯಾಗಿ ಆ ಮರದ ಮೇಲಿದ್ದ ವಸಂತದೋಹಳೆಯೆಂಬ ಹೆಣ್ಣುಗಿಳಿ ತನ್ನ ಪ್ರಿಯನಾದ ಚೂತಪ್ರಿಯನೆಂಬ ಗಿಳಿ ಬಾರದಿರಲು

ಗಿಡುಗಂ ಕೊಂದುದೊ ಬೇಡರಿಟ್ಟಬಲೆಯೊಳ್ ಮೇಣ್
ಬಿಟ್ದನೊ [1] ಪಕ್ಕವೇ[1]
ನುಡಿದತ್ತೊ ಪಿಡಿದನ್ಯ[2]ಶಾರಿಕೆ[2] ರತವ್ಯಾಪಾರದೊಳ್ಪೊಯ್ದಳೊ

---

1 ರಕ್ಕೆಮುರಿಯಿತೊ 2 ಹೆಣ್ಣುಗಿಳಿ

ತಡೆದಂ ಮತ್ಪ್ರಿಯನೆಂದು ನೊಂದು ತಳಿರ್ಗಳ್ [1] ನಾಂಬನ್ನೆಗಂ[1] ದುಃಖದಿಂ
ಗಡ [2]ಕೀರ[2]ಪ್ರಿಯಕಾಂತೆ ಸುಯ್ದು ಸುರಿದಳ್ ಭೋರೆಂದು [3]ಬಾಷ್ಪಾಂಬು[3]ವಂ ||

ಹಾಗೆ ಮಮ್ಮಲ ಮರುಗುತ್ತಿರ್ದ ಸಮಯಕ್ಕೆ ಸರಿಯಾಗಿ ಚೂತಪ್ರಿಯನು ತನ್ನ ಪ್ರಿಯೆಯು ಎಷ್ಟು ವಿರಹದಿಂದಲೆಯುತ್ತಿರುವಳೋ ಎಂದು ಓಡಿಬಂದು ಬೇಡಿ ಕೂಡಲಾಗಿ ಶಾರಿಕೆಯು ಇದರ ಸಾವಕಾಶಕ್ಕೆ ತಪ್ಪುಕಾರಣವನ್ನು ನೆನೆದು ಕೊಪಿಸಿಕೊಳ್ಳಲು ಚೂತಪ್ರಿಯನು ಹೀಗೆಂದಿತು.

ಕಾರಣಮಿಂ ಪೆಱತುಳ್ಳೊಡೆ
ಶಾರಿಕೆ ನಿನ್ನಾಣೆಯೆನ್ನನ್+ಆಳ್ದತಿಲಲಿತಾ
ಕಾರೆಗೆ ವಾಸವದತ್ತೆಗೆ
ಮಾರನಿನ್+[4]ಅಟಲಾಗೆ[4] ತಳರಲಱಿಯದೆ ತಡೆದೆಂ.

ಶಿಶಿರೋಪಚಾರಮಾದೊಡೆ
[5]ಕುಶೇಶಯಾಶಯ[5]ದೊಳಾಯ್ದು ಕೊಯ್ದುಂ ಕೊರಲೊಳ್
ಶಶಿಮುಖಿಯರ್ ಸುತ್ತಿದೊಡೆ+ಆಂ
ವಿಶದ ಸರೋರುಹದ ಪೂವನಡುಕುತ್ತಿರ್ದೆಂ ||

ಆ ಮಾತನ್ನು ಕೇಳಿ ಶಾರಿಕೆಯು ಆ ವಿಷಯವನ್ನು ವಿಸ್ತಾರವಾಗಿ ತಿಳಿಸಬೇಕೆಂದು ಕೇಳಿಕೊಂಡಿತು.

---

1 ನೆನೆಯುವವರೆಗೆ, ಒದ್ದೆಯಾಗುವವರೆಗೆ 2 ಗಿಳಿ 3 ಕಣ್ಣೀರು 4 ದುಃಖವುಂಟಾಗಲು 5 ಕೊಳ

ಆಗ ಚೂತಪ್ರಿಯನು ಆ ವಿಷಯವನ್ನು ವಿಸ್ತರಿಸತೊಡಗಿತು.

[1]ಕುಸುಮಾಕರ[1]ದಾಕರವೆನೆ
[2]ಕುಸುಮಾಯುಧ[2]ನೆಂದುಮಿರ್ಪ ನೆಲೆಯೆನೆ ಜಗದೊಳ್
ಕುಸುಮ ಸುಕುಮಾರಿಯರ ಸೌ
ಖ್ಯಸದನಮೆನೆ ಮಿಸುಪುದು+[3]ಅಸದಳಂ ಕುಸುಮಪುರಂ

ಆ ಊರಿನರಸು ಶೃಂಗಾರಶೇಖರ. ಆತನ ಮನಃಪ್ರಿಯೆ ವಿಭ್ರಮಲೇಖೆ. ಅವರಿಗೆ ಬಹುಕಾಲ ಮಕ್ಕಳಿಲ್ಲದಿರಲು ಪದ್ಮಾವತೀದೇವಿಯನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸಿ

ಲತೆಯಂ ನಂದನಭೂಮಿ ದೀಪಿಕೆಯನಗ್ನಿಜ್ವಾಲೆ ರತ್ನಾಕರ
ಕ್ಷಿತಿ [4]ಮಾಣಿಕ್ಯಶಲಾಕೆ[4]ಯಂ ಪ್ರತಿಭೆ ಕಾವ್ಯಪ್ರೌಢಿಯಂ ವೀಣೆ ಸಂ
ರುತಿಯಂ [5]ಪದ್ಮಿನಿ[5]ಯಂ ಮಹಾಸರಸಿ [6]ಕಂದರ್ಪಾಗ್ನಿ[6]ಯಂ ಕಾಮದೇ
ವತೆ [7]ಪೆಂಪಿಂ[7] ಪಡೆವಂತೆ ಕಾಂತೆ ಪಡೆವಳ್ ಲೀಲಾವತೀ ದೇವಿಯಂ

ಎಳಲತೆಯಂತೆ ಕೋಮಳಿಕೆಯಿಂದೆಳಮಾಣಿಕದಂತೆ ಕಾಂತಿಯಿಂ
ದೆಳಗಿಳಿಯಂತೆ ಸೋಲಿಪ ತೊದಳ್ನುಡಿಯಿಂದೆಳೆ [8]ಯಂಚೆಯಂತೆವೊಲ್

1. ಸರೋವರ. 2. ಪುಷ್ಪಬಾಣ, ಮನ್ಮಥ. 3. ಅತಿಶಯ 4. ಮಾಣಿಕ್ಯದ ಸರಳು. 5. ಕಮಲ. 6. ಕಾಮಾಗ್ನಿ, ಮನ್ಮಥ ನಿಂದುಂಟಾದ ಬೆಂಕಿ. 7. ಆಧಿಕ್ಯ. 8. ಹಂಸೆ.

ತಳರಡಿಯಿಂ ಮನಂಗೊಳಿಸಿದಂತಿರೆ ಪತ್ತಿಸಿ ತಾಂ ಬಟಿಕ್ಕದೇಂ
ಕಳಿದಳೊ ಬಟ್ಟೆಯಂತೆ [1]ಕಳಕೇಳಿಕೆ[1] ಬಾಳಿಕೆ ಬಾಲಕಾಲಮಂ

ಹಾಗೆಯೇ ಕೆಲವು ವರ್ಷಗಳು ಕಳೆದಮೇಲೆ ತನ್ನಾತ್ಮಜೆಯಲ್ಲಿ ಭುವನಮನೋಹರವಾಗುವ ಹಾಗೆ ಯವ್ವನವಸಂತ ನಡಿಯಿಟ್ಟುದನ್ನು ಶೃಂಗಾರಶೇಖರನು ಕಂಡು ಮಾರಾಕಾರರಾದ ರಾಜಕುಮಾರರನ್ನು ಬರಿಸಿ ಸ್ವಯಂವರವನ್ನೇರ್ಪಡಿಸಿದನು. ಆ ರಾಜಸಮಾಜದಲ್ಲಿ ರಾಜಕುಮಾರಿಗೆ ಯಾರೂ ಒಪ್ಪಿತವಾಗಲಿಲ್ಲ. ಅವಳ ಸಖೀಜನರೆಲ್ಲರೂ ಈಕೆಯ ಯವ್ವನವು ಕೇತಕೀವನದಂತೆ ನಿಷ್ಫಲವಾಯಿತಲ್ಲ ಎಂದು ಚಿಂತಿಸುತ್ತಿರಲು ಒಂದು ದಿನ ನಿಶಾವಸಾನ ಸಮಯದಲ್ಲಿ ಲೀಲಾವತಿಯು

ಹರನೇತ್ರಜ್ವಾಲೆಯಿಂ ಬೇವ+[2]ಅತನು[2]ವನ್+ಉಮೆ
ಕಾಣುತ್ತೆ ತನ್ಮೌಳಿಯೊಳ್ ಸುಂ
ದರಲೇಖಾಮಾತ್ರಮಿರ್ಪಂತಮೃತಕಿರಣನಂ
ಕೊಂಡಪೂರ್ವಪ್ರಭಾಮಂ
ಜರಿ ಮೆಯ್ಯೊಳ್ [3]ಪತ್ತುವನ್ನಂ[3] ಪಿಡಿದು ತಳಿದು ಮತ್ತೆತ್ತಿ
ದಂತಿರ್ದ ಶೋಭಾ
ಕರರೂಪಾಕಾರನಂ ತತ್ತರುಣಿ ಕನಸಿನೊಳ್ ಕಂಡು
ಸೋಲ್ತಳ್ ಮೃಗಾಕ್ಷೀ

ಆಗ ಅತಿಮುಗ್ಧೆಯಾದ ಆ ತರುಣಿಗೆ

1. ರೂಪವತಿ. 2. ಮನ್ಮಥ. 3. ಅಂಟಿಕೊಳ್ಳುವವರೆಗೆ.

[1]ಇಷುಪ್ರಾಯಂ ಗೇಯಂ ಮುಷಿತಕಿರಣಂ ಶೀತಕಿರಣಂ
ವಿಷಾಹಾರಂ ಹಾರಂ ಹೃದಯದಹನಂ ಗಂಧವಹನಂ
ದ್ವಿಷಜ್ಜಾತಂ ಚೂತಂ ಪರಿಭವನವಾಯ್ತಂಬುಜವನಂ
ವಿಷಾದಾಯಂ ಕಾಯಂ ವನಿತೆಗವನಿಂ ಚಿತ್ತಭವನಿಂ||

ಅವಳನ್ನು ಸಮಾಧಾನಮಾಡುವುದಕ್ಕೆ ಬಂದ ಸಖಿಯಾದ ಕಳಾವತಿಯು ಅದು ವಿರಹವೇದನೆಯೆಂದು ತಿಳಿದು ಅವಳ ಮನದನ್ನನ ಚಿತ್ರವನ್ನು ಬರೆದು ತೋರಿಸಿದರೆ ಅವನನ್ನು ಪಡೆಯಲು ಸಾಧ್ಯವಾಗಬಹುದೆಂದು ಸೂಚಿಸಲಾಗಿ ಲೀಲಾವತಿಯು ಪ್ರತ್ಯಕ್ಷವಿರುವ ಪ್ರಿಯನನ್ನು ಪ್ರತಿಮಾಗತವನ್ನಾಗಿ ಮಾಡುವಂತೆ ಅತಿ ಸುಂದರವಾಗಿ ಚಿತ್ರಿಸಿದಳು. ಅವನ ರೂಪು

ಶಶಿಯಂ [2]ಜೋಡಾಡುತಿರ್ಕುಂ[2] ಮೊಗಮ್,+ಅಲಘುಭುಜಂ
[3]ಜಾನುವಂ ಜಕ್ಕುಲಿಕ್ಕುಂ[3]
ದಶನಂ ದಾಳಿಂಬದ ಬಿತ್ತುಗಳನ್+ಇಟಿಸುಗುಂ
ನೀಳನೀರೆಜಶೋಭಂ
ವಿಶದಶ್ರೀನೇತ್ರಂ+ಅಂಗಂ ವಿಕಚ ಕುವಲಯಶ್ಯಾಮಲಂ
ಪ್ರಾಯಂ+ಅಷ್ಟಾ
ದಶವರ್ಷಂ ತಾನೆನಲ್ ಚಿತ್ರದೊಳನುವನ ರೂಪಾದುದು+
[4]ಆದಂ[4]ವಿಚಿತ್ರಂ

---

1. ಆಕೆಗೆ ಮನ್ಮಥನಿಂದ ಸಂಗೀತವು ಬಾಣಕ್ಕೆ ಸಮಾನವೂ ಚಂದ್ರನು ಕಿರಣವಿಲ್ಲದವನೂ ಹಾರವು ವಿಷಪ್ರಾಯವೂ ಗಾಳಿಯು ಎದೆಯನ್ನುರಿಸತಕ್ಕದ್ದೂ ಮಾವಿನ ಮರವು ಶತ್ರುಸಮವೂ ಕಮಲದ ತೋಟಗಳೆಲ್ಲ ದುಃಖಕ್ಕೆ ಕಾರಣವೂ ಶರೀರವು ವಿಷಪೂರಿತವೂ ಆದುವು. 2. ಹಾಸ್ಯ ಮಾಡುತ್ತಿದೆ 3. ಮಂಡಿಯನ್ನು ತಗಲುತ್ತಿವೆ. 4. ವಿಶೇಷವಾಗಿ

ಅದನ್ನೇ ನೋಡುತ್ತ ವಿರಹಕಾತರೆಯಾಗಿದ್ದ ಅವಳಿಗೆ ಶುಶ್ರೂಷೆ ಮಾಡುತ್ತಿದ್ದುದರಿಂದ ಹೊತ್ತಾಯ್ತು ಎಂದು ಹೇಳುತ್ತಾ ಚೂತಪ್ರಿಯನು ಹಾಗೆಯೇ ನಿದ್ದೆಹೋಯಿತು.

ಅದನ್ನು ಕೇಳುತ್ತ ಮಲಗಿದ್ದ ಮಕರಂದನು ಮಾನವ ಮದನನಿಗೆ ಇದು ನಿನ್ನ ವಿಚಾರವೆಂದು ತಿಳಿಸಿದನು. ಮಾರನೆಯದಿನ ಅವರು ಅಲ್ಲಿಂದ ಹೊರಟು ದಾರಿಯಲ್ಲಿ ಸಿಕ್ಕಿದ ಜಿನಬಿಂಬನಗಳನ್ನು ನೀರ್ವೂಗಳಿಂದರ್ಚಿಸಿ ಪದ್ಮಾವತೀ ಪ್ರೇರಿತಮಾರ್ಗದಿಂದ ವಿಂಧ್ಯಾಚಲದಡಿಯನ್ನು ಸೇರಿ ಅಲ್ಲಿ ಆನೆಗಳ ನೀರಾಟವನ್ನೂ ಶಬರರ ಕೌಶಲಗಳನ್ನೂ ನೋಡುತ್ತ ದಾರಿಯಲ್ಲಿದ್ದ ಯಕ್ಷಯಕ್ಷಿಯರನ್ನು ಪೂಜಿಸುತ್ತ 'ನಾಡಾಡಿಯಲ್ಲದ ತೀರ್ಥಸಾಮರ್ಥ್ಯಮಂ ಸಮರ್ಥಿಸುತಂ ಮಹಾಮುನಿಗಳ ಮಹಿಮೆಯಂ ಮನದೆಗೊಳುತ್ತ' ಇಂದ್ರ ಕೂಟವನ್ನು ಸೇರಿ ಚಂದ್ರಪ್ರಭನನ್ನು ವಂದಿಸಿ ಮುಂದೆ ನಡೆದು ಬೋಧಸಿಂಧುಭಟಾರಕರ್ಗೆ ಕೈಮುಗಿದು, ಅಲ್ಲಲ್ಲಿ ಸಿಕ್ಕಿದ ಜಿನಕೂಟಗಳಿಗಭಿವಂದಿಸಿ ಮಯೂಖನಿರ್ಜರ ಗಿರಿಯಲ್ಲಿ ವಿದ್ಯಾಧರಿಯರಾದ ವಿದ್ಯುಲ್ಲೇಖೆ ಚಂದ್ರಲೇಖೆಯರಿಂದ ಸತ್ಕಾರವನ್ನು ಪಡೆದು ಚಕ್ರೇಶ್ವರಿಯಿಂದ ಸಿದ್ಧರಸದ ಪೊಂಗೊಡವನ್ನು ಪಡೆಯುವರು. ಅಲ್ಲಿಯೇ ಕೆಲವು ಕಾಲ ವಿರುತ್ತಿರಲಾಗಿ ವಸಂತಸಮಯ ಪ್ರಾಪ್ತವಾಗಲು ಕಂದರ್ಪ ದೇವನಿಗೆ ವಿರಹತಾಪವು ಉಲ್ಬಣಿಸುವುದು.

ಅದೇ ಸಮಯದಲ್ಲಿ ಅತ್ತ ಲೀಲಾವತಿಗೂ ವಿರಹಜ್ವಾಲೆಯು ಅತ್ಯಧಿಕವಾಗುವುದು. ಆಗ ಲೀಲಾವತಿಯು ಸಖಿಯರ ಆದೇಶದಂತೆ ಕುಸುಮಪುರದ ಹೊರವಳಯದಲ್ಲಿದ್ದ ತನ್ನ ಮನೆದೇವತೆಯಾದ ಅಂಬಿಕೆಯನ್ನು ತ್ರಿಸ್ಥಾನ ಸಂಶುದ್ಧಿ

ಯಿಂದ ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿ ಹಾಗೆಯೇ ಪಕ್ಕದಲ್ಲಿದ್ದ ಕಳಾವತಿಯಮೇಲೆ ಮರೆದೊರಗಲು ದೇವಿಯು [1]‘ಉತ್ಪಲಿನಿಗಮೃತಕಿರಣಂ ಬರ್ಪತಿಂ[1]ದಿನಿರುಳೊಳ್ ನಿನ್ನಿನಿಯಂ ಬಂದಪನಿದನಂತೆ ನಂಬು ಕಮಲದಳಾಕ್ಷಿ; ನಿನ್ನ ಕನ್ನೆ ಮಾಡಮೊಳೊಪ್ಪಂಗೆಯ್ದುಪರಾಂಗಣದೊಳ್ ಕೈಗೆಯ್ದಿರು’ ಎಂದು ಆಶ್ವಾಸನವನ್ನೀಯಲು ದೇವಿಯ ನುಡಿಯೆಂಬ ತಂಗಾಳಿಯ ತೀಟದಿಂದ ಎಚ್ಚೆತ್ತವಳಾಗಿ ಬಹು ಉತ್ಸಾಹದಿಂದ ತನ್ನ ನೆಲೆಮಾಡಕ್ಕೆ ಹೋಗಿ ಬಹು ರಮಣೀಯವಾದ ಬೆಳುದಿಂಗಳಿನ ರಾತ್ರಿಯಲ್ಲಿ ಶಯ್ಯಾಗೃಹದಲ್ಲಿ ಕಾದಿರಲು ಇತ್ತ ಕಂದರ್ಪನು ವಿರಹತಾಪವನ್ನು ಸಹಿಸಲಾರದೆ ಮೂರ್ಛೆ ಹೋಗುವನು. ಮಕರಂದನು ಶೈತ್ಯೋಪಚಾರಕ್ಕೆ ಕಮಲದಳಗಳನ್ನು ತರುವೆನೆಂದು ಹೋಗುವನು. ಆ ಕಾಲಕ್ಕೆ ಸರಿಯಾಗಿ ನಂದೀಶ್ವರ ಪೂಜಾವಲೋಕನೋತ್ಸುಕರಾಗಿ ಹೋಗುತ್ತಿದ್ದ ಚಂದ್ರಲೇಖೆ ವಿದ್ಯುಲ್ಲೇಖೆಯರು ಏಕಾಕಿಯಾಗಿದ್ದ ಕಂದರ್ಪದೇವನನ್ನು ಪರ್ಣಲಘುವಿದ್ಯೆಯಿಂದ ತೆಗೆದುಕೊಂಡುಹೋಗಿ ಲೀಲಾವತಿಯ ಶಯ್ಯಾತಳದಲ್ಲಿ ಈಡಾಡುವರು. ತರುಣಿಯ ಶೀತಲ ದೇಹಸ್ಪರ್ಶದಿಂದ ಕಂದರ್ಪದೇವನಿಗೆ ಮೂರ್ಛೆಯಿಂದೆಚ್ಚರವಾಗುವುದು. ‘ಅಂತೊಡನೆಚ್ಚೆತ್ತು ಭೋಂಕನೆ ನಿಡುಮಿಡುಕನೆ ಕಂಡು ತಳವೆಳಗಾಗಿ ತಲ್ಲಣಿಸಿ ತನುವೆಲ್ಲಮಂ ಪರ್ವುವಂತಿರೆ ಎರ್ದೆ ಪವ್ವನೆ ಪಾಱೆ ತೆಗೆಯಲುಂ ಪಡೆಯದೆ ಮೆಯ್ಮೆಯ್ಯನೊಱಸೆ ಬರಸಿ ಕುಳ್ಳಿರ್ದು [2]ಮರುಳ್ಮಸಗಿದಂತೆ[2]

1. ಕನ್ನೈದಿಲೆಗೆ ಚಂದ್ರಬರುವ ಹಾಗೆ. 2. ಬೆಪ್ಪುಹಿಡಿದವರ ಹಾಗೆ

ಓರೊರ್ವರ ಕೊರಲಿಂ ಮಣಿ
ಹಾರಮುಮಂ ತೆಗೆದು ಮುಗುಳಮಾಲೆಯುಮಂ ಚೇ
ತೋರಾಗರಸದೆ ಮೆಯ್ಮಱೆ
ದೋರೋರ್ವರ ಕೊರಲೊಳಿಕ್ಕಿದರ್ ಸಂಭ್ರಮದಿಂ

[2]ಪದೆದು[2]+ಆಲಿಂಗಿಸುವಂತೆ ಮೋಹರಸದಿಂಪಂ ಸೂಸು
ವಂತೆ+ಒಂದನೊಂ
ದಿದಿರ್ಗೊಳ್ವಂತೆ [3]ಕಡಂಗಿ[3] ತಮ್ಮೆಳಿನಸುಂ ಗಂಟಿಕ್ಕುವಂ
ತಾಗಲ್+ಉ
ಣ್ಮಿದ ಲಜ್ಜಾಂಬುವನೀಂಟುವಂತೆ ಹೃದಯಂ
[4]ಕೋಟ್ಪೋಯ್ತು[4] ಕೈಕೊಳ್ವದೆಂ
ದೊದವಿಂ ಕೈಗುಡುವಂತೆ ಕಣ್ಗಳ್+ಒಲವಿಂ
ಮೇಲ್ವಾಯ್ದುವು+ಓರೊರ್ವರೋಳ್ ||

ಅಂತಿರ್ವರುಮೋರೊರ್ವರಂ ಒಱಲ್ದು ನೋಡುತ್ತಮಿರ್ದು

ಕನಸಿನೊಳೆ ಕಂಡ ರೂಪಂ
ಮನದೊಳ್ ಮಗುಳ್ದಾದಮಱಸುವಂತಿರೆಯುಂ ಭೋಂ
ಕನೆ ಮೂರ್ಛೆವೋದರೇಕೆಯೊ
ಮನಸಂದು+ಒಂದಿದರ ಸುಖಮನ್+ಅಜನ್+
ಎಡೆಗಡಿಪಂ ||

ಆ ವೇಳೆಗೆ ಪೂಜೆಯಿಂದ ಹಿಂತಿರುಗಿದ ವಿದ್ಯಾಧರಿಯರು ಕಂದರ್ಪದೇವನನ್ನು ಪುನಃ ಎತ್ತಿಕೊಂಡು ಹೋಗಿ ಮೊದಲಿ

---

2. ಆಶೆಪಟ್ಟು 3. ಉತ್ಸಾಹಗೊಂಡ 4. ಸೂರೆಹೋಗಿದೆ

ದ್ದೆಡೆಯಲ್ಲಿಯೆ ಬಿಟ್ಟರು. ಬೆಳಗ್ಗೆ ಎಚ್ಚರವಾದ ಮೇಲೆ ಲೀಲಾವತಿ ಕಂದರ್ಪದೇವರಿಬ್ಬರಿಗೂ ವಿರಹತಾಪವು ಹೆಚ್ಚಿತು. ಪದ್ಮಾವತೀದೇವಿಯಿಂದ ಪ್ರೇರಿತವಾದ ಮಾರ್ಗದಲ್ಲಿ ನಡೆದು ಮಕರಂದನೊಡನೆ ಕಂದರ್ಪದೇವನು ಕುಸುಮಪುರದ ಉದ್ಯಾನಕ್ಕೆ ಬಂದು ಸೇರಿದನು. ಲೀಲಾವತಿಯೂ ತನ್ನ ಸಖಿಯರೊಂದಿಗೆ ಬಂದು ಅಲ್ಲಿಯೇ ಶೈತ್ಯೋಪಚಾರವನ್ನು ಪಡೆಯುತ್ತಿರಲು ಅವಳ ಸಖಿಯರು ನಿದ್ರಿಸುತ್ತಿದ್ದ ಕಂದರ್ಪದೇವನನ್ನು ಮದನನೆಂದೇ ಭ್ರಾಂತಿಗೊಂಡು ತಮ್ಮ ಸಖಿಯಲ್ಲಿಗೆ ಕರೆದೊಯ್ದು 'ಪದ್ಮಾವತೀ ಪ್ರಭಾವಕ್ಕೆ [1]ಬೆಕ್ಕಸಂಬಟ್ಟು[1] ವಧೂವರರ ಸಮಾನುರೂಪಾನುರಾಗಕ್ಕೆ ಸಂತೋಷಂಬಟ್ಟು ಗಾಂಧರ್ವವಿವಾಹಮಂ ಮಾಳ್ಪ ಮನಮಂತಂದು ದಂಪತಿಗಳಂ ಬೇಱೆಬೇಱೆ [2]ಮಂಗಳವಸದನಂಗೆಯ್ದು[2] [3]ಅಲರ್ವಸೆ[3]ಯೊಳಿರಿಸಿ ಪೊಸಮುತ್ತಿನ ಸೇಸೆಯಂ ಮುಡಿಯೊಳಾಂತು'

[4]ಗಂಧವಹಂಗಳ್[4] ಮಂಗಳ
ಗಾಂಧರ್ವಮನೆಸಗೆ ಮಧುರ [5]ಭೃಂಗೀರವ[5]ದಿಂ
ಗಂಧರ್ವವಿವಾಹಮನಾ
[6]ಬಂಧೂಕಾಧರೆಯರ್[6]ವರ್ಗೆ ಮಾಡಿದರೊಲವಿಂ

ಅನಂತರ ಪ್ರಿಯಪ್ರೇಯಸಿಯರು ನಿರಂತರ ಸ್ವರ್ಗಸುಖಮನನುಭವಿಸಿ ಜಲಕ್ರೀಡೆ ವನವಿಹಾರಗಳಿಂದ ಕಾಲವನ್ನು

---

1. ಆಶ್ಚರ್ಯಪಟ್ಟು 2. ಶುಭಕರವಾದ ಆಭರಣಗಳಿಂದ ಅಲಂಕರಿಸಿ 3. ಹೂವಿನ ಹಾಸಿಗೆ 4. ಗಾಳಿ 5. ದುಂಬಿಯ ಧ್ವನಿ 6. ಬಂದುಗೆ ಹೂವಿನಂತೆ ತುಟಿಯುಳ್ಳ ಸ್ತ್ರೀಯರು.

ಕಳೆಯುತ್ತಿರಲು ಒಂದುದಿನ ಮಕರಂದನು ಕಂದರ್ಪದೇವನ ಕೈಗೆ ಲೀಲಾವತಿಯ ಚಿತ್ರವೊಂದನ್ನು (ಕಾಲಾವಲೋಕಿನೀ ಫಲಕ) ತಂದುಕೊಡುವನು. ಅವನು ಅದನ್ನು ನೋಡಿ ಪಕ್ಕದಲ್ಲಿದ್ದ ಲೀಲಾವತಿಗೆ ತೋರಿಸದೆಯೇ ತನ್ನ ಸ್ನೇಹಿತನಿಗೆ ಹಿಂದಿರುಗಿಸುವನು. ಲೀಲಾವತಿಯು ಅದು ಪರಸ್ತ್ರೀಯ ಚಿತ್ರವೆಂಬ ಭ್ರಾಂತಿಯಿಂದ ಉದ್ರಿಕ್ತಳಾಗಿ ಮತ್ಸರದಿಂದ ಅದನ್ನು ಒಡೆದು ಭಾವಿಯಲ್ಲೆಸೆದು ಓಡಿಹೋಗಿ ಸಖೀಜನದೊಡನೆ ಲತೆಯಾಗಿ ಹೋಗಿಬಿಡುವಳು. ಸತಿಯನ್ನು ಕಾಣದೆ ವಿರಹಾನಲಜ್ವಾಲೆಯಿಂದ ಸಂತಪ್ತನಾದ ಕಂದರ್ಪನು ಅವಳನ್ನು ನೆನೆದು ಅಲವರಿಸುತ್ತ ವನದಲ್ಲೆಲ್ಲ ಅಲೆದು ಆ ಲತೆಯಹತ್ತಿರವೇ ಬಂದು ಅವಳನ್ನೇ ಹೋಲುತ್ತಿದ್ದ ಅದನ್ನು ಮೋಹಪರವಶತೆಯಿಂದ ಆಲಂಗಿಸಲು

[1] ಸಿತಪುಷ್ಪಂ ಸ್ಮಿತನೇತ್ರಮಾಯ್ತು[1]+ಎಳದಳಿರ್
ಬಾಯಾಯ್ತು ಬಿಣ್ಗೊಂಚಲು
ನ್ನತವಕ್ಷೋರುಹಮಾಯ್ತು ತುಂಬಿ ಕುರುಳಾಯ್ತೊ
ಳ್ಗೊಂಬು ತೋಳಾಯ್ತು ತ
ಲ್ಲತೆ ಲೀಲಾವತಿಯಾಯ್ತು+ಇದೇನಮೃತಮೋ
ಘರ್ಮಾಂಬುವಾಲಿಂಗನಂ
ಮೃತಸಂಜೀವನಮೋ ರಸಂ ಹರಣಮೋ ಶ್ರೀರೂಪ
ಕಂದರ್ಪನಾ ||

ಒಡನೆಯೇ ಲೀಲಾವತಿಯು ಪಕ್ಕದ ಲತೆಗಳನ್ನಪ್ಪಲು ಮುನ್ನಿನಂತೆಲ್ಲರೂ ಸಖಿಯರಾದರು. ಪ್ರಿಯಪ್ರೇಯಸಿಯರು

---

1 ಬಿಳಿಯ ಹೂವೇ ನಗೆಗಣ್ಣಾಯಿತು

ಸಮಾಧಾನಗೊಂಡು ಹಿಂದಿನಂತೆಯೇ ಸುಖಸಾಮ್ರಾಜ್ಯದಲ್ಲಿ ಮಗ್ನರಾದರು. ಹೀಗಿರುವಲ್ಲಿ ಒಂದು ದಿನ ಲೀಲಾವತಿಯಿಲ್ಲದೆ ಕಂದರ್ಪದೇವನೊಬ್ಬನೇ ವನವಿಹಾರದಲ್ಲಿರುವಾಗ ಗಂಧಗಿರಿಗೊಡೆಯನಾದ ವಸಂತಶೇಖರನೆಂಬ ವಿದ್ಯಾಧರನ ಮನೋಹರಿ, ಲಾವಣ್ಯ ವಿಭ್ರಮರೂಪಗಳಲ್ಲಿ ಲೀಲಾವತಿಗೂ ನಾಲ್ಕು ಬೆರಳು ಮಿಗಿಲೆನಿಸಿದ ಮದನಮಂಜರಿಯೆಂಬುವಳು ಕಂದರ್ಪದೇವನಲ್ಲಿ ಮೋಹಗೊಂಡು ಗಂಡನ ಕಣ್ತಪ್ಪಿಬಂದು ಅವನನ್ನು ಹಿಡಿದುಕೊಳ್ಳುವಳು. ಆಗ [1] ಪಾಣ್ಬರಮಲ್ಲ[1]ನಾದ ಕಂದರ್ಪದೇವನು 'ಪುರುಷವ್ರತಕ್ಕೆ ಭಂಗಂ ಬಂದುದು, ಪರವಧುವಂ ನೋಡಿದಂದು' ಎಂದು ಅವಳನ್ನು ತಿರಸ್ಕರಿಸಲು ಅವಳು

ಪುದಿದ ಗುಣಮೆಂಬುದಂ ಸ
ಗ್ಗದ ಸುಖಮಂ ಕೊಳಲೆವೇಡ ಪೊಣ್ಣೊಲವಿಂ
ಬಂದುದೆ ಸಗ್ಗಮಲ್ತೆ ? ಕಡು [2]ಸೋ
ವುದೆ[2] ತನಗಿಂತೇಕೆ [3]ಕಿತವ[3] [4]ಪಱಿವಱಿಯಪ್ಪೆ[4]

ಬಾರದ ಭವಮುಂ ಬರ್ಪರ್
ಕೂರಿಸಲ್+ಅಬಲೆಯರನ್+ಅವರೆ ಕೂರ್ತು+ಎ
ಱಗಿದೊಡಾ
ಭಾರಕ್ಕೆ ತಲೆಯನೂಱುವ
ರಾರುಂ ಪುರುಷರನೆ ಪೇೞ್ದು ಪಾತಕರೊಳರೆ

'ಎಂದು ಅತಿಸುಗುಣಂ ಚೋರಲಕ್ಷಣಂ ಎಂಬಂತೀಗಡಿನ ಗಂಡರ ನಾಲಗೆಯ ನನ್ನಿಯುಂ ಕಚ್ಚೆಯ ಶೌಚಮುಮೆಲ್ಲಂ

---

1 ವ್ಯಭಿಚಾರಿಗಳನ್ನೆಲ್ಲ ಧ್ವಂಸಮಾಡುವವನು 2 ಅಟ್ಟುವುದೇ ? 3 ಮೋಸಗಾರ, 4 ತಬ್ಬಿಬ್ಬಾಗುತ್ತೀಯೆ ?

ನಿಲಲಱಿವುವೆ? ಮಱುಗಿಸದೆ ಕೂಡೆಂದು ಕಾಲ್ವಿಡಿದುಮೆಂತು ನುಡಿದುಮಾಜಿದೆ ಸಿಗ್ಗಾಗಿ [1] ಕೋಳ್ದಪ್ಪಿದುರಗಕಾಂತೆಯಂತೆ[1] ಕಿಡಿಕಿಡಿವೊಗಿ ಅವನಂ ವಿದ್ಯೆಯೊಳ್ ಮಾಡಿದಳ್ ಕುರವಕಮಂ.' ಲೀಲಾವತಿಯು ಮಲ್ಲಿಕಾಮಂಟಪದಲ್ಲಿ ನಿಜವಲ್ಲಭನನ್ನು ಕಾಣದೆ ವಿರಹೋತ್ಕಂಠೆಯಾಗಿ ವನದಲ್ಲೆಲ್ಲ ತೊಳಲಿ ಬೆಂಡಾಗಿ ಆ ಕುರುವಕದ ಸಮೀಪಕ್ಕೆ ಬಂದು ಅದನ್ನು ನೋಡಿ ಮೋಹಾ ವಿಷ್ಟಳಾಗಿ ಪ್ರಾಣವನ್ನು ನೀಗಿಕೊಳ್ಳಬೇಕೆಂದು ನಿಷ್ಕರ್ಷಿಸಿ ಸಖಿಯಾದ ಕಳಭಾಷಿಣಿಯ ಸೂಚನೆಯಂತೆ ಇದುವರೆಗೆ ಪುಷ್ಪಿಸದಿದ್ದ ಆ ಕುರವಕಕ್ಕೆ ಮೊದಲು ದೋಹದವನ್ನು ಮಾಡಿ ಅನಂತರದಲ್ಲಿ ತನ್ನ ಪ್ರತಿಜ್ಞೆಯನ್ನು ಪೂರಿಸುವೆನೆಂದು

ಬಿದಿ ನಿನ್ನೊಳ್ ನೆರೆದಿರ್ಪ [2]ಸೈಪನ್[2] + ಎನಗಿಂತೀ
ಮೆಯ್ಯೊಳಾ ಪಾಪಿ ಮಾ
ಡಿವನಲ್ಲಿಂ ಮಱುಮೆಯ್ಯೊಳಾದೊಡಮೆಲೆ ಪ್ರಾಣೇಶ ನೀಂ
ಪಿಂಗದಿ
ರ್ಪುದು ತಪ್ಪೆನ್ನೊಡನೆಂದು ಮಾಡಿ ಮರನಂ ಕಂದರ್ಪನಂ
ಕಾಂತಭಾ
ವದಿನೊಲ್ದಪ್ಪಿದೊಡಾದುದಾ ಕುರವಕಂ ಸೌಂದರ್ಯ
ಸಂಕ್ರಂದನಂ।

ಹೀಗೆ ಪುಣ್ಯವಂತರಿಗೆ ಮಣ್ಣನ್ನು ಹಿಡಿದರೂ ಹೊನ್ನಾಗುವ ಹಾಗೆ ಆ ಚಂದ್ರಮುಖಿಯು ಮರವನ್ನಪ್ಪಲು ಅದು ಚಂದ್ರೋ ದಯನಾದುದನ್ನು ಸಖಿಯರು ಕಂಡು ಚರಿತಾರ್ಥೆಯರಾಗಿ

---

1 ಬಂಧನದಿಂದ ಬಿಡಲ್ಪಟ್ಟ ಹೆಣ್ಣುಹಾವಿನಂತೆ. 2 ಅದೃಷ್ಟ,

ರಾಗಿಸಿ ಲೀಲಾವತಿಯನ್ನು 'ದೇವಿ ಲಕ್ಕ ದೀವಳಿಗೆ ಕಾಣು, ನಿನ್ನೋಲೆ ಕಲ್ಲೋಲೆಯಕ್ಕೆ' ಎಂದು ಹರಸುವರು. ಆಗಲೇ ಚೂಡಾಮಣಿ ರಾಜನು ಪದ್ಮಾವತಿಯೂ ಕುಸುಮಪುರಕ್ಕೆ ಬರುವರು. ಶೃಂಗಾರಶೇಖರ ವಿಭ್ರಮಲೇಖೆಯರು ಅವರನ್ನೂ ಮಗಳೊಡನಿರುವ ಅಳಿಯನನ್ನೂ ಬಹಳ ಸಂಭ್ರಮದಿಂದ ಬರಮಾಡಿಕೊಳ್ಳುವರು. ನವ ದಂಪತಿಗಳು ತಂದೆತಾಯಿಗಳಿಗೂ ಅತ್ತೆಮಾವಂದಿರಿಗೂ ನಮಸ್ಕರಿಸಿ ಆಶೀರ್ವಾದವನ್ನು ಪಡೆದು ಚೂಡಾಮಣಿ ರಾಜನೊಡನೆ ಜಯಂತೀಪುರಕ್ಕೆ ಪ್ರಯಾಣ ಮಾಡುವರು.

ಈ ಕಥಾ ಸಂಗ್ರಹವನ್ನು ನೋಡಿದಾಗ ನೇಮಿಚಂದ್ರನ ಈ ಕತೆಗೆ ಸಂಸ್ಕೃತದಲ್ಲಿ ಶ್ಲೇಷಾಲಂಕರಕ್ಕೆ ಹೆಸರುವಾಸಿಯಾದ ಸುಬಂಧುವಿನ 'ವಾಸವದತ್ತೆ' ಯೆಂಬ ಗದ್ಯ ಕಥಾನಕವು ಮೂಲವಿರಬಹುದೆಂಬ ಶಂಕೆಯುಂಟಾಗುತ್ತದೆ. ಕವಿಯೆ ಅನೇಕಸಲ ಲೀಲಾವತಿಯನ್ನು ವಾಸವದತ್ತೆಯೆಂದೇ ನಿರ್ದೇಶಿಸಿದ್ದಾನೆ. ಅಲ್ಲದೆ ಇವೆರಡಕ್ಕೂ ಅನೇಕ ಸಾಮ್ಯಗಳು ಕಂಡು ಬರುವುವು. ಲೀಲಾವತಿ, ಕಂದರ್ಪದೇವ (ಕೇತು) ಕುಸುಮಪುರ, ಶೃಂಗಾರಶೇಖರ, ಮಕರಂದ, ಚಿಂತಾ (ಚೂಡಾ) ಮಣಿ ಮೊದಲಾದ ಹೆಸರುಗಳು ಎರಡರಲ್ಲಿಯೂ ಸ್ವಲ್ಪ ವ್ಯತ್ಯಾಸದಿಂದ ಒಂದೇ ರೂಪದಲ್ಲಿವೆ. ನಾಯಕ ನಾಯಿಕೆಯರು ಪರಸ್ಪರ ಕನಸುಕಾಣುವುದು, ನಾಯಿಕೆಯನ್ನು ಹುಡುಕಿಕೊಂಡು ಮಿತ್ರನೊಡನೆ ಹೊರಡುವುದು, ಗಿಳಿಯಿಂದ ಸಮಾಚಾರವನ್ನು ಪಡೆಯುವುದು, ವಿಂಧ್ಯಪರ್ವತದ ತಪ್ಪಲಿನಲ್ಲಿ ಕತೆ ನಡೆಯುವುದು, ನಾಯಿಕೆಗೆ ಸ್ವಯಂವರದಲ್ಲಿ ಮತ್ತಾರಲ್ಲಿಯೂ ಮನವೊಲಿಯದಿರುವುದು—ಇವೇ ಮೊದಲಾದುವು

ಪರಸ್ಪರ ಸಂಬಂಧವನ್ನು ಸೂಚಿಸುತ್ತವೆ. ಆದರೆ ನೇಮಿಚಂದ್ರನ ಕೈವಾಡವೂ ಕೌಶಲ್ಯವೂ ಕಾಣುವುದು ಅವುಗಳಿಗಿರುವ ವ್ಯತ್ಯಾಸಗಳಲ್ಲಿ. ಸುಬಂಧುವಿನ ಗ್ರಂಥದಲ್ಲಿ ಕಥಾಸೂತ್ರ ಬಹು ಶಿಥಿಲವಾದುದು. ಆದರ ಉತ್ತರಾರ್ಧಕ್ಕೂ ಇಲ್ಲಿಯ ಕತೆಗೂ ಸ್ವಲ್ಪವೂ ಸಾಮ್ಯವಿಲ್ಲ. ಆ ಕಥೆಯ ಪ್ರಕಾರ ವಾಸವ ದತ್ತೆಯು ವಿರಹದಿಂದ ತಪಿಸುತ್ತಿರುವಾಗ ಅವಳ ಸಖಿಯರು ತಮಾಲಿಕೆಯೆಂಬ ಶಾರಿಕೆಯ ಮೂಲಕ ಕಂದರ್ಪಕೇತುವಿಗೆ ಒಂದು ಕಾಗದವನ್ನು ಕಳುಹಿಸುವರು. ಅದರಿಂದ ಎಲ್ಲ ವಿಷಯವನ್ನು ತಿಳಿದ ನಾಯಕನು ಮಕರಂದನೊಡನೆ ಕುಸುಮ ಪುರಕ್ಕೆ ಬಂದು ಲೀಲಾವತಿಗೂ ಪುಷ್ಪಕೇತುವಿಗೂ ನಿಷ್ಕರ್ಷೆ ಯಾಗಿದ್ದ ವಿವಾಹವನ್ನು ತಪ್ಪಿಸಿ ಸಖಿಯರ ಪ್ರಾರ್ಥನೆಯ ಪ್ರಕಾರ ವಾಸವದತ್ತೆಯನ್ನು ಕುದುರೆಯ ಮೇಲೆ ಕೂರಿಸಿ ಕೊಂಡು ಹೊರಟು ವಿಂಧ್ಯಾಟವಿಗೆ ಬಂದು ಸೇರುವನು. ರಾತ್ರಿ ಆಯಾಸ ಪರಿಹಾರಕ್ಕಾಗಿ ಪ್ರಿಯಪ್ರೇಯಸಿಯರು ಒಂದು ಲತಾಮಂಟಪದಲ್ಲಿ ಪವಡಿಸುವರು. ಮಾರನೆಯದಿನ ಉದಯಕಾಲದಲ್ಲಿ ಪತಿದೇವನ ಉಪಚಾರಕ್ಕಾಗಿ ಹಣ್ಣು ಹಂಪಲುಗಳನ್ನು ತರಲು ಅವನಿಗಿಂತ ಮುಂಚೆ ಎದ್ದುಹೋದ ವಾಸವದತ್ತೆಯನ್ನು ಇಬ್ಬರು ಕಿರಾತರು ಕಂಡು ಅವಳ ಮೇಲೆ ಮೋಹಗೊಂಡು ಅವಳನ್ನು ಪಡೆಯಲು ತಮ್ಮ ತಮ್ಮಲ್ಲಿಯೇ ಕಾದಾಡಿ ಮಡಿಯುವರು. ತಪೋವನವೆಲ್ಲವೂ ರಕ್ತಮಯವಾಗಲು ಅಲ್ಲಿದ್ದ ಮುನಿಯು ಕೋಪಗೊಂಡು ಅವಳಿಂದ ತನ್ನಾಶ್ರಮವು ಅಪವಿತ್ರವಾಯಿತೆಂದು ವಾಸವ ದತ್ತೆಯು ಕಲ್ಲಾಗುವಂತೆ ಶಾಪ ಕೊಡುವನು. ವಾಸವ ದತ್ತೆಯು ವಿಶೇಷವಾಗಿ ಬೇಡಿಕೊಂಡ ಮೇಲೆ ಆ ಮುನಿಯು

ಕಂದರ್ಪಕೇತುವಿನ ಸ್ಪರ್ಶದಿಂದ ಶಾಪವಿಮೋಚನವಾಗುವುದೆಂದು ತಿಳಿಸುವನು. ಅವಳು ಕಲ್ಲಾಗುವಳು. ಕಂದರ್ಪಕೇತುವು ಪ್ರಿಯೆಯನ್ನು ಕಾಣದೆ ವಿರಹದಿಂದ ತೊಳಲಿ ಸಮುದ್ರದ ದಡವಲ್ಲೆಲ್ಲಾ ಅಲೆದು ಪ್ರಾಣಹತ್ಯ ಮಾಡಿಕೊಳ್ಳಬೇಕೆಂದು ಯತ್ನಿಸುತ್ತಿರುವಾಗ ಅಶರೀರವಾಣಿಯಾದುದನ್ನು ಕೇಳಿ ಶಿಲಾಪ್ರತಿಮೆಯನ್ನು ಅಪ್ಪಿಕೊಂಡು ವಾಸವದತ್ತೆಯನ್ನಾಗಿಸಿ ಅವಳೊಡನೆ ತನ್ನೂರಿಗೆ ತೆರಳುವನು.

ಬಹುಶ್ರುತನೂ ವಿದ್ವಾಂಸನೂ ಆದ ನೇಮಿಚಂದ್ರನು ತನ್ನ ಕತೆಯಲ್ಲಿ ಅನೇಕ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾನೆ. ಆತನಿಗೆ ತನ್ನ ಹಿಂದೆ ಇದ್ದ ಅನೇಕ ಗ್ರಂಥಗಳ ಪರಿಚಯವಿದ್ದಿರಬೇಕು. ಅವುಗಳಿಂದೆಲ್ಲ ಕೆಲವಂಶಗಳನ್ನು ಆಯ್ದು ತುಂಬಿ ತನ್ನ ಕತೆಯನ್ನು ಭಾವಪೂರ್ಣವನ್ನಾಗಿ ಮಾಡಿದ್ದಾನೆ. ಐಂದ್ರಜಾಲಿಕನಾದ ಮಾಯಾಭುಜಂಗನ ಪ್ರಸಂಗವನ್ನು ರಾಜಶೇಖರನ 'ಕರ್ಪೂರ ಮಂಜರಿ'ಯಿಂದ ಆರಿಸಿಕೊಂಡಿರಬೇಕು. ಲೀಲಾವತಿಯು ಲತೆಯಾಗಿ ಹೋಗುವ ಭಾಗವು ಕಾಳಿದಾಸನ 'ವಿಕ್ರಮೋರ್ವಶೀಯ'ದ ಮೂರನೆಯ ಅಂಕದಿಂದ ಪ್ರೇರಿತವಾಗಿರಬೇಕು. ಪದ್ಮಾವತಿ, ಅಂಬಿಕಾ, ಜೈನ ದೇವಾಲಯಗಳು, ಬೋಧಸಿಂಧು ಭಟಾರಕರು, ಚಂದ್ರಪ್ರಭಜಿನ, ಚಂದ್ರಲೇಖೆ, ವಿದ್ಯುಲ್ಲೇಖೆ ಮೊದಲಾದವರನ್ನು ಕತೆಯ ಮಧ್ಯೆ ಸೇರಿಸಿ ಕಥೆಗೆ ಜೈನ ಧರ್ಮದ ಛಾಯೆಯನ್ನು ತಂದಿದ್ದಾನೆ. ಮಹಾಕಾವ್ಯದ ಪ್ರಧಾನ ಅಂಗಗಳಾದ ಅಷ್ಟಾದಶವರ್ಣನೆಗಳನ್ನು ಮಧ್ಯೆ ಮಧ್ಯೆ ಸೇರಿಸಿ ನವರಸಗಳಿಗೂ ಸ್ಥಾನಗಳನ್ನು ಕಲ್ಪಿಸಿದ್ದಾನೆ. ಕೆಲವು ಉಲ್ಲೇಖಗಳು ವಾಸ್ತವವಾಗಿಯೂ ಆಕರ್ಷಕವಾಗಿವೆ. ಚಂದ್ರಲೇಖೆ, ವಿದ್ಯು

ಳ್ಗೆಳತಿಯರ ವೃತ್ತಾಂತ, ಅವರು ಪರ್ಣಲಘು ವಿದ್ಯೆಯಿಂದ ನಾಯಕನನ್ನು ನಾಯಿಕೆಯಲ್ಲಿಗೆ ಕರೆದುತರುವುದು, ಫಲಕದ ನೆಪವಾದ ಮನಸ್ತಾಪ, ಮದನಮಂಜರಿಯ ವೃತ್ತಾಂತ ಮೊದಲಾದುವು ಕವಿಯ ಸ್ವಂತವಾದ ಜೋಡಣೆಗಳು. ಪುಷ್ಪಕೇತುವಿನ ಪ್ರಸಂಗವನ್ನೂ ನಾಯಿಕೆಯು ಶಿಲೆಯಾಗುವುದನ್ನೂ ಮಾರ್ಪಡಿಸಿಕೊಂಡಿರುವುದು ರಸವತ್ತಾಗಿದೆ. ನಾಯಿಕೆಯು ನಾಯಕನ ಚಿತ್ರಪಟವನ್ನು ಬರೆಯುವುದು, ಅಂತಃಪುರದಲ್ಲಿ ಪ್ರಿಯಪ್ರೇಯಸಿಯರ ಸುಖಾನುಭವ, ಅಂಬಿಕಾವನದಲ್ಲಿ ಲೀಲಾವತೀಕಂದರ್ಪದೇವರ ಪ್ರಣಯಪ್ರಸಂಗ, ಮದನಮಂಜರಿಯಿಂದ ಕಂದರ್ಪದೇವನು ಕುರವಕವಾಗುವಿಕೆ ಇವೇ ಮೊದಲಾದವು ರೋಮಾಂಚಕಾರಿಯಾಗಿವೆ.

ಸುಮಾರು ಕ್ರಿ. ಶ. ೮೦೦ ರಲ್ಲಿ ಕುತೂಹಲನೆಂಬ ಕವಿಯಿಂದ ರಚಿತವಾದ 'ಲೀಲಾವತಿ'ಯೆಂಬ ಹೆಸರಿನ [1]ಪ್ರಾಕೃತ ಗ್ರಂಥ[1]ವೊಂದಿದೆ. ಇದು ಪ್ರತಿಷ್ಠಾನಪುರದರಸನಾದ ಹಾಲ (ಶಾತವಾಹನ) ನಿಗೂ ಸಿಂಹಳ ಪುತ್ರಿಯಾದ ಲೀಲಾವತಿಗೂ ಸಂಬಂಧಿಸಿದ ಪ್ರೇಮಕಥೆ. ಅದಕ್ಕೂ ನೇಮಿಚಂದ್ರನ ಲೀಲಾವತಿಗೂ ಸಾಕ್ಷಾತ್ ಸಾಮ್ಯಗಳಲ್ಲದಿದ್ದರೂ ಕತೆಯ ಹೆಸರಿನ ಸಾಮ್ಯ, ಪ್ರೇಮದ ಬೆಳವಣಿಗೆಯ ಸ್ವರೂಪ ಮೊದಲಾದುವೇ ಅಲ್ಲದೆ ಗಂಧನದಿ, ಅದರ ಪಕ್ಕದ ಅಂಬಿಕಾ ದೇವಾಲಯ, ಅಲ್ಲಿಯ ಜಿನಭಿಕ್ಷು ಮೊದಲಾದುವುಗಳ ವರ್ಣನೆ ಕುತೂಹಲನ ಗ್ರಂಥದಲ್ಲಿ ಬರುವ ಗೋದಾವರಿ, ಭವಾನೀದೇವಾಲಯ.

---

1 ಈ ಗ್ರಂಥವನ್ನು ಡಾ|| ಎ. ಎನ್. ಉಪಾಧ್ಯೆಯವರು ಉತ್ತಮ ರೀತಿಯಲ್ಲಿ ಸಂಶೋಧಿಸಿ ಪೀಠಿಕಾದಿ ಉಪಯುಕ್ತಾಂಶಗಳೊಡನೆ ಪ್ರಕಟಿಸಿದ್ದಾರೆ.

ಅಲ್ಲಿರುವ ನಗ್ನಪಾಶುಪತ ಮೊದಲಾದುವುಗಳನ್ನು ಜ್ಞಾಪಕಕ್ಕೆ ತರುತ್ತವೆ. ನೇಮಿಚಂದ್ರನು ಪ್ರಾಕೃತದಲ್ಲಿ ವಿದ್ವಾಂಸನಾಗಿರುವುದೇ ಅಲ್ಲದೆ ತನ್ನ ಗ್ರಂಥವಾದ ಲೀಲಾವತಿಯಲ್ಲಿ ಮಧ್ಯೆ ಮಧ್ಯೆ ಪ್ರಾಕೃತ ಶ್ಲೋಕಗಳನ್ನೂ ಉಪಯೋಗಿಸಿರುವುದರಿಂದ ಅವನಿಗಿಂತ ಹಿಂದೆ ಇದ್ದ ಈ ಪ್ರಾಕೃತ ಲೀಲಾವತಿ ಕತೆಯು ಅವನಿಗೆ ಯಥೋಚಿತವಾಗಿ ಪರಿಚಿತವಾಗಿದ್ದು ಅವನ ಗ್ರಂಥದ ಮೇಲೆ ಅಲ್ಪ ಸ್ವಲ್ಪ ಪರಿಣಾಮಕಾರಿಯಾಗಿರಬಹುದು.

ನೇಮಿಚಂದ್ರನ ಲೀಲಾವತಿಯಲ್ಲಿ ಅಲ್ಲಲ್ಲಿ ಕೆಲವು ರಸಸ್ಥಾನಗಳಿವೆ. ಆತನು ಹೇಳಿರುವಂತೆ ಅದನ್ನೂ ಅದರ ಕವಿಯನ್ನೂ ಅವನ ಕಾಲದವರು ಮೆಚ್ಚಿ ಹೊಗಳಿರುವುದಲ್ಲದೆ ಮುಂದೆ ಬಂದ ಕವಿಗಳೂ ಬಾಯಿತುಂಬ ಕೊಂಡಾಡಿದ್ದಾರೆ.

ಸುಮನೋಧರ್ಮ ಗುಣಂಗಳೊಳ್+ಅಮ[1]ರ್ದು+ಅಮರ್ದಂ
ಕಱೆವ[1] ನೇಮಿಚಂದ್ರನಬಾಣಂ
ಭ್ರಮರಹಿತಂ ಮೃದುಹೃದಯಂಗೆ+ಅಮುಮೆ ನಿಪುದು+
ಇದಾವ ಕೌತುಕಂ ಬುಧಜನದಾ ।

ಎಂದು ಪಾರ್ಶ್ವನು ಹೊಗಳಿದ್ದಾನೆ. 'ಶಾಸ್ತ್ರಲೌಕಿಕ ಕಲಿಯೊಳ್ ಬೇರ್ವರಿದ ನೇಮಿಜನ್ನರೆ ಕರ್ಣಾಟಕೃತಿಗೆ ಸೀಮಾಪುರುಷರ್' ಎಂಬುದು ಮಧುರನ ಮೆಚ್ಚಿಗೆಯ ಮಾತು. 'ಶೃಂಗಾರಕಾವ್ಯ ಲೀಲಾವತಿಯನು ಪೇಳ್ದಾಂಗಿಕನೇಮಿಯ ನೆನೆವೆ' ಎಂದು ಮಂಗರಸನೂ ಮಣಿದಿದ್ದಾನೆ. ದೊಡ್ಡಯ್ಯ, ಬಾಹುಬಲಿ, ದೇವಚಂದ್ರರು ಕಾದಂಬರಿಯನ್ನು ಸುಡಿಸಿ

---

1. ಸೇರಿಕೊಂಡು ಅಮೃತವನ್ನು ಕರೆಯುತ್ತಿರುವ

ಲೀಲಾವತಿಗೆ ಕಪ್ಪಿಡಿಸಿದ ಸನ್ನಿವೇಶಗಳನ್ನು (ನಂಬುವುದು ಕಷ್ಟವಾಗಿದ್ದರೂ) ಏಕಕಂಠದಿಂದ ನುಡಿದಿದ್ದಾರೆ. ಇಷ್ಟಾದರೂ ಲೀಲಾವತಿಯನ್ನು ಓದಿದ ಮೇಲೆ ನೇಮಿಚಂದ್ರನಿಗೆ ಉಚ್ಚ ಕಾವ್ಯದೃಷ್ಟಿಯಿಂದ ಅಗ್ರಸ್ಥಾನವನ್ನು ಕೊಡಲಾಗುವುದಿಲ್ಲ. ಅವನ ಪ್ರಧಾನಧ್ಯೇಯವಾದ ಶೃಂಗಾರರಸಪ್ರತಿಪಾದನೆಯೇ ಉಚ್ಚಮಟ್ಟಕ್ಕೇರಿಲ್ಲ. ಹೃದಯದ ಮಿಡಿತಕ್ಕಿಂತ, ಭಾವನಾ ನಾಡಿಗಳ ಸ್ಪಂದನಕ್ಕಿಂತ ಬಾಹ್ಯವೂ ಚಾಕ್ಷುಷವೂ ಆದ ದೈಹಿಕವರ್ಣನೆಗೆ ಪ್ರಾಮುಖ್ಯತೆಯುಂಟಾಗಿದೆ. ವ್ಯಂಗ್ಯಕ್ಕಿಂತ ವಾಚ್ಯವು ಹೆಚ್ಚು ಪುರಸ್ಕೃತವಾಗಿದೆ. ಸ್ವಚ್ಛವಾದ ನಾಗರಿಕವಾದ ಸಂಕೋಚವನ್ನುಂಟುಮಾಡದಿರುವ ಶೃಂಗಾರ ವರ್ಣನೆ ಅಲ್ಲಿಲ್ಲ. ಕೃತಕವೂ ಅನೇಕ ಕಡೆ ನೀರಸವೂ ಆದ ವರ್ಣನೆಗಳಿಂದ ಕಥಾಸೂತ್ರವೇ ಮರೆಯಾಗಿ ಹೋಗುತ್ತದೆ. ಕಥಾಸಂವಿಧಾನದಲ್ಲಿಯೂ ಅದ್ಭುತವಾದ ಸನ್ನಿವೇಶಗಳ ಚಿತ್ರಣವಿಲ್ಲ. ವ್ಯಕ್ತಿಗಳಂತೂ ಬಹು ಸಪ್ಪೆ. ನಾಯಕ ನಾಯಿಕೆಯರು ತಮ್ಮ ಸ್ವಂತ ಭಾವನಾತರಂಗಗಳಿಂದಲೂ ಕ್ರಿಯೆಗಳಿಂದಲೂ ವಾಚಕರನ್ನು ಆಕರ್ಷಿಸುವಂತಿಲ್ಲ. ಗ್ರಂಥಕ್ಕೆ ಪ್ರಾಶಸ್ತ್ಯ ದೊರೆತಿರುವುದು ಅದು ಶೃಂಗಾರಕಾವ್ಯವಾಗಿರುವುದರಿಂದ ಮಾತ್ರ.

ಆದರೆ ಕನ್ನಡ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಲೀಲಾವತಿಗೆ ಪ್ರತ್ಯೇಕ ಸ್ಥಾನವಿದೆ. ಅಖಂಡ ಹಳಗನ್ನಡ ಸಾಹಿತ್ಯದಲ್ಲಿ ನಾಲ್ಕೇ ಆದ (ಕಾದಂಬರಿ, ಲೀಲಾವತಿ, ಕುಸುಮಾವಳಿ, ದಶಕುಮಾರಚರಿತ್ರೆ) ಲೌಕಿಕ ಕಥಾ ಕಾವ್ಯಗಳಲ್ಲಿ ಇದೂ ಒಂದಾಗಿರುವುದರಿಂದ ಇದಕ್ಕೆ ಗಣ್ಯತೆಯುಂಟು.

ನೇಮಿನಾಥ ಪುರಾಣ.

ನೇಮಿಚಂದ್ರನ ಮತ್ತೊಂದು ಗ್ರಂಥ ನೇಮಿನಾಥಪುರಾಣ. ಇದು ೨೨ ನೆಯ ತೀರ್ಥಂಕರನಾದ ನೇಮಿನಾಥನ ಚರಿತೆ. ಇದರಲ್ಲಿ ಜಿನವಂಶ, ಹರಿವಂಶ ಕುರುವಂಶಗಳ ಚರಿತ್ರೆಗಳು ಉಕ್ತವಾಗಿವೆ. ಅಂದರೆ ಜಿನನ ಪೂರ್ವಭವಾವಳಿ ಮತ್ತು ಪಂಚ ಕಲ್ಯಾಣಗಳ ವಿವರಣೆಗಳೊಂದಿಗೆ ಭಾರತ ಮತ್ತು ಭಾಗವತದ ಕತೆಗಳು ಮಿಳಿತವಾಗಿವೆ. ಇದು ಅರ್ಧಕ್ಕೆ ನಿಂತುಹೋಗಿರು ವುದರಿಂದ ಅರ್ಧ ನೇಮಿಯೆಂದೂ ಪ್ರಸಿದ್ಧಿಯಾಗಿದೆ. ಹರಿವಂಶ ಪುರಾಣವೆಂಬುದು ಇದರ ಮತ್ತೊಂದು ಹೆಸರು.

ನೇಮಿನಾಥನ ಕತೆಯು ಜೈನರಲ್ಲಿ ಬಹು ಜನಪ್ರಿಯವೂ ಆಕರ್ಷಕವೂ ಆದುದು. ಈ ಕತೆಯು ನೇಮಿಚಂದ್ರನಗಿಂತ ಹಿಂದೆಯೂ ಅವನಾದ ಮೇಲೆಯೂ ಅನೇಕರಿಂದ ಬೇರೆ ಬೇರೆ ಭಾಷೆಗಳಲ್ಲಿ ರಚಿತವಾಗಿವೆ. ಕ್ರಿ. ಶ. ೭೮೩ ರಲ್ಲಿ ಪುನ್ನಾಟ ಸಂಘದ ಒಂದನೆಯ ಜಿನಸೇನಾಚಾರ್ಯನು ೧೨೦೦೦ ಶ್ಲೋಕ ಪರಿಮಿತಿಯುಳ್ಳ ಹರಿವಂಶ ಪುರಾಣವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದನು. ಇವನಿಂದ ೧೧೫ ವರ್ಷಗಳಾದ ಮೇಲೆ ಗುಣ ಭದ್ರಾಚಾರ್ಯನು ತನ್ನ ಉತ್ತರ ಪುರಾಣದ ಭಾಗವಾಗಿ ಇದೇ ಕತೆಯನ್ನು ಸುಮಾರು ೧೨೫೦ ಶ್ಲೋಕಗಳಲ್ಲಿ ಸಂಗ್ರಹಿಸಿದ್ದಾನೆ. ಉಪಲಬ್ಧವಲ್ಲದ ಕವಿಪರಮೇಶ್ವರನ 'ವಾಗರ್ಥಸಂಗ್ರಹ'ವು ಇವೆರಡಕ್ಕೂ ಮೂಲವಿರಬೇಕೆಂದು ಊಹಿಸಲ್ಪಟ್ಟಿದೆ. ಸುಮಾರು ೧೧ನೆಯ ಶತಮಾನದಲ್ಲಿ ವಾಗ್ಭಟನು 'ನೇಮಿನಿರ್ವಾಣ ಕಾವ್ಯ' ವನ್ನು ರಚಿಸಿದ್ದಾನೆ. ಇದಕ್ಕೆ ೧೫ನೆಯ ಶತಮಾನದಲ್ಲಿದ್ದ ಜ್ಞಾನಭೂಷಣನ 'ನೇಮಿನಿರ್ವಾಣ ಕಾವ್ಯಪಂಚಿಕಾ' ಎಂಬ ಟೀಕೆಯಿದೆ. ಅಪಭ್ರಂಶ ಭಾಷೆಯಲ್ಲಿ ಸ್ವಯಂಭುಕೃತ 'ಹರಿ

ವಂಶ ಪುರಾಣ' ವೇ ಪ್ರಾಚೀನವಾದುದು. ಧವಲ (೧೦ ನೆಯ ಶತಮಾನ) ಯಶಃಕೀರ್ತಿ (೧೪೬೨) ಇವರು ಇದೇ ಹೆಸರಿನ ಮತ್ತೆರಡು ಗ್ರಂಥಗಳನ್ನು ರಚಿಸಿದ್ದಾರೆ. ಹರಿಭದ್ರ (೧೧೫೯) ಅಮರಕೀರ್ತಿ (೧೧೯೦) ಲಕ್ಷ್ಮಣದೇವರು (ಸು ೧೪೫೦ ಕ್ಕಿಂತ ಹಿಂದೆ) ಇದೇ ವಿಷಯಕವಾದ 'ಣೇಮಿಣಾಹಚರಿಉ' ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡದಲ್ಲಿಯೂ ಈ ವಿಷಯಕವಾದ ಗ್ರಂಥಗಳಿಗೆ ಕೊರತೆಯೇನೂ ಇಲ್ಲ. ಇವುಗಳಿಗೆಲ್ಲ ಸಾಮಾನ್ಯವಾಗಿ ಒಂದನೆಯ ಜಿನಸೇನನ ಹರಿವಂಶಪುರಾಣವೇ ಮೂಲವಿರಬೇಕು. ಕನ್ನಡ ನೇಮಿನಾಥ ಚರಿತ್ರೆಗಳಲ್ಲಿ ಒಂದನೆಯ ಗುಣವರ್ಮನ (ಸು ೯೦೦) 'ಹರಿವಂಶ'ವೇ ಪ್ರಾಚೀನವಾದುದು. ಈ ಗ್ರಂಥವು ಉಪಲಬ್ಧವಲ್ಲ. ಹತ್ತನೆಯ ಶತಮಾನಾಂತ್ಯದಲ್ಲಿ ಚಾವುಂಡರಾಯನು ತನ್ನ 'ತ್ರಿಷಷ್ಠಿಶಲಾಕಾಪುರುಷ ಪುರಾಣ'ದ ಭಾಗವಾಗಿ ನೇಮಿತೀರ್ಥಂಕರ ಚರಿತೆಯನ್ನು ಗದ್ಯದಲ್ಲಿ ರಚಿಸಿದ್ದಾನೆ. ಸು ೧೧೪೦ ರಲ್ಲಿ ಕರ್ಣಪಾರ್ಯನಿಂದ 'ನೇಮಿನಾಥಪುರಾಣವೊಂದು' ಚಂಪೂ ರೀತಿಯಲ್ಲಿ ರಚಿತವಾಗಿದೆ. ನೇಮಿಚಂದ್ರನಾದಮೇಲೆ ರಚಿತವಾದ ಬಂಧುವರ್ಮನ (ಸು ೧೨೦೦) 'ಹರಿವಂಶಾಭ್ಯುದಯ' ವೂ ಮಹಾಬಲಕವಿಯ (ಸು ೧೨೫೪) 'ನೇಮಿನಾಥಪುರಾಣ' ವೂ ಮಂಗರಸನ (೧೫೦೮) 'ನೇಮಿಜಿನೇಶಸಂಗತಿ'ಯೂ ಇದೇ ವಿಷಯಕವಾದ ಗ್ರಂಥಗಳು.

ಜೈನರು ವೈದಿಕಕತೆಗಳನ್ನು ಮಾರ್ಪಡಿಸಿಕೊಂಡಿರುವಂತೆಯೇ ಇತಿಹಾಸಗಳಾದ ರಾಮಾಯಣ ಮಹಾಭಾರತಗಳನ್ನು ತಮ್ಮ ಧರ್ಮಕ್ಕೆ ಸಮನ್ವಯವಾಗುವಂತೆ ಅಳವಡಿಸಿಕೊಂಡಿದ್ದಾರೆ. ಜೈನಧರ್ಮದ ಪ್ರಧಾನ ಭಾಗವಾದ ಪಂಚಾ

ಣುವ್ರತಗಳಿಗೆ ಹೊಂದಿಕೊಳ್ಳುವಂತೆ ಮಾರ್ಪಡಿಸಿ ಪವಾಡ ಅಥವಾ ಐತಿಹ್ಯಭಾಗಗಳನ್ನೆಲ್ಲಾ ಕಾರ್ಯಕಾರಣಗಳಿಂದ ಸಜ್ಜು ಗೊಳಿಸಿದ್ದಾರೆ. ನೇಮಿನಾಥಪುರಾಣವು ಮಹಾಭಾರತದ ಜೈನಸಂಪ್ರದಾಯವನ್ನು ತೋರಿಸಿಕೊಡಲು ಬಹಳ ಸಹಾಯಕ ವಾಗಿದೆ.

ನೇಮಿಚಂದ್ರನು ತನ್ನ ನೇಮಿನಾಥಪುರಾಣದಲ್ಲಿ ಜಿನ ಕತೆಯೊಡನೆ ವಸುದೇವಾಚ್ಯುತಕಂದರ್ಪರ ಕತೆಗಳನ್ನು ಸಮಾವೇಶಗೊಳಿಸಿ ಹೇಳಿದ್ದಾನೆ. ಇದರ ಆದಿ ಭಾಗದಲ್ಲಿ ನೇಮಿತೀರ್ಥಂಕರನ ಪೂರ್ವಭವಾವಳಿಗಳಾದ ವಿಂಧ್ಯಕಶಬರ ಇಭ್ಯಕೇತು, ಸೌಧರ್ಮಕಲ್ಪಜ, ಚಿಂತಾಗತಿಖಚರ, ಮಹೇಂದ್ರ ಕಲ್ಪಜ, ಅಪರಾಜಿತ, ಅಚ್ಯುತೇಂದ್ರ, ಸುಪ್ರತಿಷ್ಠ, ಪಂಚಾಣೂತ್ತರಾಹಮಿಂದ್ರರ ವಿಷಯಗಳು ಸಂಗ್ರಹವಾಗಿಯೂ ಸ್ವಾರಸ್ಯವಾಗಿಯೂ ಉಕ್ತವಾಗಿವೆ. ಮುಂದೆ ಹರಿವಂಶ ಕುರುವಂಶಗಳ ಉತ್ಪತ್ತಿ, ವಸುದೇವ ಪ್ರತಾಪ ವರ್ಣನೆ, ವಾಸುದೇವ ಜನನ, ಬಾಲಲೀಲಾವರ್ಣನ, ಕಂಸವಧಾಂತ ವಾಗಿ ಕಾವ್ಯವು ನಿಂತು ಹೋಗಿದೆ. ಬಹುಶಃ ಗ್ರಂಥ ಪೂರ್ಣ ವಾಗುವುದರೊಳಗೆ ಕವಿ ತೀರಿಕೊಂಡನೋ ಏನೊ.

ಪ್ರಸಕ್ತವಾದ ನೇಮಿನಾಥ ಪುರಾಣವು ಜಿನಸೇನ, ಗುಣ ಭದ್ರಾಚಾರ್ಯರ ಕತೆಯಂತೆಯೇ ಅಪರಾಜಿತನ ಕತೆಯಿಂದ ಪ್ರಾರಂಭವಾಗುತ್ತದೆ. (ಕರ್ಣಾರ್ಯನು ಮಾತ್ರ ಇಭ್ಯಕೇತು ವಿನ ಕತೆಯಿಂದ ಆರಂಭಿಸುತ್ತಾನೆ.) ಅಲ್ಲಿ ಬರುವ ಕಥಾ ಭಾಗವನ್ನು ಈ ರೀತಿ ಸಂಗ್ರಹಿಸಬಹುದು:—ಸುಗಂಧಿಲ ದೇಶದ ಸಿಂಹಪುರದ ದೊರೆ ಅರ್ಹದ್ದಾಸ. ಆತನ ಪತ್ನಿ ಜಿನದತ್ತೆ. ಇವರಿಬ್ಬರಿಗೂ ಹಲವು ವ್ರತಗಳ ಫಲವಾಗಿ ಅಪರಾಜಿತನೆಂಬ

ಪುತ್ರನು ಜನಿಸಿದನು. ಅರ್ಹದ್ದಾಸನು ಮಗನು ಪ್ರಾಪ್ತ ವಯಸ್ಕನಾದಮೇಲೆ ಒಂದು ದಿನ ತನ್ನ ಊರ ಹೊರಗಣ ಉದ್ಯಾನದಲ್ಲಿ ವಿಮಲವಾಹಕ ಭಟ್ಟಾರಕರ ಸಮವಸರಣಕ್ಕೆ ವಂದಿಸಲು ಹೋಗಿದ್ದಾಗ ಧರ್ಮವನ್ನು ಕೇಳಿ ವೈರಾಗ್ಯ ಪರನಾಗಿ ಮಗನಲ್ಲಿ ರಾಜ್ಯವನ್ನಿರಿಸಿ ಜಿನದೀಕ್ಷೆಗೊಂಡು ಸತ್ತು ಮೋಕ್ಷವನ್ನೈದಿದನು. ಇದನ್ನು ಕೇಳಿದ ಅಪರಾಜಿತನು ತಂದೆ ಯನ್ನು ನೋಡಿದಲ್ಲದೆ ಊಟಮಾಡುವುದಿಲ್ಲವೆಂದು ಹಟಹಿಡಿಯ ಲಾಗಿ ದೇವೇಂದ್ರನು ಹೆದರಿ ಕುಬೇರನ ಮೂಲಕ ಕೃತಕವಾದ ರೀತಿಯಲ್ಲಿ ಅರ್ಹದ್ದಾಸನನ್ನು ತೋರಿಸಿದನು. ತೃಪ್ತಿಗೊಂಡ ಅಪರಾಜಿತನು ಸುಖವಾಗಿ ಕಾಲಕಳೆಯುತ್ತಿರಲು ಒಂದು ದಿನ ಜಿನಭವನದಲ್ಲಿ ಜಿನಬಿಂಬವನ್ನು ಪೂಜಿಸುತ್ತಿರುವಾಗ ಅಲ್ಲಿಗೆ ಬಂದ ಚಾರಣಯುಗಳವನ್ನು ಕಂಡು ನನಗೆ ನೀವು ಪರಿಚಿತ ರಂತಿದೆ, ನನ್ನ ನಿಮ್ಮ ಸಂಬಂಧವನ್ನು ತಿಳಿಸಿ ಎಂದು ಕೇಳಿ ಕೊಳ್ಳಲು ಅವರಲ್ಲಿ ಹಿರಿಯ ಮುನಿಗಳು ಈ ರೀತಿ ಹೇಳಿದರು.

'ಗಂಧಿಲ ದೇಶದಲ್ಲಿ ಸೂರ್ಯಪ್ರಭಪುರದರಸು ಸೂರ್ಯ ಪ್ರಭ. ಆತನ ಪ್ರಾಣಪ್ರಿಯೆ ಧಾರಿಣಿ. ಅವರಿಗೆ ಚಿಂತಾಗತಿ, ಮನೋಗತಿ, ಚಪಲಗತಿಗಳೆಂಬ ಮೂರು ಮಕ್ಕಳಾದರು. ಅತ್ತ ದಕ್ಷಿಣ ಶ್ರೇಣಿಯ ಅರಿಂದಮಪುರದರಸು ಅರಿಂಜಯ. ಅವನ ಗೃಹಿಣಿ ಅಜಿತ ಸೇನಾದೇವಿ. ಅವರ ಮಗಳು ಪ್ರೀತಿಮತಿ. ಅವಳ ಸ್ವಯಂವರಕ್ಕಾಗಿ ಮಂದರ ಪರ್ವತದಲ್ಲಿ ಗಗನಗಮನ ವಿಜಯ ಸ್ಪರ್ಧೆಯನ್ನೇರ್ಪಡಿಸಿದ್ದರು. ಮನೋಗತಿಯೂ ಚಪಲಗತಿಯೂ ಆ ಸ್ಪರ್ಧೆಯಲ್ಲಿ ಸೋಲಲು ಚಿಂತಾಗತಿಯು ಆಕೆಯನ್ನು ಗೆದ್ದು ತಮ್ಮಂದಿರಲ್ಲಿ ಒಬ್ಬರನ್ನು ಮದುವೆ ಯಾಗೆಂದು ಹೇಳಿದನು. ಅವಳು ಅದಕ್ಕೆ ತನ್ನನ್ನು ಗೆದ್ದವನ

ನ್ನಲ್ಲದೆ ಅನ್ಯರಲ್ಲಿ ಮನಸ್ಸು ಮಾಡುವುದಿಲ್ಲವೆಂದು ಹೇಳಿ ನಿರ್ವೇಗಪರಳಾಗಿ ಜಿನದೀಕ್ಷೆಗೊಂಡಳು. ಚಿಂತಾಗತಿಯೂ ಜಿನದೀಕ್ಷೆಗೊಂಡು ಜೀವಿತಾಂತ್ಯದಲ್ಲಿ ಮಹೇಂದ್ರಕಲ್ಪದಲ್ಲಿ ಸಾಮಾನಿಕದೇವನಾಗಿ ಹುಟ್ಟಿ ಅನೇಕ ಕಾಲ ಸುಖವಾಗಿದ್ದು ಈಗ ಅಪರಾಜಿತನಾಗಿದ್ದೀಯೆ. ಚಪಳಗತಿ ಮನೋಗತಿಗಳಾಗಿದ್ದ ನಾವೂ ನಿರ್ವೇಗಪರರಾಗಿ ಜಿನದೀಕ್ಷೆಗೊಂಡು ಸತ್ತು ಗಗನವಲ್ಲಭಪುರದ ಗಗನಚಂದ್ರ ಮಹಾರಾಜನಿಗೂ ಗಗನಸುಂದರಿಗೂ ಅಮಿತಗಾಮಿ ಅಮಿತತೇಜ ಎಂಬ ಮಕ್ಕಳಾಗಿ ಹುಟ್ಟಿ ಪುಂಡರೀಕಿಣಿಯಲ್ಲಿ ಸ್ವಯಂಪ್ರಭ ತೀರ್ಥಂಕರರಿಂದ ನಿನ್ನ ಇರವನ್ನು ತಿಳಿದು ನಿನ್ನನ್ನು ನೋಡಲು ಬಂದಿದ್ದೇವೆ ಎಂದು ಹೇಳಿ ತಮ್ಮ ಹಿಂದಿನ ವಿಂಧ್ಯಕ-ವಾಗುರೆ, ಇಭ್ಯಕೇತು-ಕಮಳಪ್ರಭೆ, ಶ್ರೀದೇವ ವಿಮಳ ಪ್ರಭೆ ಮೊದಲಾದ ಕಳೆದುಹೋದ ಭವ ಪಂಚಕಗಳನ್ನು ತಿಳಿಸಿ ಅಪರಾಜಿತನಿಗೆ ಇನ್ನು ಒಂದು ತಿಂಗಳು ಮಾತ್ರ ಆಯುಷ್ಯವೆಂದೂ ಅದರೊಳಗೆ ಪರಲೋಕ ಹಿತವನ್ನು ಮಾಡಿಕೊಳ್ಳಬೇಕೆಂದೂ ತಿಳಿಸಲಾಗಿ ಅಪರಾಜಿತನು ಅವರ ಉಪಕಾರವನ್ನು ಕೊಂಡಾಡಿ ತನ್ನ ಮಗ ಪ್ರೀತಂಕರನಿಗೆ ರಾಜ್ಯವನ್ನಿತ್ತು ತಪಸ್ಸುಮಾಡಿ ಸಂನ್ಯಸನದಿಂದ ಸತ್ತು ಸಾಂತರವಿಮಾನದಲ್ಲಿ ಅಚ್ಯುತೇಂದ್ರನಾಗಿದ್ದು ತದಾಯುರವಸಾನದಲ್ಲಿ ಹಸ್ತಿನಾಪುರದ ಚಂದ್ರನಿಗೂ ಶ್ರೀಮತಿಗೂ ಪ್ರತಿಷ್ಠನೆಂಬ ಮಗನಾಗಿ ಹುಟ್ಟಿ ಯಶೋಧರ ಮುನಿಗಾಹಾರದಾನಮಾಡಿ ಪಂಚಾಶ್ಚರ್ಯವನ್ನು ಪಡೆದು ಒಂದುದಿನ ದಿಗವಲೋಕನ ಸಂದರ್ಭದಲ್ಲಿ ಉಲ್ಕಾಪಾತವನ್ನು ನೋಡಿ ವಿರಕ್ತನಾಗಿ ಸುದೃಷ್ಟಿಯೆಂಬ ಮಗನಿಗೆ ರಾಜ್ಯವಿತ್ತು ಸುಮಂದರ ಮುನಿಗಳ ಪಕ್ಕದಲ್ಲಿ ದೀಕ್ಷೆಗೊಂಡು ಸಂನ್ಯಸನದಿಂದ

ಸತ್ತು ಜಯಂತ ವಿಮಾನದಲ್ಲಿ ಅಹಮಿಂದ್ರನಾದನು. ಇವನೇ ಮುಂದೆ ಹರಿವಂಶದ ಸಮುದ್ರವಿಜಯನಿಗೆ ಮಗನಾಗಿ ನೇಮಿನಾಥನಾಗಿ ಜನಿಸುವವನು.

ಇತ್ತ ಭರತಕ್ಷೇತ್ರದ ಕೃತಾರ್ಥವೆಂಬ ವಿಷಯದಲ್ಲಿ ಶೌರ್ಯಪುರವೆಂಬ ನಗರವುಂಟು. ಅದರರಸು ಶೂರಸೇನ. ಆತನ ಮಗ ಶೂರವೀರ. ಆತನ ಹೆಂಡತಿ ಧಾರಿಣಿ (ವಾರಿಣಿ?) ಅವರಿಬ್ಬರಿಗೂ ಅಂಧಕವೃಷ್ಟಿ ನರವೃಷ್ಟಿ ಎಂಬ ಇಬ್ಬರು ಮಕ್ಕಳು. ಇವರಲ್ಲಿ ಅಂಧಕವೃಷ್ಟಿಗೆ ಸುಭದ್ರೆಯೆಂಬುವಳರಸಿ. ಇವರಿಗೆ ಸಮುದ್ರವಿಜಯನೇ ಮೊದಲಾದ ಹತ್ತು ಮಂದಿ ಪುತ್ರರೂ ಕೊಂತಿ ಮಾದ್ರಿಯೆಂಬ ಪುತ್ರಿಯರೂ ಆದರು. ಪುತ್ರರಲ್ಲಿ ವಸುದೇವನೇ ಕೊನೆಯವನು. ವಸುದೇವನು ಹೊರತು ಉಳಿದ ರಾಜಕುಮಾರರು ಶಿವದೇವಿಯೇ ಮೊದಲಾದ ಪ್ರೇಯಸಿಯರೊಡನೆ ಸುಖವಾಗಿರುತ್ತಿದ್ದರು. ನರವೃಷ್ಟಿಯ ಮನಃಪ್ರಿಯೆ ಪದ್ಮಾವತಿ. ಅವರಿಗೆ ಉಗ್ರಸೇನ, ಮಹಾಸೇನ, ದೇವಸೇನರೆಂಬ ಗಂಡು ಮಕ್ಕಳೂ ಗಾಂಧಾರಿಯೆಂಬ ಹೆಣ್ಣು ಮಗಳೂ ಆದರು.

ಅತ್ತ ಕುರುವಂಶದ ಶವಕಿ (?) ಯೆಂಬರಸನಿಗೆ ಪರಾಶರ ನೆಂಬುವನು ಮಗ. ಈತನಿಗೂ ಮತ್ಸ್ಯಕುಲಜಾತೆಯಾದ ಸತ್ಯವತಿಗೂ ಯಶೋವಲ್ಲಭನಾದ ವ್ಯಾಸನು ಹುಟ್ಟಿದನು. ಪರಾಶರಸುತನಾದ ವ್ಯಾಸನಿಗೂ ಸುಭದ್ರೆಗೂ ಧೃತರಾಷ್ಟ್ರ ಪಾಂಡು ವಿದುರರು ಮಕ್ಕಳಾದರು. ಪಾಂಡುವಿಗೆ ಕುಂತಿಯ ರೂಪುಲಾವಣ್ಯಗಳನ್ನು ನೋಡಿ ಮೋಹವುಂಟಾಯಿತು. ವಿರಹ ವೇದನೆಯನ್ನನುಭವಿಸಲಾರದೆ ವಸಂತವಾಸಂತವೆಂಬುದ್ಯಾನ ಭವನದಲ್ಲಿರಲು ಆ ವನದ ಸೊಬಗಿಗೆ ಮಾರುಹೋಗಿ ವಜ್ರ

ಮಾಳಿಯೆಂಬ ವಿದ್ಯಾಧರನು ತನ್ನ ಮನಃಪ್ರಿಯೆ ಮನೋಹರಿ ಎಂಬುವಳೊಡನೆ ವನವಿಹಾರಕ್ಕೆ ಬಂದು ವನವಿಹಾರವಾದ ಮೇಲೆ ತನ್ನ ಕಾಮ ಮುದ್ರಿಕೆಯನ್ನು ಮರೆತುಹೋದನು. ಅದು ಪಾಂಡುರಾಜನಿಗೆ ಸಿಕ್ಕಿತು. ಅದನ್ನು ಹುಡುಕಿಕೊಂಡು ಹಿಂದಕ್ಕೆ ಬಂದ ವಿದ್ಯಾಧರನಿಂದ ಅದು ಕಾಮರೂಪಸಾಧನ ವೆಂದು ತಿಳಿದು ಪಾಂಡುವು ತನ್ನ ಇಷ್ಟಾರ್ಥ ಸಾಧನೆಯಾಗುವ ವರೆಗೆ ತನ್ನಲ್ಲಿಯೇ ಇರಲು ಅವಕಾಶವನ್ನು ಪಡೆದು ಅದರ ಸಹಾಯದಿಂದ ತನ್ನ ಮನದನ್ನೆಯಾದ ಕುಂತಿಯ ಅಂತಃ ಪುರಕ್ಕೆ ಹೋಗಿ ಅವಳಿಗೆ ತನ್ನ ನಿಜಸ್ವರೂಪವನ್ನು ತೋರಿಸಿ ಅವಳಲ್ಲಿ ಸಂಸರ್ಗಮಾಡಿದನು. ಆಕೆಯು ಗರ್ಭವನ್ನು ತಳೆದು ಮಗನನ್ನು ಹೆತ್ತಳು. ಕನ್ಯಾವಸ್ಥೆಯಲ್ಲಿಯೇ ಆ ಮಗನನ್ನು ಪಡೆದುದರಿಂದ ತನ್ನಲ್ಲಿ ಇರಿಸಿಕೊಳ್ಳುವುದು ಉಚಿತವಲ್ಲೆಂದು ಮಗುವನ್ನು ಪೊನ್ನ ಮಂದಸಿನಲ್ಲಿಟ್ಟು ಸಖಿಯರ ಮೂಲಕ ಯಮುನೆಯಲ್ಲಿ ಬಿಡಿಸಿದಳು. ಅದನ್ನು ಚಂಪಾನಗರದ ಆದಿತ್ಯನೆಂಬರಸನು ನೋಡಿ ಪೆಟ್ಟಿಗೆಯಲ್ಲಿದ್ದ ಆ ಮಗುವನ್ನು ತನ್ನರಸಿ ರಾಧೆಯೆಂಬವಳಿಗೆ ಕೊಟ್ಟನು. ಆ ಮಗುವು ರಾಧೆಯ ಕಿವಿಯನ್ನು ಮುಟ್ಟಿದುದರಿಂದ ಅದಕ್ಕೆ ಕರ್ಣನೆಂದು ಹೆಸರಾ ಯಿತು. ಆತನು ಬಹು ಶೌರ್ಯದಿಂದಲೂ ಔದಾರ್ಯ ದಿಂದಲೂ ಬೆಳೆಯುತ್ತಿದ್ದನು.

ಕುಂತಿಗೆ ಪಾಂಡುರಾಜನಲ್ಲಿ ಮೋಹವು ವೃದ್ಧಿಯಾಗು ತ್ತಿರುವುದನ್ನು ಅಂಧಕವೃಷ್ಟಿ ತಿಳಿದು ಅವಳನ್ನೂ ಮಾದ್ರಿ ಯನ್ನೂ ಪಾಂಡುರಾಜನಿಗೆ ಧಾರೆಯೆರೆದನು. ಅವರಿಗೆ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವರೆಂಬ ಮಕ್ಕಳಾದರು. ಹಾಗೆಯೆ ನರಪತಿವೃಷ್ಟಿಯೂ ತನ್ನ ಮಗಳು

ಗಾಂಧಾರಿಯನ್ನು ಧೃತರಾಷ್ಟ್ರನಿಗೆ ಕೊಟ್ಟು ಮದುವೆ ಮಾಡಿದನು. ಅವರಿಗೆ ದುರ್ಯೋಧನ ದುಶ್ಶಾಸನ ಮೊದಲಾದ ನೂರು ಮಕ್ಕಳಾದರು. ಒಂದುದಿನ ಶೂರವೀರನು ಗಂಧಮಾದನ ಗಿರಿಯಲ್ಲಿ ಸುಪ್ರತಿಷ್ಠ ಮುನಿವರರಲ್ಲಿ ಧರ್ಮವನ್ನು ಕೇಳಿ ಅಂಧಕವೃಷ್ಟಿಗೆ ರಾಜ್ಯವಿತ್ತು ದೀಕ್ಷೆಗೊಂಡನು. ಮತ್ತೆ ಹನ್ನೆರಡು ವರುಷಗಳಾದ ಮೇಲೆ ಸುಪ್ರತಿಷ್ಠ ಮುನಿಗಳು ಪ್ರತಿಮಾಯೋಗದಲ್ಲಿರಲು ಸುದರ್ಶನನೆಂಬ ದೇವನು ಅಲ್ಲಿಗೆ ಬಂದು ಉಪಸರ್ಗಮಾಡಿದನು. ಅದನ್ನು ಸಹಿಸಿಕೊಂಡು ಸುಪ್ರತಿಷ್ಠ ಮುನಿಗಳು ತಪಸ್ಸುಮಾಡಿ ಕೇವಲಿಗಳಾದರು. ಆಗ ಇತರರೊಡನೆ ಪೂಜೆಗೆ ಹೋಗಿದ್ದ ಅಂಧಕವೃಷ್ಟಿಯು ಸುದರ್ಶನನ ಉಪಸರ್ಗಕ್ಕೆ ಕಾರಣವನ್ನು ತಿಳಿದು ವೈರಾಗ್ಯವನ್ನು ತಾಳಿ ತನ್ನ ಮಗನಾದ ಸಮುದ್ರವಿಜಯನಿಗೆ ರಾಜ್ಯವನ್ನಿತ್ತು ತಪಸ್ಸುಮಾಡಿ ಮೋಕ್ಷವನ್ನು ಪಡೆದನು.

ಸಮುದ್ರವಿಜಯನು ದಿಕ್ಪಾಲಕರಂತಿರುವ ತನ್ನ ಎಂಟು ಜನ ತಮ್ಮಂದಿರೊಡನೆ ಸುಖವಾಗಿ ರಾಜ್ಯವಾಳುತ್ತಿರಲಾಗಿ ಅವನ ಕಿರುತಮ್ಮನಾದ ವಸುದೇವನು ತನ್ನ ರೂಪು ಲಾವಣ್ಯಗಳಿಂದ ಧರೆಗೆ ಕಣ್ಣುಮುಳ್ಳಾದನು. ಅವನು ಪ್ರತಿದಿನವೂ ಆತ್ಮಸಂತೋಷಕ್ಕಾಗಿ ಪುರವೀಥಿಗಳಲ್ಲಿ ವಿಹಾರಯಾತ್ರೆಯನ್ನು ಮಾಡುತ್ತಿರಲಾಗಿ 'ಆ ರತಿರತ್ನಮೇರುಗೆ ಮರುಳ್ಗೊಂಡಿರ್ದರಬ್ಜಾಕ್ಷಿಯರ್'

ಶ್ರೀಯುಂ ಸರಸತಿಯುಂ [1]ಜಯ
ಜಾಯೆ[1] ಯನಾ ವೀರಲಕ್ಷ್ಮಿಯುಂ [1] ಜಸವೆಣ್ಣುಂ

---

1 ಜಯಲಕ್ಷ್ಮಿ

ಜ್ಯಾಯನೆಜಿಗಿಸಿದ ನೀಜಿಂ
ಸ್ತ್ರೀಯರನೇಜಿಗಿಸುವುದರಿದೆ ಮನುಜಮನೋಜಂ

ಆತನು ಬೀದಿಯಲ್ಲಿ ಹೊರಟತಕ್ಷಣವೆ 'ಪೊಱಲೊಳುಳ್ಳ ಬಿಲ ವೆಂಡಿರುಂ ಕುಲವೆಂಡಿರುಂ ಕಾಪಱಿದು ಮರುಳ್ಗೊಂಡದಂ ಕಂಡು ಪೌರಜನವೆಲ್ಲ ಸಮುದ್ರವಿಜಯನಲ್ಲಿಗೆ ಹೋಗಿ ಮೊರೆಯಿಡಲು ಅವನು ಅವರು ತಂದಿದ್ದ ಮಕ್ಕಳೆಲ್ಲವೂ ವಸುದೇವನ ರೂಪ ಚೇಷ್ಟಿತ್ತಿದಂತಿದ್ದುದನ್ನು ಕಂಡು ಆಶ್ಚರ್ಯಭರಿತನಾಗಿ ಅವನನ್ನು ಹೊರಗೆಹೋಗದಂತೆ ಮಾಡಲಿಚ್ಛಿಸಿ ತಮ್ಮನನ್ನು ಒಳ್ಳೆಯ ಮಾತಿನಲ್ಲಿ ಹತ್ತಿರಕ್ಕೆ ಕರೆಯಿಸಿ, ಅನುಜ-ಇದೇಕೆ ನಿನ್ನ ಮೆಯ್ ಪೊಸೆದಪೂವಿನಂತಾಪುದು ಆನಿದಂ ಬಗೆದೆನ್; ಅಡುವೊ ಬಿಸಿ ಲೊಳೀಗಳಬ್ಜೇಕ್ಷಣಾ?' ನೀರೊಳಂ ನೆೞಲೊಳಂ ಒಲ್ದಂತೆ ಪೊಲಿರ್ದು ಉಟ್ಟುಂ ತೊಟ್ಟುಂ ಸಂತಸದಿಂ ಪೂವಿನಂತೆ ಸುಖ ಮಿರಲಾಗಾ! ರಾಜಕುಮಾರರ್ ಆರ್ ಕಂಡರ್ ಆರ್ ಕೇಳ್ದ ರೆಂಬಂತಿರವೇೞ್ಕುಂ. ತಿಟ್ಟನೆ ತಿರಿದು ಬಟ್ಟೆಸಿರಿವಂದೊಡೆ ಮೆಯ್ಯ ಬಣ್ಣಂ ಪೋಕುಂ; ಲೋಕದ ಕಿಸುಱುಂ ಕಣ್ಣೆಂಜಲುಂ ಪತ್ತುಗುಂ; ಇನ್ನೆಂದುಂ ಮನೆಯ ಪೊಸಂತಿಲಂ ಪೊಱಮಡ ಲಾಗದು, ಈ ಕೃತಕಾಚಳಮೊಳ್ ವನವಿಹಾರಮನೆಸಗು" ಎಂದು ಒಳ್ಳೆಯ ಮಾತಿನಿಂದಲೆ ಅವನನ್ನು ಅರಮನೆಯೊಳಗೆ ಬಂಧಿಸಿಟ್ಟನು. ವಸುದೇವನು ಅಣ್ಣನ ಮಾತನ್ನು ನಿಜವೆಂದೇ ನಂಬಿ ಅಲ್ಲಿ ಕೆಲಕಾಲವಿದ್ದು ಒಬ್ಬ ಚೇಟಿಕೆಯಿಂದ ತಾನು ಬಂಧಿತನಾಗಿರುವುದನ್ನು ತಿಳಿದು ದುಃಖಿಸಿ ರಾತ್ರಿ ತಾನಿದ್ದ ಕೊಟಡಿಯ ಗವಾಕ್ಷದಿಂದ ಇಳಿದು ಯಾರಿಗೂ ಗೊತ್ತಿಲ್ಲದಂತೆ ಶ್ಮಶಾನದಕಡೆ ಹೊರಟು ಅಲ್ಲಿ ಒಂದು ಪತ್ರವನ್ನು ಬರೆದು

ತನ್ನ ಆಭರಣಗಳನ್ನೆಲ್ಲ ಅದರೊಡನಿಟ್ಟು ತಾನು ಹೋದ ಹೆಜ್ಜೆ ಯಾರಿಗೂ ಅರಿಯದಂತೆ ನಡೆದು ಹೊರಟುಹೋದನು. ಮಾರನೆಯದಿನ ಸಮುದ್ರವಿಜಯನು ಅದನ್ನರಿತು ತಮ್ಮನ ಸಾವಿಗೆ ಮರುಗುತ್ತಿರಲು ಅರಿತವರು 'ಅವನು ಸತ್ತಿಲ್ಲ, ಕೆಲವು ದಿವಸಗಳಲ್ಲಿಯೇ ನಿನ್ನಲ್ಲಿಗೆ ಬರುತ್ತಾನೆ' ಎಂದು ಸಮಾಧಾನ ಮಾಡಿದರು.

ಇತ್ತ ವಸುದೇವನು ಶ್ಮಶಾನದಿಂದ ವಿಜಯಖೇಟದ ಕಡೆ ಹೊರಟು ಅಲ್ಲಿಯ ವನದಲ್ಲಿ ತನಗಾಗಿಯೇ ಕಾಯುತ್ತಿದ್ದ ಮಗಧಾಧಿಪತಿಯ ಮಗಳಾದ ಶ್ಯಾಮಳೆ ಎಂಬುವಳನ್ನು ಮದುವೆ ನಿಂದು ಕೆಲವು ದಿನವಿರ್ದು ಅಲ್ಲಿಂದ ಹೊರಟು ಮುಂದೆ ಅರಣ್ಯದಲ್ಲಿ ನಡೆದು ಕುಸುಮಾಕರವೆಂಬ ಸರೋವರದ ಸಮೀಪದಲ್ಲಿ ಬಹು ಭೀಕರವಾಗಿದ್ದ ಆನೆಯ ಸೊಕ್ಕನ್ನಡಗಿಸಿ ನಿಳಿಂಪಪುರದರಸು ಅಶನಿವೇಗನ ಮಗಳಾದ ಶಾಲ್ಮಲಿದತ್ತೆಯನ್ನು ವರಿಸಿ ಸುಖವಾಗಿ ಕಾಲಕಳೆಯುವನು. ಒಂದುದಿನ ಅವರಿಬ್ಬರು ಸುಖನಿದ್ರೆಯಲ್ಲಿರುವಾಗ ಪೂರ್ವಭವದ ದ್ವೇಷದಿಂದ ಖಚರನೊಬ್ಬನು ವಸುದೇವನನ್ನು ಸೆಳೆದುಯ್ಯಲು ಶಾಲ್ಮಲಿದತ್ತೆ ಅವನನ್ನು ಬೆನ್ನಟ್ಟಿಹೋಗಿ ಬಿಡಿಸಿಕೊಂಡು ಬರುತ್ತಾ ದಾರಿಯಲ್ಲಿ ಒಂದು ದಿವ್ಯ ಧ್ವನಿಯ ಆದೇಶದಂತೆ ವಸುದೇವನನ್ನು ಪರ್ಣಲಘು ವಿದ್ಯೆಯಿಂದ ಚಂಪಾಪುರದ ಹೊರಭಾಗದ ಉದ್ಯಾನದಲ್ಲಿರಿಸಿ ಹೋಗುವಳು. ವಸುದೇವನು ಅಲ್ಲಿ ಚಾರುದತ್ತನ ಕೊಳ್‌ಮಗಳಾದ ಗಂಧರ್ವದತ್ತೆಯನ್ನು ವಿಷ್ಣುವಿನ ತ್ರಿವಿಕ್ರಮಾವತಾರದಲ್ಲಿ ಗಂಧರ್ವದೇವರು ಅನುಗ್ರಹಿಸಿದ್ದ ಘೋರಾವಿ ಸಾರಾರಿಯೆಂಬ ವೀಣೆಗಳ ವಂಶಕ್ಕೆ ಸೇರಿದ ವೀಣೆಗಳಿಂದ ವೈಣಿಕಸ್ವಯಂವರದಲ್ಲಿ ಗೆದ್ದು ಮದುವೆ ನಿಂದು

ಕೆಲಕಾಲ ಸುಖವಾಗಿದ್ದು ಅಲ್ಲಿಗೆ ಬಂದ ಭಟ್ಟರಿಬ್ಬರಿಂದ ರೋಹಿಣಿದೇವಿಯ ಸ್ವಯಂವರ ವಾರ್ತೆಯನ್ನರಿತು ಪರ್ಣಲಘು ವಿದ್ಯೆಯಿಂದ ಮಾಗಧಿಯೆಂಬ ನಗರಿಗೆ ತೆರಳುವನು. ಅಲ್ಲಿ ಸ್ವಯಂವರ ಮಂಟಪದಲ್ಲಿ ವಸುದೇವನು ಪಾಣವಿಕನ (ಮದ್ದಲೆಯವನ) ವೇಷದಲ್ಲಿ ರೋಹಿಣಿಯನ್ನು ಗೆಲ್ಲುವನು. ಅಸೂಯೆಯಿಂದ ಮೇಲೆ ಬಿದ್ದ ರಾಜರುಗಳನ್ನೂ ತಿಳಿಯದೆ ತನ್ನ ಮೇಲೆ ಯುದ್ಧವಾಡಿದ ತನ್ನ ಅಣ್ಣನಾದ ಸಮುದ್ರ ವಿಜಯನನ್ನೂ ಸೋಲಿಸಿ ತನ್ನನ್ನು ಪರಿಚಯ ಮಾಡಿಕೊಂಡು ಸಮುದ್ರ ವಿಜಯನ ಆ ದೇಶದ ಮೇಲೆಯೇ ರೋಹಿಣಿಯನ್ನೂ ಮತ್ತಿತರ ಹದಿನಾರುಸಾವಿರ ಕನ್ಯಾರತ್ನಗಳನ್ನೂ ಸ್ವೀಕರಿಸಿ ಸುಖದಿಂದಿದ್ದು ಅಲ್ಲಿ ಬಂದ ಅನೇಕರಿಗೆ ಬಿಲ್ವಿದ್ಯೆಯನ್ನು ಕಲಿಸುತ್ತಿರಲು ಉಗ್ರಸೇನನ ಮಗನಾದ ಮಂಡೋದರಿಯೆಂಬುವಳಿಂದ ಪೋಷಿತನಾದ ಕಂಸನೆಂಬುವನು ಅವನ ಶಿಷ್ಯನಾಗಿ ಬಂದು ಸೇರಿ ಅದ್ಭುತಶಕ್ತಿಯನ್ನು ಸಂಪಾದಿಸುವನು. ಅದೇ ಕಾಲಕ್ಕೆ ಸರಿಯಾಗಿ ಮಗಧ ಚಕ್ರವರ್ತಿಯಾದ ಜರಾಸಂಧನು ಸಿಂಹರಥನ ಉಪಟಳವನ್ನು ಸಹಿಸಲಾರದೆ ಅವನನ್ನು ಜಯಿಸುವವನಿಗೆ ತನ್ನ ಮಗಳಾದ ಜೀವಂಜಸೆಯನ್ನೂ ಕೇಳಿದ ನಾಡನ್ನೂ ಉಂಬಳಿಯಾಗಿ ಕೊಡುವೆನೆಂದು ಘೋಷಣೆ ಮಾಡಿಸಿ ವಸುದೇವನಲ್ಲಿಗೆ ದೂತರನ್ನಟ್ಟುವನು. ಅಲ್ಲಿದ್ದ ಕಂಸನು ಆ ವಾರ್ತೆಯನ್ನು ಕೇಳಿ ತಾನೆ ಹೋಗಿ ಸಿಂಹರಥನನ್ನು ಸಂಹರಿಸಿ ವಸುದೇವನಿಗೊಪ್ಪಿಸಿ ಅವನ ಆಶೆಯ ಮೇರೆಯೇ ಕಂಸನ ಮಗಳಾದ ಜೀವಂಜಸೆಯನ್ನೂ ತನಗಪ್ರಿಯನಾಗಿದ್ದ ತಂದೆಯ ಮಗಧ ರಾಜ್ಯವನ್ನೂ ಜರಾಸಂಧನಿಂದ ಪಡೆದು ಜನಕನನ್ನು ಸಂಕಲೆಯೊಳಿಟ್ಟು ವಸುದೇವನನ್ನು

ಬರಸಿ ಸಿಂಹಾಸನಾಲಂಕೃತನನ್ನಾಗಿ ಮಾಡಿ ಹೀಗೆಂದು ಬೇಡಿಕೊಳ್ಳುವನು.

ಆನೆತ್ತ+[1] ಅರ್ಕಸುತ [1]ಪ್ರವಾಹಭರಮೆತ್ತ+ಅಲ್ಲಿರ್ದ
[2]ಮಂಜೂಷೆ[2]ಯೆ
ತ್ತ+ಆ ನೀಚಾಶ್ರಯಂ+ಎತ್ತ ನಿಮ್ಮ ಬರವೆತ್ತ+ಈ ಶಾಸ್ತ್ರ
ಶಸ್ತ್ರಶ್ರಮಂ
ತಾನೆತ್ತ+ಇಕ್ಕುವುದೆತ್ತ ಸಿಂಹರಥನಂ, ಚಕ್ರಿಪ್ರಸಾದೋದಯಾ
ಧೀನಂ ರಾಜ್ಯಮಿದೆತ್ತ+ಅದೇವುದು+ಇದಿನಿತುಂ
ಯುಷ್ಮತ್ಪ್ರಸಾದೋದಯಂ

ಅದರಿಂದೆ+ಎನ್ನು ಮುನ್+ಎನ್ನ ರಾಜ್ಯಭರಮಂ ಸಪ್ತಾಂಗಮಂ
ಸಸ್ಯಸಂ
ಪದಮಂ[3]ವಾರಿದಂ[3]+ಅಂಬುಜಾತವನಮಂ [4]ತಿಗ್ಮಾಂಶು[4]
ನೀಲೋತ್ಪಲಾ
ಸ್ಪದಮಂ [5]ಶೀತಾಂಶು ಮರೀಚಿ[5] ರಕ್ಷಿಸುವವೊಲ್ ನೀಂ
ರಕ್ಷಿಸೆಂದಂದು ಬೇ
ಡಿದನಾತಂ ನತಮೌಳಿರತ್ನರುಚಿಗಳ್ ತಳ್ಪೊಯ್ಯೆ
ದಿಗ್ಭಾಗಮಂ ||

ಅಲ್ಲದೆ—

ಭೂವರ ವಸುದೇವಂಗೆ ಮ
ಹೀವಿಶ್ರುತ ಕಂಸರಾಜನಿತ್ತಂ ಬುಧಸಂ

---

1 ಯಮುನಾನದಿ. 2 ಪೆಟ್ಟಗೆ. 3 ಮೋಡ. 4 ಸೂರ್ಯ.
5 ಚಂದ್ರಕಿರಣ.

ಭಾವಕಿಯಂ ಮನ್ಮಥ ಸಂ
ಜೀವಿಕಿಯಂ [1]ವಿಹಿತವಿಭವದಿಂ[1] ದೇವಕಿಯಂ

ವಸುದೇವನು ದೇವಕಿಯೊಡನೆ ಸುಖಸಾಮ್ರಾಜ್ಯದಲ್ಲೋಲಾಡುತ್ತಿರಲು ಒಂದು ದಿನ ಮಧುರಾಪುರಕ್ಕೆ ದೇವಕಿಯಗ್ರಜರಾದ ಅತಿಮುಕ್ತಕರೆಂಬ ಮುನಿಗಳು ಚರಿಗೆ ಬರಲು ಕಂಸನ ಹೆಂಡತಿಯಾದ ಜೀವಂಜಸೆಯು 'ತನ್ನ ಕುಲವಲ್ಲರಿಯನ್ನು ಬೇರ್ವೆರಸು ಕಿತ್ತೆತ್ತುವಂತೆ' ದೇವಕಿಯಾನಂದ ವಸ್ತ್ರವನ್ನು ಅವರ ಮುಂದೆತ್ತಿ ಅವರನ್ನು ಅವಮಾನಪಡಿಸಲು ಅವರು ಕೋಪೋದ್ರಿಕ್ತರಾಗಿ

ಜೀವಂಜಸೆ ಯುದ್ಧನಿಬ
ದ್ದಾವನಿಯೊಳ್ ನಿನ್ನ ಗಂಡನಂ ತಂದೆಯುಮಂ
ದೇವಕಿಗೆ ಪುಟ್ಟಿದಾತನೆ
ದೇವರ್+ಕಾದೊಡ[2]ಮಡರ್ತು[2] ಕೊಲ್ಲದೆ ಮಾಣಂ

ಎಂದು ಶಾಪವಿತ್ತರು. ಅದನ್ನು ಕೇಳಿದ ಕಂಸನು ಚಿಂತಾಕ್ರಾಂತನಾಗಿ ಪತ್ನಿಯನ್ನು ಸಮಾಧಾನಗೊಳಿಸಿ 'ವಿನೀತಿ ಧೂರ್ತಲಕ್ಷಣಂ' ಎನ್ನುವ ಹಾಗೆ ಭಯಸ್ಥನಾಗಿ ವಸುದೇವನನ್ನು ಬೇಡಿ ದೇವಕಿಯನ್ನು ತವರಿಗೆ ಕರೆದೊಯ್ಯುವ ನೆಪದಲ್ಲಿ ಅವರಿಬ್ಬರನ್ನೂ ಸೆರೆಯಲ್ಲಿಟ್ಟು ಆಕೆಯ ಶಿಶುಗಳನ್ನೆಲ್ಲ ಕೊಲ್ಲುವ ಏರ್ಪಾಟು ಮಾಡಿದನು. ದೇವಕಿಯು ಮೂರು ಅವಳಿ ಕೂಸುಗಳನ್ನು ಹೆತ್ತಳು. ನೈಗಮದೇವನು ಅವುಗಳನ್ನು ಮಳಯಾಚಲಕ್ಕೆ ಕೊಂಡೊಯ್ದು ಆ ಸ್ಥಳದಲ್ಲಿ ಮಾಯಾ

---

1 ಉಚಿತವಾದ ವೈಭವ. 2. ಮೇಲೆ ಬಿದ್ದು.

ಶಿಶುವನ್ನಿಟ್ಟನು. ಆ ಮಾಯಾಶಿಶುಗಳನ್ನು ನೃಶಂಸನಾದ ಕಂಸನು ಕೊಂದಿಕ್ಕಿದನು. ಪುನಃ ದೇವಕಿಯು ಗರ್ಭವನ್ನು ತಾಳಿ ಭಾದ್ರಪದದಷ್ಟಮಿಯ ಅರ್ಧ ರಾತ್ರಿಯಲ್ಲಿ

[1]ಅಳಿ[1]ಯಂ ಪದ್ಮಿನಿ, [2]ವಾರ್ಧಿವೇಳೆ[2] ವಿಷಮುಂ, ಕಸ್ತೂರಿಯಂ ಪುಲ್ಲೆ[3] ಕ
ಜ್ಜಳ[3]ಮಂ ದೀಪಿಕೆ, ಕಾಳರಾತ್ರಿ ತಮಮುಂ, [4]ನೀಲಾಶ್ಮ[4]ಮಂ [5]ರೋಹಣ
ಸ್ಥಳಿ[5], ಭೂದೇವಿ[6]ತಮಾಳ[6]ಮಂ ಪಡೆವವೋಲ್ ನಾನಾ ಹಿತಾಂಕೂರಕಂ
ದಳನಂ ದೇವಕಿ ಲೀಲೆಯಿಂದೆ ಪಡೆದಳ್ ಕಂಸೋಷ್ಣನಂ ಕೃಷ್ಣನಂ॥

ಆಗ ವಸುದೇವನು ಕಂಸನ ಭಯದಿಂದ ಆ ಶಿಶುವನ್ನು ಮಧುರಾಪುರದ ಹೊರಗಿದ್ದ ಗೊಲ್ಲಪಳ್ಳಿಯ ನಂದನಿಗೆ ಕೊಟ್ಟು ಆತನಿಗೆ ಬೇಡದಿರ್ದ ಪೆಣ್ಗೂಸನ್ನು ತಂದು ದೇವಕಿಯ ಬಳಿಯಲ್ಲಿ ಮಲಗಿಸಲು ಕಂಸನು ಆ ಶಿಶುವನ್ನು ದೇವಕೀಪುತ್ರಿಯೆಂದೇ ಭಾವಿಸಿ ಅದರ ಮೂಗುಮುಱಿದು ಮುನಿಯ ಶಾಪವನ್ನು ಉತ್ತರಿಸಿದೆನೆಂದುಕೊಂಡನು. ಆ ಶಿಶುವು ಕೆಲ ಕಾಲಕಳೆದ ಮೇಲೆ ನಿರ್ವೇಗವನ್ನು ಪಡೆದು ಜಿನದೀಕ್ಷೆಯನ್ನು ವಹಿಸಿತು. ಆದರೆ ಮಧುರಾಪಟ್ಟಣದಲ್ಲಿ ಅನೇಕ ಉತ್ಪಾತಗಳುಂಟಾದುವು. ಕಂಸನು ಅವುಗಳಿಂದ ತನ್ನ ಶತ್ರುವು ಬೆಳೆಯು

---

1. ದುಂಬಿ. 2. ಸಮುದ್ರದ ಅಲೆ. 3. ಕಾಡಿಗೆ. 4. ನೀಲರತ್ನ. 5. ರೋಹಣ ಪರ್ವತ. 6. ಹೊಂಗೇ ಮರ.

ತ್ತಿರುವನೆಂಬುದನ್ನು ನೈಮಿತ್ತಿಕರಿಂದ ತಿಳಿದು ಅವನನ್ನು ಸಂಹಾರಮಾಡುವುದಕ್ಕಾಗಿ ತನ್ನ ಪೂರ್ವಭವದೆಣ್ಬರ್ ದೇವತೆಗಳನ್ನು ಕರೆದು 'ದೇವಕಿಯ ಮಗನೆಲ್ಲಿರ್ದ್ದಪನೆಂಬುದಂ ಭೇದಿಸಿ ಕೊಲ್ಲಿಂ' ಎನಲು ಅವರು ಪೂತಿನಿಯಾಗಿ, ಗಾಡಿಯಾಗಿ, ಮತ್ತಿಯ ಮರವಾಗಿ, ತಾಳೆಯ ಗಿಡವಾಗಿ, ಎತ್ತಾಗಿ, ಕತ್ತೆಯಾಗಿ, ಕುದುರೆಯಾಗಿ ಆ ಬಾಲಕನನ್ನು ಕೊಲ್ಲಲು ಪ್ರಯತ್ನಪಟ್ಟು ವಿಫಲರಾದರು. ಕೃಷ್ಣನ ಬಾಲಲೀಲೆಯು ಎಲ್ಲರಿಗೂ ಆಶ್ಚರ್ಯಕರವಾಯಿತು. ಒಂದು ದಿನ ಅತಿವೃಷ್ಟಿಯಾಗುತ್ತಿದ್ದಾಗ 'ಕೊಡೆಯಂ ಕ್ರೀಡಾರಸಕ್ಕೆತ್ತುವಂತೆ ಕಿಱ್ತೆತ್ತಿದನೊಂದೆ ಕೆಯ್ಯೊಳೆ ಮಹಾ ಗೋವರ್ಧನಾದ್ರೀಂದ್ರಮಂ. ಇನ್ನೊಂದು ದಿನ 'ಯಾವದಸ್ತಿಪ್ರತೀಕಾರಃ ತಾವತ್ಕುರ್ಯಾತ್ ಪ್ರತಿಕ್ರಿಯಾಂ' ಎಂಬ ಉದ್ದೇಶದಿಂದ ವೃಷಭಾಕಾರದಲ್ಲಿ ಬಂದ ಅರಿಷ್ಟನೆಂಬುವನನ್ನು ಸೋಲಿಸಿ ಓಡಿಸಿದ. ಇದೆಲ್ಲವನ್ನು ಕೇಳಿದ ದೇವಕಿ ವಸುದೇವರು ಸಂತೋಷಗೊಂಡು ಗೋಮುಖಿವ್ರತವ್ಯಾಜದಿಂದ ಬಂದು ಕೃಷ್ಣನನ್ನು ನೋಡಿ ತಮ್ಮ ಮಗನ ಶಕ್ತಿಗೂ ಸಾಹಸಕ್ಕೂ ವಿಸ್ಮಯಪಟ್ಟು ಹಿಂತಿರುಗಿದರು. ಆ ವೇಳೆಗೆ ಸರಿಯಾಗಿ ನಾಗಶಯ್ಯೆಯೂ ಶಾರ್ಙ್ಗಚಾಪವೂ ಹುಟ್ಟಿದುವು. ಆ ನಾಗಶಯ್ಯೆಯನ್ನೇಱುವವನು, ಆ ಶಾರ್ಙ್ಗಧರ್ಮವನ್ನೇಱಿಸುವವನು. ಆ ಪಾಂಚಜನ್ಯವ ಪೂರೈಸುವವನು ಚಕ್ರಿಯಾಗುವನೆಂದು ಕಂಸನು ನೈಮಿತ್ತಿಕರಿಂದ ತಿಳಿದು ಅದನ್ನು ಆಗಲೇ ಅರಿಯಬೇಕೆಂದು ಈ ಕೆಲಸಮಾಡಿದವರಿಗೆ ತನ್ನ ಮಗಳನ್ನು ಕೊಡುವೆನೆಂದು ಘೋಷಣೆಯಿಡಿಸಿದನು. ಒಡನೆಯೆ ಕೃಷ್ಣನು ಬಂದು ನಾಗಶಯ್ಯೆಯನ್ನೇರಿ ಶಾರ್ಙ್ಗಚಾಪಮನ್ನೇರಿಸಿ ಪಾಂಚಜನ್ಯವನ್ನು ಪೂರೈಸಿದನು. ಅದನ್ನು

ನೋಡಿ ಮೆಚ್ಚಿದಂತೆ ನಟಿಸಿ ಕಂಸನು ನಾಗಹ್ರದದೊಳಿರುವ ಸಾವಿರೆಸಳ ತಾವರೆಯ ಹೂವನ್ನು ತರಬೇಕೆಂದು ಕೃಷ್ಣನನ್ನು ಕೇಳಿಕೊಂಡನು. ಕೃಷ್ಣನು ವಿಷದ ಮಡುವಿನಂತಿರ್ದ ಕಾಳಿಂದಿಯ ಮಡುವನ್ನು ಕ್ರೀಡಾಸರೋವರವನ್ನು ಪ್ರವೇಶ ಮಾಡುವಂತೆ ಪ್ರವೇಶಿಸಿ ಅಲ್ಲಿದ್ದ ಕಾಳಿಯೆಂಬ ವಿಷ ಸರ್ಪವನ್ನು ಹಿಡಿದು ಅದರೊಡನೆ ಸಹಸ್ರದಳ ಕಮಲವನ್ನು ಕಂಸನಲ್ಲಿಗೆ ಅಟ್ಟಿದನು. ಯಾವ ವಿಧದಲ್ಲಿಯೂ ತನ್ನ ಶತ್ರುವು ನಾಶ ವಾಗದಿದ್ದುದನ್ನು ನೋಡಿ ತನ್ನ ಮಂತ್ರಿಗಳ ಸೂಚನೆಯಂತೆ ಕಂಸನು ಕುವಳಾಯಾಪೀಡನೆಂಬಾನೆಯನ್ನು ತರಿಸಿ ಅದರಿಂದ ಕೃಷ್ಣನನ್ನು ಸಂಹಾರಮಾಡುವ ಯೋಚನೆಮಾಡಿ ಹಾಗೆಯೇ ಚಾಣೂರನೆಂಬ ಮಲ್ಲನನ್ನು ಬರಮಾಡಿ 'ನಂದಸುತನ ಮೂಗಿಂ ಬಾಯಿಂದುಚ್ಚಳಿಸೆ ರುಧಿರಮೆನಗಾದಚ್ಚಿಗಮಂ ಮುಱಿ ವೊಡೊತ್ತಿ ಮುಱಿ ಚಾಣೂರ' ಎನಲು ಅವನು

ಕ್ಷೋಣಿಪ ನೀವೀ ಮಾತಂ
ಮಾಣಕ್ಕಟ ಕೀಡೆಯಂ [1]ಕಿಮುಳ್ಚು[1]ವುದಕ್ಕೀ
ಚಾಣೂರನೇಕೆ? ಮುಳಿದಾಂ
[2]ಪೂಣಿಸಿದೊಡೆ[2] ಕೃಷ್ಣನೆಂಬ ಮಾನಸನೊಳನೆ

'ಭಾವಿಪೊಡಾಂ ಜಟ್ಟಿಯವಂ ಗೋವಳನ್, ಎನಗಂ ದೇವಕಿ ಸುತಂಗಮುಜಗಜಾಂತರಮಲ್ತೆ, ದ್ರೋಹರನಾನೆಗಿಕ್ಕುವುದು [3]ತಕ್ಕುದಲ್ಲದೆ ತಗದೆನಲಾಗ[3] ನಾಳೆ ದೇವಕಿಯ[4]ಕ್ಕೆ[4]ಯನ್'

---

1 ಹಿಸುಕು, ಕಿಮಿಚು, 2 ಪ್ರತಿಜ್ಞೆಮಾಡಿದರೆ, 3 ಯೋಗ್ಯವಲ್ಲದೆ ಅಯೋಗ್ಯವೆಂದು ಹೇಳಲಾಗುವುದಿಲ್ಲ. 4 ಆಳುವಿಕೆ

ದೇವರಕಿವಿಗೆಯ್ದಿಸುವೆನ್' ಎನಲು ಕಂಸನು ಅಖಾಡವನ್ನು ಸಜ್ಜುಗೊಳಿಸಿ ಕೃಷ್ಣನನ್ನು ಬರಹೇಳಿ ಮಲ್ಲಗಾಳಕ್ಕೇರ್ಪಡಿಸಿದನು. ಆಗ

ಕಡೆದಂತಪ್ಪಂಗಮುಂ [1]ಕಂಡರಸಿ[1] ಬೆರಸಿದಂತಪ್ಪ[2]ಪಾಂಗ[2]
ಗಳುಂ ಮುಂ
ದಿಡೆ ಬಲ್ಪಿಂ ತುಂಬಿ ಬೀಳ್ಗೊಟ್ಟಿದ ಮಳಯಜದೊಳ್+ಮುಳ್ಗಿ
ನೀಳಾಳಕಂಬೊಲ್
ಕುಡೆ ಚೆಲ್ವಂ ಚಲ್ಲಣಂ ಚಂಡಿಕೆ ಮಿಳಿರೆ [3]ಭುಜಾಸ್ಫಾಳನಂ[3]
ಗೆಯ್ಯುತುಂ ಬೊ
ಬ್ಬಿಡುತಂ ಗಂಡೇಱಿ ಬಂದಂ ಮದಗಜಗತಿಯಿಂದುರ್ವಿ
ಚಾಣೂರಮಲ್ಲಂ ||

ಆ ವೇಳೆಗೆ ಸರಿಯಾಗಿ ಕೃಷ್ಣನೂ ಯಶೋದೆಯ ಆಶೀರ್ವಾದ ಪಡೆದು ಜೊತೆಯ ಗೋವಳರೊಡನೆ ಹೊರಟು ದಾರಿಯಲ್ಲಿ ರಜಕನನ್ನು ಮರ್ದಿಸಿ ಅವನಲ್ಲಿದ್ದ ರಾಜವಸ್ತ್ರಗಳಿಂದಲಂಕರಿಸಿಕೊಂಡು ಕಂಸನ ಅರಮನೆಯನ್ನು ಪ್ರವೇಶಿಸುತ್ತಿರುವಾಗಲೆ

[4]ಮುಗಿಲಂ ಮು[4]ಟ್ಟಿದ ಕಾಳಕಾಯ ಬಲದಿಂದ[5]ರ್ಕಂಗೆ[5]
ಕೋಡಿಟ್ಟ ಕೋ
ಡುಗಳಿಂ ಬೆಟ್ಟದ ಬೀಟಲಂತಲೆವ ಕೆಯ್ಯಿಂ ಪೃಥ್ವಿ
ಪಾತಾಳಮಂ

1 ಕೊರೆಯುವುದು, 2 ಕಡೆಗಣ್ಣಿನ ನೋಟ, 3 ತೋಳು ತಟ್ಟಿಕೊಳ್ಳುವುದು, 4 ಆಕಾಶ, ಮೋಡ, 5 ಸೂರ್ಯನಿಗೆ.

ಪುಗೆ ಗಾತ್ರಾಪರಮಿಟ್ಟು ಮೆಟ್ಟುವಳವಿಂ [1]ಸಪ್ತಾರ್ಚಿ
[1]ಯಂಸೂಸುವ[2]
ರ್ಚಿ[2]ಗಳಿಂದೇಂ ಕೆದಱುತ್ತೆ ಬಂದುದೊ[3]ಮದಸ್ತಂಬೇರಮಂ[3]
ಬೀರಮಂ ||

ಆಗ 'ಆ ಗಜಮಲ್ಲನೊಳ್ ಪ್ರತಿಮಲ್ಲಂ ಕೃಷ್ಣಂ ಸಿಂಹನಾದದಿನಾರ್ದು'

ಒತ್ತಿದೊಡೆ+ಒತ್ತಿ ಪತ್ತಿದೊಡೆ ಪತ್ತಿ ಪೊರಳ್ಚಿದೊಡೆ+ಅಃ
ಪೊರಳ್ಚಿ ಕಾ
ಯ್ದೆತ್ತಿದೊಡೆ+ಎತ್ತಿ ಕುತ್ತಿದೊಡೆ ಕುತ್ತಿದ ಕೊಂಬನೆ [4]
ಕೊಂಕಿ[4]ಕುತ್ತಿ[5]ಕೂ
ರ್ಗತ್ತಿಗೆಯಂ[5]ಕನಲ್ದೊಡೆಯಿಂ+ಉರ್ಚುವವೊಲ್ ಮೊದ
ದಿಂದಂ+ಉಚ್ಚಿ ಮು
ನ್ನೆತ್ತಿ[6]ಪಿಸುಳ್ದ[6]ಯಾರ್ತನುಗೆ ಮತ್ತಿಭಮಂ
ಹರಿ ಪೊಯ್ದುರುಳ್ಚಿದಂ||

ಆದರಿಂದ ಕೋಪಗೊಂಡ ಕಂಸನು ಕುಂಚವನ್ನು ಬೀಸಲಾಗಿ

ಎಲೆ+ಎತ್ತಿತ್ತಲ್+ಇದಿರ್ಚಿದಿರ್ಚು, ಕಡಿಕೆಯ್, ನೀಂ
ಬೇಗಂ+ಅಣ್ಮಣ್ಮು ಮೆ
ಯ್ಗಲಿಯಾಗಾಗು ಕೊಲಲ್ಕೆ ನಿನ್ನಪವನಂ ಸುತ್ತಿತ್ತು
ಮುತ್ತಿತ್ತು ಪೆ

1 ಸೂರ್ಯನನ್ನು, 2 ಕಿರಣ. 3 ಮದ್ದು. 4 ತಿವಿದು, 5 ಹರಿತವಾದ ಕತ್ತಿ, 6 ಸೀಳು ?

ಣ್ಗೊಲೆಯೇನ್+ಈಗುಮೆ ಪೋಗಲ್+ಉಣ್ಣದೆ+ಉರಿದ್ದೈ
ಮಣ್ಣಾಗಲೆಂದು+ಎನ್ನ ತೋ
ಳ್ವಲೆಯೊಳ್ ಸಿಲ್ಕಿದೆ+ಇಂದೆ ಸತ್ತೆಯೆನುತುಂ
ಚಾಣೂರನ್+ಒಟ್ಟೈಸಿದಂ

‘ಮುಕುಂದಂ ಮುಗುಳ್ನಗೆ ನಗುತ್ತುಂ ಅಟ್ಟುತಿಂಬ ದೈವಕ್ಕೆ ಪಾಳಂಬಿಟ್ಟೆ’ ಎಂದು

ಉತ್ತಮ ಸತ್ವದಿಂ ಪಿಡಿದು ಚಾಣುರನಂ ನೆಲಕಿಕ್ಕಿ ಕೃಷ್ಣನಾ
ಳ್ದು+ಒತ್ತಿದೊಡೆ+ಒತ್ತಿ ಧಾತ್ರಿ ರಸೆಗೆ+[1]ಅರ್ದುದು[1]
ರಕ್ಕಸನ್+ಬಯ್ದ ಧಾತ್ರಿಯಂ
ಕೆತ್ತಿದನ್+ಆತನುಂ ಹರಿಯ ಗೋವನ್+ಇಱಿಂಕಿ
ತದಂಘ್ರಿ ಘಾತದಿಂ
ಪತ್ತ ಪತಂಗಮೊಂದು ಶಕಟಂ ಮುಱಿದಾ
ಶಕಟಂಬೊಲಿರ್ಪಿನಂ ||

ಕೆಡೆವರ್+ಪೋರ್ದರ್ ಪೊರಳ್ದರ್ ಮಿಗೆ
ಪಿಡಿದರ್+ಆರ್ದೊತ್ತಿದರ್ ಮತ್ತಮೆರ್ದರ್
ನಿಡುಕೆಯ್ಯಂ ಬೇಡಿದರ್ ನೀಡಿದರ್+ಎಡೆದು
ನೆಲಕ್ಕಿಕ್ಕಿದರ್+[2]ಕೂಂಕಿದ[2]ರ್+ಮೇ
ಗಡಿಯಾದರ್+ಪತ್ತಿ ಗಾಯಂಗೊಳಲೆ
ಮಿಡುಕದಾರಯ್ದರ್+ಆರಯ್ದ ಗಾಯ
ಕ್ಕೆಡೆಗೊಟ್ಟ+ಉರ್ಕಿಟ್ಟುಕೊಂಡರ್ ಪೊಳೆದು
ಬಿಡಿಸಿದರ್ ಕೃಷ್ಣ ಚಾಣೂರ ಮಲ್ಲರ್ ||

1 ಮುಳುಗಿತು. 2. ಮೇಲಕ್ಕೆದ್ದರು.

‘ಆಗಳ್ ಇವನನ್+ಎನಿತೆನಿತಂ ಕೊಂಡಾಡುವೆನ್ ಎಂದು [1]ವಿಶ್ವಂಭರಂ[1] ಭರಂಗೆಯ್ಯಲೊಡನೆ’

ದಾರುಣದೊಳ್ ನಿಷ್ಠುರ ಚಾ
ಣೂರ ಭುಜಾದಂಡ ಪೃಷ್ಠದೊಳ್ ಪುಟ್ಟಿದುದಾ
ನಾರಾಯಣನುರುಭುಜಾ ಶಾ
ಖಾರಣಿಯೊಳ್ ಶಕ್ತಿರೂಪತೇಜೋಜ್ವಲನಂ॥

[2]ಎಳವಿ ಮಳಪಿಕ್ಕಿ[2] ಕಳಲುಂ
ಕೆಳಗುಂ ತರಹರಿಸಿಕೊಳಲುಮಿಕ್ಕಿದ ಕೆಯ್ಯಂ
ಕಿಟಿಲುಮಣಮಾಱದಸುರಂ
ನೆಟಿಲೊಳ್ ಪೊಣರ್ವಂತೆ [3]ಪೋರ್ದ್ದ[3] ಕಟಿಯೆ ಬಟಿಲ್ದಂ॥

ಒಡೆದುದು ಮುಷ್ಟಿಯಂ ಪಿಡಿದ ಕೆಯ್ಯತಳಂ, ಕಡುಸೋಂಕು ಸೊಂಕಿ ಮೆಯ್
[4]ಅಡಗಡಗಾಯ್ತು[4] ಡೊಕ್ಕರಿಸೆ ಕಂಸನ ಮಲ್ಲನ ಕಕ್ಷವಕ್ಷದೆಲ್ವು+
ಉಡಿದುವು ಪೊಯ್ಯುತುಂ ತುಡುಕಿ ತುಟ್ಟಿಸಿ [5]ಕತ್ತರಿವಾಣಿ[5]ಯಲ್ಲಿ ಕೆಯ್+
ತುಡುಕಿದ ವೋಲ್ ಬೆರಲ್ ಬಿರಿದುವಾ ಹರಿ ಪೂರಿಸೆ ಮೆಯ್ಯ ಶಕ್ತಿಯಂ’

---

1 ಲೋಕವನ್ನು ಕಾಪಾಡುವವನು. 2 ? 3 ಜಗಳವಾಡಿ. 4 ಮಾಂಸವು ಅಜ್ಜುಗುಜ್ಜಿಯಾಯ್ತು. 5 ಕತ್ತರಿಯಂತೆ ಒಂದರ ಮೇಲೊಂದಿರುವ ಕೈ (ಒಂದುಪಟ್ಟು)

‘ ಆಗಳ್ ಮುಷ್ಟಿಕಂ ಮುಷ್ಟಿಗೊಂಡು ಮುನಿದು ಮೇಲ್ವಾಯ ಲೊಡನೆ

ಎರಡುಂ ಕೆಯ್ಯಂಕೊಂಡು+ಇ
ರ್ವರುಮಂ ಬೊಂಬೆಗಳನಾಡಿಪವನವೊಲವನ್+ಈ
ರ್ವರ ತಲೆಯುಂ ತಾಟಿಸಿದಂ
ಬಿರಿವಿನೆಗಂ ತಾಳ ಕಾಯ್ಗಳಂ ತಾಟಿಪವೊಲ್ ||

‘ ಚಾಣೂರನ ಮುಷ್ಟಿಕನ ಪೆಣದ [1]ಪೊಣರನಿಪ್ಪುರಿಗೂಡೆ[1] ಕಂಡು ಕೆಳರ್ದು’ ವಜ್ರಮುಷ್ಟಿ ಮೊದಲಾದವರು

ತೆರ್ಕೆಯೊಳ್+ಉಲಿದೆಯ್ತಂದು ಪೊ
ಣರ್ಕೆಗೆ ಮೇಲ್ವಾಯ ಮುಸುಱ ಮಲ್ಲಸಹಸ್ರಂ
ಮರ್ಕಟ-ಕಟಕಂ ಮುತ್ತಿ[2]ದ
ಳುರ್ಕೆ[2]ಯ ನೀಳಾಚಲಂಬೊಲಿರ್ದಂ ಕೃಷ್ಣಂ ||

ಹಾಗೆ ಮುತ್ತಿದ ಮಲ್ಲರನ್ನೆಲ್ಲ ಚದುರಿಸಿ ಮುಂದೆ ತಮ್ಮ ಮೇಲೆ ಮುತ್ತಲು ಬಂದ ಕಂಸನ ಚತುರ್ಬಲವನ್ನು ಬಲದೇವನೂ ವಾಸುದೇವನೂ ಹೆಣಮಯವನ್ನಾಗಿಮಾಡಿ ವಿಶೇಷವಾಗಿ ಕೋಪಿಸಿಗೊಂಡು ಅಭಿನವನಾರಸಿಂಹಾಡಂಬರುವು ಅದ್ಭುತವಾಗುತ್ತಿರಲಾಗಿ

ಮಾಡದ ಕಂಭಮಂ ಮಲಗಿನೊಳ್ ಪರಿಪಾಯ್ದು ನೆಲಕ್ಕೆ ಬಾಳನ
ಲ್ಲಾಡೆ ನೆಗಪ್ಪಿಕೊಂಡು ತೊಡೆಗಾನರಸಿಂಹನವುಂಕಿ ಕಂಬದಿಂ

1 ಜೊತೆಯನ್ನು ಒಟ್ಟುಗೂಡಿಸು. 2 ವ್ಯಾಪಿಸಿಕೊಂಡಿರುವ.

ಮಾಡಿದ ಕಾಳರಕ್ಕಸನನಿಕ್ಕುವವೊಲ್ ನಖದಿಂ ಕರುಳ್ಗಳಂ
ತೋಡಿ ಪಿಸುಳ್ದು ಸೀಳ್ದು ಬಿಸುಟಂ ಕಲಿಕಂಸನನಬ್ಜ
ಲೋಚನಂ.

ಇಲ್ಲಿಗೆ ' ಅರ್ಧನೇಮಿ 'ಯು ವಿರಮಿಸುವುದು. ನೇಮಿನಾಥ ಪುರಾಣದ ಸಂಪೂರ್ಣ ಕಥಾಸರಣಿಯ ಸಾಮಾನ್ಯ ಪರಿಚಯ ಕ್ಕಾಗಿ ಇತರ ಗ್ರಂಥಗಳ ಆಧಾರದಮೇಲೆ ಮುಂದೆ ಹೇಳುವ ರೀತಿಯಲ್ಲಿ ಸಂಗ್ರಹಿಸಬಹುದು.

ಕಂಸವಧೆಯಾದ ಮೇಲೆ ತಮ್ಮಮೇಲೆ ಬಿದ್ದ ಇತರ ವಿರೋಧಿ ಗಳನ್ನೆಲ್ಲ ಗೆದ್ದು ಬಲದೇವ ವಾಸುದೇವರು ಉಗ್ರಸೇನನ್ನು ಸೆರೆಯಿಂದ ಬಿಡಿಸಿ ಸುಖವಾಗಿರುತ್ತಿರಲು ಜೀವಂಜಸೆಯ ಮೂಲಕ ತನ್ನ ಅಳಿಯನಾದ ಕಂಸನು ವಾಸುದೇವನಿಂದ ಮರಣವೈದಿದುದನ್ನು ಜರಾಸಂಧನು ತಿಳಿದು ಅವರಮೇಲೆ ತನ್ನ ಸೈನ್ಯವನ್ನು ಕಳುಹಿಸುವನು. ಅವನಕಡೆಯ ಅಪರಾಜಿತ ಕಾಲಯವನ ಮೊದಲಾದವರು ಸೋತು ಓಡುವರು. ಪುನಃ ಕಾಲಯವನನು ದಂಡೆತ್ತಿಬಂದಾಗ ಯಾದವರ ಪುಣ್ಯದೇವತೆ ಯಾದವರೆಲ್ಲ ಸತ್ತರೆಂಬ ಭ್ರಾಂತಿಯನ್ನುಂಟುಮಾಡಲು ಜರಾಸಂಧನು ಅದನ್ನು ಕೇಳಿ ಸಂತುಷ್ಟನಾಗುವನು.

ಯಾದವರು ಜರಾಸಂಧನ ಬಾಧೆಯನ್ನು ತಪ್ಪಿಸಿಕೊಳ್ಳುವು ದಕ್ಕಾಗಿ ಮಧುರೆಯನ್ನು ಬಿಟ್ಟು ಸಮುದ್ರ ಮಧ್ಯದಲ್ಲಿ ದ್ವಾರಾ ವತಿಯನ್ನು ಕುಬೇರನಿಂದ ನಿರ್ಮಿಸಿ ಸುಖವಾಗಿರುವರು. ಬಲ ರಾಮನಿಗೆ ರೇವತಿಯೊಡನೆ ವಿವಾಹವಾಗುವುದು. ಕೃಷ್ಣನಿಗೆ ಸತ್ಯಭಾಮೆ, ರುಕ್ಮಿಣಿ, ಜಾಂಬುವತಿ, ಸುಸೀಮೆ, ಲಕ್ಷ್ಮಣೆ, ಗಾಂಧಾರಿ, ಗೌರಿ, ಪದ್ಮಾವತಿ ಎಂಬ ಎಂಟುಜನ ರಾಣಿಯಾಗು

ವರು. ರುಕ್ಮಿಣಿಗೆ 'ಒಂದು ಮಗುಹುಟ್ಟಿ' ಪೂರ್ವಭವದ ವೈರಿಯಿಂದ ಅಪಹರಿಸಲ್ಪಟ್ಟು ನಡುದಾರಿಯಲ್ಲಿಸೆಯಲ್ಪಡಲಾಗಿ ಅದು ಕಾಳಶಂಬರನೆಂಬ ವಿದ್ಯಾಧರನಿಗೆ ಸಿಕ್ಕುವುದು. ಅವನು ಅದನ್ನು ತನ್ನ ಹೆಂಡತಿಯಾದ ಕಾಂಚನಮಾಲೆಗೆ ಸಲಹಲು ಕೊಟ್ಟು, ಪ್ರದ್ಯುಮ್ನನೆಂದು ನಾಮಕರಣಮಾಡಿ ಯುವಕನಾದ ಮೇಲೆ ಯೌವರಾಜ್ಯಾಭಿಷೇಕ ಮಾಡುವನು. ಪ್ರದ್ಯುಮ್ನನು ತನ್ನ ತಂದೆಯ ಎಲ್ಲ ಶತ್ರುಗಳನ್ನು ಜಯಿಸಿ ಸುಖದಿಂದಿರುವನು. ಅವನಿಗೆ ರೂಪಾತಿಶಯದಿಂದ ಮನ್ಮಥನೆಂಬ ಹೆಸರಾಗುವುದು. ಸಾಕುತಾಯಿಯಾದ ಕಾಂಚನಮಾಲೆಯು ಮಗನಾದ ಪ್ರದ್ಯುಮ್ನನಲ್ಲಿ ಮೋಹಗೊಳ್ಳುವಳು. ಅವನು ಒಪ್ಪದಿರಲು ಅವನಮೇಲೆ ಚಾಡಿಹೇಳಿ ಕಾಳಶಂಕರನಿಂದ ಅವನನ್ನು ಕೊಲ್ಲಿಸುವ ಏರ್ಪಾಡುಮಾಡಲು ಆ ಸಂದರ್ಭದಲ್ಲಿ ಪ್ರದ್ಯುಮ್ನನಿಗೆ ಅನೇಕವಾದ ವಿದ್ಯಾಪ್ರಾಪ್ತಿಯಾಗುವುದು. ನಾರದರಿಂದ ಮದನನು ತನ್ನ ತಂದೆತಾಯಿಗಳಾರೆಂಬುದನ್ನು ತಿಳಿದು ಮೊದಲು ಅವರಮೇಲೆ ಯುದ್ಧಮಾಡಿ ಕೊನೆಗೆ ಪರಿಚಯವಾದ ಮೇಲೆ ಅವರಿಂದ ಸ್ವೀಕೃತನಾಗಿ ಯುವರಾಜನಾಗುವನು. ತಾನು ಹಿಂದೆ ಕಾಡಿನಲ್ಲಿ ವರಿಸಿದ್ದ ರತಿಯನ್ನೂ ಹಸ್ತಿನಾವತಿಯಿಂದ ಕರೆದುತಂದಿದ್ದ ಉದಧಿಕುಮಾರಿಯನ್ನೂ ಮತ್ತಿತರ ನೂರೆಂಟು ಪತ್ನಿಯರನ್ನೂ ವಿವಾಹವಾಗುವನು. ಕೃಷ್ಣಜಂಭಾವತಿಯರಿಗೆ ಶಂಭುಕುಮಾರನು ಉದಯಿಸುವನು. ರುಕ್ಮಿಣಿಯ ಕುಮಾರಿಯಾದ ವಿದರ್ಭೆಯು ಮದನನ ಪತ್ನಿಯಾಗುವಳು.

ಇದೇಕಾಲದಲ್ಲಿ ದ್ವಾರಾವತಿಯಲ್ಲಿ ಬಲರಾಮ ಕೃಷ್ಣ ಮನ್ಮಥರಿಂದ ಓಲೈಸಿಕೊಳ್ಳುತ್ತಿದ್ದ ಸಮುದ್ರವಿಜಯ

ಮಹಾರಾಜನಿಗೆ ಶಿವದೇವಿಯುದರದಲ್ಲಿ ಹಿಂದೆ ಅಹಮಿಂದ್ರ ನಾಗಿದ್ದ ದೇವನು ನೇಮಿಸ್ವಾಮಿಯಾಗಿ ಉದಯಿಸುವನು. ಗರ್ಭಾವತರಣ ಜನ್ಮಾಭಿಷವನ ಕಲ್ಯಾಣಗಳಾದ ಮೇಲೆ ಬಾಲ ಲೀಲೆಯನ್ನು ಮುಗಿಸಿ ದಿವ್ಯಸುಂದರದೇಹವನ್ನು ಧರಿಸಿ ತಾರಣ್ಯವನ್ನು ತಾಳುವನು.

ಹಸ್ತಿನಾವತಿಯಲ್ಲಿ ಪಾಂಡುವು ವೈರಾಗ್ಯಪರನಾಗಿ ಮಾದ್ರಿ ಯೊಡನೆ ತಪಸ್ಸಿಗೆ ಹೊರಟುಹೋಗುವನು. ಭೀಷ್ಮನು ಕೌರವ ಪಾಂಡವರನ್ನು ರಕ್ಷಿಸುತ್ತಿದ್ದು ಅಲ್ಲಿಗೆ ಬಂದ ಬ್ರಾಹ್ಮಣನಾದ ದ್ರೋಣನೆಂಬುವನಿಗೆ ಕೃಪನ ತಂಗಿಯಾದ ಸುಂದರಿಯೆಂಬು ವಳನ್ನು ಕೊಟ್ಟು ಮದುವೆ ಮಾಡಿ ಆತನನ್ನು ಬಾಲಕರ ವಿದ್ಯಾ ಗುರುವನ್ನಾಗಿ ಏರ್ಪಡಿಸುವನು. ದ್ರೋಣ ಸುಂದರಿಯರಿಗೆ ಅಶ್ವತ್ಥಾಮನು ಮಗನಾಗುವನು.

ಚಂಪಾಪುರದಲ್ಲಿ ಭಾನುರಾಜನು ದೀಕ್ಷೆಯನ್ನು ವಹಿಸಲು ಕರ್ಣನು ರಾಜನಾಗುವನು. ಜ್ವಾಲಾಮಾಲಿನೀ ದೇವಿಯಿಂದ ತನ್ನ ತಾಯಾರೆಂಬುದನ್ನರಿಯಲು ಊರಿಮಾಲೆಯೆಂಬ ವಸ್ತ್ರವನ್ನು ಪಡೆಯುವನು. ಕರ್ಣನ ಅಸಾಧಾರಣವಾದ ಶಕ್ತಿಯನ್ನರಿತ ದುರ್ಯೋಧನನು ಅವನನ್ನು ಸ್ನೇಹಿತನನ್ನಾಗಿ ಮಾಡಿ ಅನೇಕ ದೇಶಗಳಿಗೆ ಅವನನ್ನು ರಾಜನನ್ನಾಗಿ ಮಾಡುವನು. ಕೌರವರ ಪಾಂಡವರ ದ್ವೇಷ, ಅರಗಿನ ಮನೆಯ ಪ್ರಸಂಗವೇ ಮೊದಲಾದುವು ಯಥಾಕ್ರಮವಾಗಿ ನಡೆದುಅರ್ಜುನನಿಗೆ ದ್ರೌಪದಿಯ ವಿವಾಹವಾಗುವುದು. ಧರ್ಮ ರಾಯಾದಿ ಇತರ ಸಹೋದರರಿಗೆಲ್ಲ ಪ್ರತ್ಯೇಕವಾಗಿ ಅನೇಕ ಮದುವೆಗಳಾಗುವುವು. ಇಂದ್ರಪ್ರಸ್ಥವೇ ಮೊದಲಾದೆಡೆಗಳಲ್ಲಿ ಪಾಂಡವರು ಸುಖವಾಗಿ ರಾಜ್ಯವಾಳುತ್ತಿರುವರು. ಅರ್ಜುನನಿಗೆ

ಸುಭದ್ರೆಯೊಡನೆ ವಿವಾಹವಾಗುವುದು. ಅವರಿಗೆ ಅಭಿಮನ್ಯು ಜನಿಸುವನು. ಕೃಷ್ಣನ ಮಗಳಾದ ಸುಂದರಿಯು ಅಭಿಮನ್ಯುವಿನ ಪತ್ನಿಯಾಗುವಳು. ಕೌರವ ಪಾಂಡವರಿಗೆ ದ್ಯೂತವಾಗಿ ಪಾಂಡವರು ವನವಾಸಕ್ಕೆ ತೆರಳುವರು. ಅರ್ಜುನನು ಕಾಡಿನಲ್ಲಿ ಅನೇಕ ವಿದ್ಯೆಗಳನ್ನು ಸಂಪಾದಿಸುವನು. ಪದ್ಮರಥನೆಂಬ ರಥನೂಪುರ ಚಕ್ರವಾಳದರಸು ದ್ರೌಪದಿಯಲ್ಲಿ ಮೋಹಿತನಾಗಿ ಅವಳನ್ನು ಕೊಂಡೊಯ್ಯುವನು. ಬಲದೇವ ವಾಸುದೇವ ಪಾಂಡವಾದಿಗಳೆಲ್ಲ ಹೋಗಿ ಅವಳನ್ನು ಬಿಡಿಸಿಕೊಂಡು ಬರುವರು. ವನವಾಸವು ಮುಗಿಯುವುದು. ದ್ರೌಪದಿಯನ್ನು ದ್ರುಪದನ ಮನೆಗೆ ಕಳುಹಿ ಕುಂತಿಯನ್ನು ಕೃಷ್ಣನೊಡನೆ ಬೀಳ್ಕೊಟ್ಟು ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸವನ್ನು ಕಳೆಯುವರು. ಕೀಚಕವಧೆ, ಗೋಗ್ರಹಣ, ಕೌರವರಿಗೆ ಪರಾಭವ— ಅರ್ಜುನನಿಗೆ ಲಲಿತಾಂಗಿಯೇ ಮೊದಲಾದ ಅನೇಕ ಕನ್ಯೆಯರೊಡನೆ ವಿವಾಹವಾಗುತ್ತದೆ. ಪಾಂಡವರು ದ್ವಾರಾವತಿಯಿಂದ ಬಂದ ಸತ್ಯಕನೆಂಬುವನೊಡನೆ ವರ್ಷಾಕಾಲವಾದಮೇಲೆ ನೇಮಿದರ್ಶನಕ್ಕೆ ಅಲ್ಲಿಗೆ ಬರುವುದಾಗಿ ಹೇಳಿಕಳುಹಿಸುವನು. ಕರ್ಣನು ಉರಿಯ ವಸ್ತ್ರವನ್ನು ಹೊದಿಸಿ ಪರೀಕ್ಷಿಸಿ ಕುಂತಿಯು ತನ್ನ ತಾಯೆಂದು ಅರಿತು ಅವಳಿಗೆ ತಮ್ಮಂದಿರ ಮೇಲೆ ಅಮೋಘಾಸ್ತ್ರವನ್ನು ಪ್ರಯೋಗಿಸುವುದಿಲ್ಲವೆಂದು ವಾಗ್ದಾನಮಾಡುವನು. ಪಾಂಡವರು ದ್ವಾರಾವತಿಗೆ ಪ್ರಯಾಣಮಾಡಿ ನೇಮಿತೀರ್ಥೇಶ್ವರರಿಗೆ ನಮಸ್ಕರಿಸಿ ಕೃಷ್ಣಬಲರಾಮಾದಿಗಳೊಡನೆ ಸುಖವಾಗಿರುವರು.

ಇತ್ತ ದ್ವಾರಾವತಿಗೆ ವ್ಯಾಪಾರಕ್ಕಾಗಿ ಹೋಗಿದ್ದ ಶೆಟ್ಟಿಗಳಿಂದ ಅಲ್ಲಿ ಕೃಷ್ಣಬಲರಾಮರು ನೇಮಿತೀರ್ಥಂಕರರ ಆಶ್ರಯದಲ್ಲಿ

ಬಹು ವೈಭವದಿಂದ ಮೆರೆಯುತ್ತಿದ್ದಾರೆಂಬುದನ್ನು ಜರಾಸಂಧನು ಕೇಳಿ ಯಾದವ ವಂಶವು ನಿರ್ನಾಮವಾಯಿತೆಂದು ತಾನು ಹಿಂದೆ ಕೇಳಿದ ಮಾತು ಸುಳ್ಳಾದುದಕ್ಕೆ ಕಿಡಿಕಿಡಿಯಾಗಿ ಅವರ ಮೇಲೆ ಯುದ್ಧಕ್ಕೆ ಸನ್ನದ್ಧನಾಗುವನು. ಪಾಂಡವರೂ ತಮಗೆ ಬರ ಬೇಕಾದ ರಾಜ್ಯಾರ್ಧಕ್ಕಾಗಿ ಕೃಷ್ಣನ ಸೂಚನೆಯ ಪ್ರಕಾರ ಬಹು ಬುದ್ಧಿವಂತನಾದ ಕೃಷ್ಣನೆಂಬ ದೂತನನ್ನು ಕೌರವನಲ್ಲಿಗೆ ಕಳುಹಿಸುವರು. ಅವನ ದೌತ್ಯವು ನಿಷ್ಫಲವಾಗುವುದು. ಯುದ್ಧವೇ ನಿಷ್ಕರ್ಷೆಯಾಗುವುದು. ಜರಾಸಂಧನು ತನ್ನ ಅಪಾರವಾದ ಸೈನ್ಯವನ್ನು ಕೃಷ್ಣನ ಮೇಲೆ ಕಳುಹಿಸುವನು. ಇದೇ ಸಮಯವೆಂದು ದುರ್ಯೋಧನನು ಅವನ ಪಕ್ಷವನ್ನು ವಹಿಸುವನು. ಪಾಂಡವ, ಬಲದೇವ, ವಾಸುದೇವಾದಿಗಳು ಸಮುದ್ರವಿಜಯ ನೇಮೀಶ್ವರರಿಗೆರಗಿ ಯುದ್ಧಪ್ರಯಾಣ ಮಾಡುವರು. ಅವರಿಗೆ ಸಹಾಯವಾಗಿ ಬರುತ್ತಿದ್ದ ಕಾಳಶಂಬರ ಮೊದಲಾದ ಖೇಚರ ಪಡೆಯನ್ನು ಜರಾಸಂಧನ ಸಾಮಂತರು ತಡೆದುದ್ದನ್ನು ಕೇಳಿ ವಸುದೇವ, ಮನ್ಮಥ, ಶಂಭುಕುಮಾರರು ವಿಜಯಾರ್ಧಗಿರಿಗೆ ಪ್ರಯಾಣಮಾಡುವರು.

ಜರಾಸಂಧ ಕೃಷ್ಣರ ಯುದ್ಧ ಅನಿವಾರ್ಯವಾಯಿತು. ಜರಾಸಂಧನ ಕಡೆ ಕರ್ಣನಿಗೆ ಮೊದಲು ಸೇನಾಧಿಪತ್ಯಾಭಿಷೇಕ ವಾಯಿತು. ಅವನು ಪದ್ಮವ್ಯೂಹವನ್ನು ರಚಿಸಿದನು. ಇತ್ತ ಅರ್ಜುನನಿಗೆ ಕೃಷ್ಣನೆಂಬುವನು ಸಾರಥಿಯಾದನು. ಮೊದಲು ನಾಲ್ಕುದಿವಸ ಶ್ವೇತ, ಭೀಷ್ಮ, ಕಾಮದಂತ–ಬಲರಾಮ, ಸತ್ಯಕ–ವಜ್ರಬಾಹು, ಜಯದ್ರಥ ಉತ್ತರರಿಗೆ ಯುದ್ಧವಾಯಿತು ಅಯ್ದನೆಯದಿನ ಅಭಿಮನ್ಯುವಿನ ಚಕ್ರವ್ಯೂಹ ಪ್ರವೇಶ, ಮರಣ ಅದರ ಫಲವಾಗಿಯೇ ಅರ್ಜುನನಿಂದ ಸೈಂಧವವಧೆಯಾಗು

ವುದು. ಮಾರನೆಯ ದಿನ ಭೀಷ್ಮನು ನಿರ್ವೇಗಪರನಾಗಿ ಯುದ್ಧ ಮಾಡುವಂತೆ ನಟಿಸಿ ಪಂಚಪರಮೇಷ್ಠಿಗಳನ್ನು ಧ್ಯಾನಿಸುತ್ತ ಸತ್ತು ಸ್ವರ್ಗವಲ್ಲಿ ದೇವನಾಗಿ ಹುಟ್ಟಿದನು. ಮುಂದಿನ ದಿನ ಕರ್ಣನು ಎಲ್ಲರನ್ನೂ ವಿರಥರನ್ನಾಗಿಸಿದನು. ಅದಕ್ಕೆ ಮಾರನೆಯ ದಿನ ದ್ರೋಣರ ಸೇನಾಧಿಪತ್ಯ. ಪಾಂಡವರ ಕಡೆ ದ್ರುಪದನ ಮರಣ, ಪ್ರತಿಪಕ್ಷದಲ್ಲಿ ದೃಷ್ಟದ್ಯುಮ್ನನಿಂದ ದ್ರೋಣಾಚಾರ್ಯರ ವಧೆ. ಮರುದಿವಸ ಕರ್ಣಾರ್ಜುನರ ಕಾಳಗ; ಯುದ್ಧದಲ್ಲಿ ಅರ್ಜುನನಿಂದ ತನಗೆ ಮಕುಟ ಭಂಗವಾದುಪಕ್ಕೆ ನೊಂದು ಕರ್ಣನು ಅದು ಮರಣಕ್ಕೆ ಸಮಾನವೆಂದು ನಿರ್ವೇಗ ಪರನಾಗಿ ದಮವರರೆಂಬ ಮುನೀಶ್ವರರಲ್ಲಿ ದೀಕ್ಷೆಯನ್ನು ಪಡೆದು ಸತ್ತು ಸ್ವರ್ಗದಲ್ಲಿ ದೇವನಾಗಿ ಪುಟ್ಟಿದನು.

ಕರ್ಣನು ಹೊರಟುಹೋದ ಮೇಲೆ ದುರ್ಯೋಧನನು ಬಹುರೂಪಿಣೀವಿದ್ಯೆಯನ್ನು ಸಂಪಾದಿಸಲು ವೈಶಂಪಾಯನ ಸರೋವರದಲ್ಲಿರಲು ಅಲ್ಲಿಗೇ ಭೀಮನು ಬಂದು ಗದಾಯುದ್ಧ ಮಾಡಿ ಅವನ ತೊಡೆಯನ್ನು ಮುರಿಯುವನು. ಜರಾಸಂಧನು ಖಿನ್ನನಾಗುವನು. ಅಶ್ವತ್ಥಾಮನು ರಾತ್ರಿಯಲ್ಲಿ ಕಳ್ಗೊಲೆಯನ್ನು ಮಾಡಿ ತನ್ನ ತಪ್ಪನ್ನರಿತಮೇಲೆ ನಿರ್ವೇಗಪರನಾಗಿ ದೀಕ್ಷೆಯನ್ನು ವಹಿಸುವನು.

ಮರುದಿನ ಕೃಷ್ಣ ಜರಾಸಂಧರಿಗೆ ಕಾಳಗವು ಪ್ರಾರಂಭವಾಯಿತು. ಉಭಯಪಕ್ಷಗಳೂ ಬಹು ವೀರಾವೇಶದಿಂದ ಕಾದಾಡಿದುವು. ಆದರೂ ಜರಾಸಂಧನಿಗೆ ಅಸ್ತ್ರಗಳೆಲ್ಲ ನಿಷ್ಪ್ರಯೋಜನವಾದುವು. ಆಗ ಅವನು ತನ್ನ ಚಕ್ರವನ್ನು ಪ್ರಯೋಗ ಮಾಡಿದನು. ಅದು ಕೃಷ್ಣನನ್ನು ಮೂರು ಸಲ ಪ್ರದಕ್ಷಿಣೆಮಾಡಿ ಅವನ ಬಲಭಾಗದಲ್ಲಿ ನಿಂತಿತು. ಕೃಷ್ಣನು

ನಿರ್ವೀರ್ಯನಾದ ಅವನನ್ನು ಶರಣಾಗೆಂದು ಎಷ್ಟು ಕೇಳಿದರೂ ಒಪ್ಪಲಿಲ್ಲವಾಗಿ ಅದೇ ಚಕ್ರದಿಂದ ಅವನ ತಲೆಯನ್ನು ಕತ್ತರಿಸಿದನು. ಆಕಾಶದಲ್ಲಿ ಪುಷ್ಪವೃಷ್ಟಿಯಾಗುತ್ತಿರಲು ಎಲ್ಲರೂ ತಮ್ಮ ಬೀಡುಗಳಿಗೆ ತೆರಳಿದರು. ಕೃಷ್ಣ ಬಲರಾಮರು ಭರತ ತ್ರಿಖಂಡವನ್ನೆಲ್ಲ ಗೆದ್ದು ದಿಗ್ವಿಜಯವನ್ನು ಮುಗಿಸಿ ಕೊಂಡು ದ್ವಾರಾವತಿಗೆ ಬಂದು ನೇಮೀಶರಿಗೆ ನಮಸ್ಕರಿಸಿ ಅವರ ಪ್ರಭಾವವನ್ನು ಕೊಂಡಾಡಿದರು. ಧರ್ಮರಾಜನು ಹಸ್ತಿನಾವತಿಗೆ ಹೋಗಿ ಧೃತರಾಷ್ಟ್ರ ವಿದುರರಿಗೆ ಪ್ರತ್ಯೇಕ ರಾಜ್ಯಗಳನ್ನಿತ್ತು ಅನುಜರಿಗೆ ಹಸ್ತಿನಾವತಿಯನ್ನು ಕೊಟ್ಟು ತಾನು ದಕ್ಷಿಣ ಮಧುರೆಯಲ್ಲಿ ನೆಲೆಸಿದನು.

ಹೀಗೆ ಕೆಲವು ದಿನ ಕಳೆಯುತ್ತಿರಲಾಗಿ ಒಂದು ವಸಂತ ಕಾಲ ದಲ್ಲಿ ನೇಮೀಶ್ವರರು ಇತರರ ಒತ್ತಾಯದ ಮೇಲೆ ಜಲಕ್ರೀಡೆ ಯಾಡುತ್ತಿರುವಾಗ ಸತ್ಯಭಾಮೆಯು ನಾಗಶಯ್ಯೆಯನ್ನೇರಿ ಪಾಂಚಜನ್ಯವನ್ನೂದಿದ ತನ್ನ ಪತಿ ಕೃಷ್ಣನಿಗೆ ನೇಮೀಶ್ವರರು ಸಮಾನವಲ್ಲವೆಂದು ಅಲ್ಲೆಗಳೆದಳು. ನೇಮೀಶ್ವರರಿಗೂ ಕೋಪ ಬಂದು ತಕ್ಷಣ ಆಯುಧಶಾಲೆಗೆ ಹೋಗಿ ಆ ಕಾರ್ಯಗಳನ್ನು ನಿರಾಯಾಸವಾಗಿ ಮಾಡಿಬಿಟ್ಟರು. ಅದನ್ನು ಕೇಳಿದ ಕೃಷ್ಣ ಬಲರಾಮರು ಅವರು ತಮ್ಮ ರಾಜ್ಯವನ್ನು ಅಪಹರಿಸಬಹು ದೆಂಬ ಶಂಕೆಯಿಂದ ಅವರಿಗೆ ಸಂಸಾರದಲ್ಲಿ ನಿರ್ವೇಗವುಂಟು ಮಾಡುವ ಸಂಚನ್ನು ಯೋಚಿಸಿ ಸಮುದ್ರ ವಿಜಯರ ಮೂಲಕ ನೇಮೀಶ್ವರರಿಗೆ ವಿವಾಹವನ್ನೇರ್ಪಡಿಸಿ ಆ ಕಾಲದಲ್ಲಿ ಕೃತ್ರಿಮ ವಾದ ಹಿಂಸಾತ್ಮಕ ಸನ್ನಿವೇಶಗಳನ್ನು ಕಲ್ಪಿಸಿ ಅವರು ಸಂಸಾರಾನಿತ್ಯತೆಗೆ ಹೇಸಿ ದೀಕ್ಷೆಗೊಳ್ಳುವಂತೆ ಮಾಡಿದರು. ಇಂದ್ರನು ಪರಿನಿಷ್ಕ್ರಮಣ ಕಲ್ಯಾಣವನ್ನು ನಡೆಸಿದನು.

ಮುಂದೆ ಯೋಗ್ಯವಾದ ತಪಸ್ಸನ್ನಾಚರಿಸಲು ಕೇವಲ ಜ್ಞಾನೋತ್ಪತ್ತಿಯಾಯಿತು. ಪಂಚ ಕಲ್ಯಾಣಗಳೂ ಪೂರ್ಣ ಗೊಂಡುವು. ಇಂದ್ರಾದಿ ಸಮಸ್ತ ದೇವತೆಗಳೂ ಬಲರಾಮ ಕೃಷ್ಣಾದಿಗಳೂ ತೀರ್ಥಂಕರರಿಗೆ ತ್ರಿಃಪ್ರದಕ್ಷಣವನ್ನು ಮಾಡಿ ನಮಸ್ಕರಿಸಿ ಬೇಡಿಕೊಂಡಂತೆ ನಾನಾ ದೇಶಗಳಲ್ಲಿ ಸಂಚಾರ ಮಾಡಿ ಧರ್ಮಾಮೃತ ವರ್ಷದಿಂದ ಲೋಕವನ್ನು ತೃಪ್ತಿ ಗೊಳಿಸಿದರು. ಒಂದು ದಿನ ಬಲರಾಮನೆದ್ದು ನೇಮಿಜಿನೇಶರಿಗೆ ಕೈಮುಗಿದು ತಮ್ಮ ಮತ್ತು ದ್ವಾರಾವತಿಯ ಭವಿಷ್ಯವೇನೆಂದು ಕೇಳಲು ಅಂದಿನಿಂದ ಹನ್ನೆರಡು ವರ್ಷಕ್ಕೆ ದ್ವಾರಾವತಿಯು ದೀಪಾಯನನಿಂದ ಸುಟ್ಟುಹೋಗುವುದೆಂದೂ ಕೃಷ್ಣ ಬಲರಾಮ ರಿಬ್ಬರು ವಿನಾ ಎಲ್ಲ ಯಾದವರೂ ಬೆಂದುಹೋಗುವರೆಂದೂ ಜರತ್ಕುಮಾರನ ಬಾಣದಿಂದ ಕೃಷ್ಣನು ಮರಣವನ್ನೈದಿ ಕಾಲಾಂತರದಲ್ಲಿ ತೀರ್ಥಂಕರನಾಗುವನೆಂದೂ ಬಲರಾಮನು ಅವನ ದುಃಖದಿಂದ ನರಳಿ ಸತ್ತು ಕೃಷ್ಣತೀರ್ಥಂಕರರ ಅನಂತರ ಕಾಲದಲ್ಲಿ ಹುಟ್ಟಿ ಕರ್ಮಕ್ಷಯಮಾಡಿ ತೀರ್ಥಂಕರ ನಾಗುವನೆಂದೂ ತಿಳಿಸಿದರು. ಇದನ್ನು ಕೇಳಿದ ಮದನನಿಗೆ ನಿರ್ವೇಗವುಂಟಾಯಿತು. ಮೊದಲು ಪ್ರತಿಭಟಿಸಿದ ತನ್ನವರಿಗೆಲ್ಲ ಧರ್ಮೋಪದೇಶ ಮಾಡಿ ಅವರೊಡನೆ ಮದನನು ದೀಕ್ಷೆಯನ್ನು ವಹಿಸಿದನು. ನೇಮೀಶರ ವಾಕ್ಕಿನಂತೆಯೇ ದ್ವಾರಾವತಿಯು ಅಗ್ನಿದಗ್ಧವಾಯಿತು. ಕೃಷ್ಣನು ಜರತ್ಕುಮಾರನ ಬಾಣದಿಂದ ಪ್ರಾಣವನ್ನು ನೀಗಿದನು. ಬಲರಾಮನು ಮೋಹದಿಂದ ತಮ್ಮನ ಹೆಣವನ್ನು ಹೊತ್ತು ಅಲೆದು ಜ್ಞಾನೋದಯವಾದ ಮೇಲೆ ಅದನ್ನು ಸುಟ್ಟು ದೀಕ್ಷೆಯನ್ನು ಹೊಂದಿ ಸತ್ತು ಅಚ್ಯುನೆಯ ಸ್ವರ್ಗದಲ್ಲಿ ದೇವನಾದನು. ನೇಮಿಜಿನೇಶರಿಗೆ

ಸಮವಸರಣಪ್ರಾಪ್ತಿಯಾಯಿತು. ಪಾಂಡವರೇ ಮೊದಲಾದ ಅನೇಕರು ತಮ್ಮ ಭವಾವಳಿಗಳನ್ನರಿತು ಕರ್ಮಕ್ಷಯವನ್ನು ಮಾಡಿ ದೀಕ್ಷೆಗೊಂಡರು. ದೇವೇಂದ್ರನು ಸ್ವಾಮಿಯ ನಿರ್ವಾಣ ಕಲ್ಯಾಣದಲ್ಲಿ ಆನಂದನೃತ್ಯವನ್ನಾಡಿ ಲೋಕವನ್ನು ತಣಿಸಿದನು.

ಅರ್ಧನೇಮಿಯು ಲೀಲಾವತಿಗಿಂತ ಉತ್ತಮವಾದ ಕಾವ್ಯ. ಇಲ್ಲಿ ಬರುವ ಅನೇಕ ವರ್ಣನೆಗಳು ಜೀವಂತವಾಗಿವೆ. ಆವೇಶ ಪೂರ್ಣವಾಗಿವೆ. ಧರ್ಮಗ್ರಂಥವಾಗಿರುವುದರಿಂದ ಕವಿಗೆ ಈ ಕಾವ್ಯದಲ್ಲಿ ತನ್ನ ಪ್ರತಿಭೆಯನ್ನು ವಿಶೇಷ ಪ್ರದರ್ಶಿಸುವುದಕ್ಕೆ ಅವಕಾಶವಿಲ್ಲ. ಭವಾವಳಿಗಳ ನಿರೂಪಣ ಸಂದರ್ಭದಲ್ಲಿ ಕತೆ ಉಪಕತೆಗಳು ಅಸಂಖ್ಯಾತವಾಗಿ ಬರುತ್ತವೆ. ಅವುಗಳನ್ನು ನಿರೂಪಿಸುವುದರಲ್ಲಿಯೂ ನೇಮಿಚಂದ್ರನು ವಿಶೇಷ ಕತ್ತರಿ ಪ್ರಯೋಗಗಳನ್ನು ಮಾಡಿ ಸಂಗ್ರಹವಾಗಿ ಹಿತಮಿತವಾಗಿ ಹೇಳಿದ್ದಾನೆ. ಈ ಗ್ರಂಥವು ಪೂರ್ಣವಾಗಿದ್ದರೆ ಈಗ ಉಪ ಲಬ್ಧವಾಗಿರುವ ಇತರ ಎಲ್ಲ ನೇಮಿನಾಥ ಪುರಾಣಗಳಿಗಿಂತ ಆಕಾರದಲ್ಲಿ ಚಿಕ್ಕದಾಗಿರುತ್ತಿತ್ತು. ವರ್ಣನೆಗಳಲ್ಲಿಯೂ ಒಂದು ವೈಶಿಷ್ಟ್ಯವಿದೆ. ಸ್ಪಷ್ಟ ಚಿತ್ರಣವಿದೆ. ಪ್ರತಿಭೆಯ ಮಿಂಚನ್ನು ಅಲ್ಲಲ್ಲಿ ಕಾಣಬಹುದು. ಮುಂದಿನ ವಾಮನಾವತಾರದ ಚಿತ್ರವನ್ನು ನೋಡಿ.

ವಟು ಮರದುದ್ದನಾದನ್+ಅನಿತಿಲ್ಲದೊಡೆ+ಇತ್ತಲೆಯುದ್ದ
ವಾದನ್+ಅ
ಕ್ಕಟ ಮುದಿಲುದ್ದವಾದನ್+ಇವನಾವನೊ ಪೆರ್ಮರದುದ್ದ
ವಾದನ್+ಇಂ

ತುಟು ಗಿರಿಯುಪ್ಪವಾದನ್+ಇದು ವಿಸ್ಮಯಮಾ ಮುಗಿಲುದ್ದ
ವಾದನೋ
ವ[1]ಟಮುಟಿಗಂ[1] ದಿಟಕ್ಕನೆ ಕರಂ ಬೆಳೆದಂ ಮನದಂತೆ ವಾಮನಂ॥

ಮರನಂ ಮುಟ್ಟಿದನ್+ಇಲ್ಲ ಮೇಘಘಟಿಯೊಳ್
ಕಾಲ್ಮೋದನ್+ಇಲ್ಲಿಲ್ಲ+ಭೂ
ಧರಮಂ ದಾಂಟಿದನ್+ಇಲ್ಲ [2]ಬಾಂದೊರೆ[2]ಯೊಳಿಟ್ಟಂ
ಕಾಲನ್+ಇಲ್ಲಿಲ್ಲ+ಭಾ
ಸ್ಕರನಂ ಮಾಯದ ಮಾಣಿ ಸೇರ್ದೊಡದನೇ ಇಲ್ಲೆಂಬಿನಂ
ನೀಡಿದಂ
ತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ವಾಮನಂ
ವಾಮನಂ॥

ಅದೆ ಪೊಸಪೊನ್ನ[3]ಸತ್ತಿಗೆ[3]+ಅದಲ್ಲದು ರತ್ನ[4]ಹಟ[4]
ತ್ಕಿರೀಟಮ್+ಅ
ಲ್ಲದು ವರವಜ್ರಕುಂಡಳಂ+ಅದಲ್ಲದು ಕೌಸ್ತುಭರತ್ನಮ್+
ಅಂತದ
ಲ್ಲದು ಕರಚಕ್ರಮ್+ಅದಲ್ಲದು ನಾಭಿಸರೋಜಮೆನಲ್
ದಿನೇಶ ಬಿಂ
ಬದನೆಲೆ ತಗ್ಗಿತಪ್ಪಿನಂ+ಅನುಕ್ರಮದಿಂ ಬೆಳೆದಂ ತ್ರಿವಿಕ್ರಮಂ॥

---

1. ಮೋಸಗಾರ. 2. ಆಕಾಶಗಂಗೆ. 3. ಕೊಡೆ. 4. ಕಾಂತಿ
ಯುಕ್ತವಾದ.

ಇದು ಲೀಲಾಧೃತಭೂ[1]ಕರೇಣುಕರಂ[1]+ಅಲ್ತು+[2]ಅಭ್ರೋ
ತ್ಪಟೀಕೇತು[2]+ಅ
ಲ್ತು+ಇದು ಸೂರ್ಯಾಂಬುಜನಾಳಂ+ಅಲ್ತು+ಶಶಿಲೋಕಾ
ದೀಪಿಕಾಸ್ತಂಭಂ+ಅ
ಲ್ತು+ಇದು [3]ತಾರಾಕುಸುಮಾವಳೀವಿಟಪಂ[3]+ಅಲ್ತು+
[4]ಅಭ್ರಾವನೀಶೇಷಂ[4]+ಅ
ಲ್ತು+ಇದೆನಲ್ ತಾಂ ಬಳೆದತ್ತನುಕ್ರಮದಿಂ+ಆ ಪಾದಂ
ಪಯೋಜಾಕ್ಷನಾ ||

ತರುವಿಂದತ್ತತ್ತ ನೀಳ್ದಂ ಘನಪಟಲದಿನತ್ತತ್ತ ಮಿಕ್ಕಂ
[5]ಹಿಮೋರ್ವೀ
ಧರ[5]ದಿಂದತ್ತತ್ತ ಪೋದಂ ರವಿಯರಥದಿನತ್ತತ್ತ
ಮೆಯ್ವೆರ್ಚಿದಂ[6]ಸು
ಟ್ಟುರ[6]ಯಿಂದತ್ತತ್ತಮತ್ತಂ ನಿಮಿರದಿರನಿದೇನೆಂದು ಜಾತಾ
ದ್ಭುತಂನೋ
ಟ್ಪರ ಕಣ್ಣುಂ ಚೇತಮುಂ ಕಾಲ್ಗಿಡೆ ಕಡುಜವದಿಂ
ವಿಷ್ಣುವರ್ಧಿಷ್ಣುವಾದಂ ||

ಈ ವಟುವಿಂಗೆ ಮಿಂಚುವೆಳಮಿಂಚಿನ[7]ವಾರಿದರೇಖೆ[7]
ಮೌಂಜಿಯುಂ
ಕೋವಣಮಾಯ್ತು ಮುಟ್ಟೆ ರವಿಗರ್ಘ್ಯಮನೀವ[8]ಪೊಡರ್ಪು
ಮಾಯ್ದ[8]ಮಾ

---

1. ಆನೆಯ ಸೊಂಡಿಲು. 2. ಆಕಾಶದಿಂದ ಮೇಲಕ್ಕೆದ್ದ ಧ್ವಜ. 3. ನಕ್ಷತ್ರವೆಂಬ ಹೂವಿನ ಗೊಂಚಲುಗಳಿಂದ ಕೂಡಿದ ಮರ. 4. ಆಕಾಶ ಭಾಗ. 5. ಹಿಮಾಚಲ ಪರ್ವತ. 6. ಸುಂಟರುಗಾಳಿ. 7. ಮೋಡದ ರೇಖೆ. 8. ಕಾಂತಿ ಹೋಗಿ.

ಯಾವಿಗನೊಲ್ದು ಗುಂಡಿಗೆಯನಾಗಸಗಂಗೆಯ
ದಿವ್ಯತೋಯಮಂ
[1]ತೀವುವ[1]ಬುದ್ಧಿಯೊಳ್ ಬಗೆದನಕ್ಕಟ ಮಾಣಿ ನವ
ಪ್ರಮಾಣಮಂ ||

ಅಂಬರತಳಕ್ಕೆ ಬಳೆದು ತೆ
ಱಂಬೊಳೆವಚ್ಯುತನ ಚರಣದಂಡಂ ನಕ್ಷ
ತ್ರಂ ಬಳಸಿ ದೀಪ್ತಮಾಲೆಯ
ಕಂಬದವೋಲ್ ತೊಳಗಿ ಬೆಳಗುತಿರ್ದತ್ತಾಗಳ್ ||

ಬಲಿಹರನ ಚರಣದಂಡದ
ತಲೆಯೊಳ್ ಕಿಱುಗೊಂಡೆ[2]ಬಿಲ್ಪ[2]ಬಾಂದೊಱೆಯಲರ್ + ಇಂ
ದೊಲೆದುದು ವಿಷ್ಣುಕುಮಾರನ
ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೊಲ್ ||

ನೇಮಿಚಂದ್ರನ ಶೈಲಿ :–ನೇಮಿಚಂದ್ರನು ಚತುರ್ಭಾಷಾ ಪಂಡಿತ. ಕನ್ನಡ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ನಿರಾಯಸವಾಗಿ ಕವಿತ್ವ ಮಾಡಬಲ್ಲ ಶಕ್ತಿ ಅವನಿಗಿದೆ. ಆತನ ಶಬ್ದ ಭಂಡಾರ ಬಲು ಹಿರಿದು. ಆದುದರಿಂದಲೇ ಅವನ ಕಾವ್ಯಗಳಲ್ಲಿ ಇನ್ನಾವ ಕವಿಗಳಲ್ಲಿಯೂ ಸಿಕ್ಕಲಾರದಷ್ಟು ಅಪೂರ್ವ ಪದಗಳು ಸಿಕ್ಕುವುವು. ಅವನ ಬರವಣಿಗೆ ವಿಶೇಷ ಸಂಸ್ಕೃತ ಪದಗಳಿಂದ ತುಂಬಿರುತ್ತದೆ. ಕನ್ನಡ ಗ್ರಂಥವಾದರೂ ತನ್ನ ಪಾಂಡಿತ್ಯ ಮೋಹದಿಂದ ಸಂಸ್ಕೃತ ಶ್ಲೋಕಗಳನ್ನೂ ಪ್ರಾಕೃತ ಗಾಹೆಗಳನ್ನೂ ಮಧ್ಯೆ ಮಧ್ಯೆ ಸೇರಿಸಿರುತ್ತಾನೆ. ಕನ್ನಡದ

---

1. ತುಂಬುವ. 2. ಜೋಲಾಡುತ್ತಿರುವ.

ವೃತ್ತಗಳಾದ ತ್ರಿಪದಿ, ರಗಳೆ, ವೃತ್ತ ಕಂದಗಳನ್ನೇ ಅಲ್ಲದೆ ಸಂಸ್ಕೃತದಲ್ಲಿ ಅಪೂರ್ವವಾದ ವಸಂತ ತಿಲಕ, ದ್ರುತವಿಲಂಬಿತ, ಶಿಖರಿಣಿ, ಲಯೋತ್ತರ, ಆರ್ಯಾ, ಮೊದಲಾದ ವೃತ್ತಗಳನ್ನೂ ಲೀಲಾಜಾಲವಾಗಿ ಉಪಯೋಗಿಸುತ್ತಾನೆ. ಅವನ ಉಪಮಾ ರೂಪಕಗಳು ಜೀವನದ ಬಹು ಮುಖದಿಂದ ಆರಿಸಿಕೊಂಡವು. ಗಾಜಿಗೆ ಮಣಿಯಂ ಮಾರುವ ಪೋಲ್, ಬೆಳದಿಂಗಳಂ ತುಡುಕುವ ಗಗನಲಕ್ಷ್ಮಿಯಂತೆ, ಮಂದಸಿನೊಳ್ ಮಾಣಿಕ ಮಿರ್ಪಂತೆ, ಮಾಗಿಯೊಳ್ ಮಾಟದಮಲ್ಲಿಗೆವೂಗಳಂ ಮರು ಳ್ದುಂಬಿಗೆ ತೋರ್ಪವೊಲ್, ಎಲೆಯೊಳ್ ಸುತ್ತಿದ ಮಲ್ಲಿಗೆ ಯಲರಂ ಕಂಪಿಂದಮಳಿಯ ಮೂಗಱಿವಂತೆ, ಮೇರುವಂ ಸಾರ್ದ ಕಾಗೆ ಪೊಂಬಣ್ಣ ಮಾದಂತಿರೆ, ಪಸುರೆಲೆಯ ಕುಸುಂಕ ಱೊಳಗೆ ರಸಾಯನದ ಕುಪ್ಪಿಗೆಯಿರ್ಪಂತೆ, ಶರೀರದಿಂ ಜೀವಂ ಪೊಱಮಟ್ಟು ಪೋಪಂತೆ. ಚಂದನಗ್ರಾಹಿಯಂ ಬೆನ್ನಟ್ಟೆಪೋಪ ಭುಜಗನಂತೆ. ಬಿದಿ ಬಯ್ತ ಭುವನ ಭಾಗ್ಯ ಸೇವತೆಯಂತೆ, ಮಾಱಿಯುಟಿದಾಡಿನಂತೆ, ಪುಟಿಯೆ ಪಾಲಂ ಕಿಡಿಸುವಂತೆ, ಕವರುಕತ್ತಿಗೆ ಕಡಿತಂ ಬಂದಂತೆ, ಕುಲವಲ್ಲರಿಯಂ ಬೇರ್ವೆರಸು ಕಿತ್ತಿತ್ತುವಂತೆ, ಇಲಿಯುಲಪುಗೇಳ್ದ ಬೆಕ್ಕಿನಂತೆ, ಲೋಯಿ ಸರದ ಮೇಲೆ ಬಂಡಿ ಪರಿದಂತೆ, ಉಡುಗಣದ ನಡುವೆ ಮೃಗಧರ ನೆಡೆಗೊಂಡಂತೆ. ಸಱುಗಲ್ಲಂ ದಬ್ಬುಕದಿಂದಿಱಿದೊಡೆ ಽತಿ ಹಾಱುವಂತೆ, ಮಾಱಿ ಮಸಗಿ ಚಿಗುಟಿದುಳಿದಂತೆ. ತುಂಬಿಗೆ ಪರಿಮಳಮಂ ಕೊಂಡು ಕೊನೆದು ಪೇಟ್ಪವೊಲ್, ನೋಂತರ ಪಣೆಯ ನೆಱ್ಱೆಱಿವಂತೆ, ಚಂದ್ರಿಕೆಯಂ ಪಡೆಯೆ ಪಯೋಧಿ ಪರಿಕ್ಷುಬ್ಧಮಾದಂತೆ—ಈ ಮೊದಲಾದ ಉಪಮಾನಗಳು ಉಪ ಮೇಯದ ಸ್ಪಷ್ಟ ಚಿತ್ರವನ್ನು ಕಲ್ಪಿಸತಕ್ಕವಾಗಿವೆ. ಹಾಗೆಯೇ

ಕವಿಯ ಲೋಕ ವಿಜ್ಞಾನವು ವಿಸ್ತಾರವಾದುದರಿಂದ ಜನ ಸಾಮಾನ್ಯದ ಮಧ್ಯೆ ತಾಂಡವವಾಡುತ್ತಿರುವ ಅನೇಕ ಕನ್ನಡ ಸಂಸ್ಕೃತ ಲೋಕೋಕ್ತಿಗಳೂ ಚಾಟುವಚನಗಳೂ ಕಾವ್ಯ ದುದ್ದಕ್ಕೂ ಬರುವುವು. ಅಪುತ್ರಸ್ಯಗತಿರ್ನಾಸ್ತಿ, ವಿನೀತಿ ರ್ಧೂರ್ತಲಕ್ಷಣಂ, ಅಹೋವಿಘ್ನಪರಂಪರಾ, ಯಾವದಸ್ತಿ ಪ್ರತೀಕಾರಸ್ತಾವತ್ಕುರ್ಯಾತ್ ಪ್ರತಿಕ್ರಿಯಾಂ, ರವಿಕಾಣದುದಂ ಕವಿಕಾಣ್ಬಂ, ಮರುಗಂ ಪ್ರೂತುದು ಕರ್ಬು ಪಣ್ತುದು, ನೆಲನಂ ಪ್ರೊಯ್ದು ಕಯ್ ತಪ್ಪುಗುಂ ಆಚಾರ್ಯರ ವಚನಂ ತಪ್ಪದು, ಲತೆಯೆನಿತು ಬಲ್ಲಿತ್ತಾದೊಡಂ ಮರನಿಂ ಬಲ್ಲಿತ್ತಲ್ತು. ಪೂಮಾಲೆ ಗಂ ಪಾಶಕ್ಕಮುಜಗಜಾಂತರಂ, ನೀರೆಜಿನಿಯೆನಿತಲರ್ದೇಂ ಸಾರದೆಪೋದಂ ದಿನೇಶಂ, ಕಲ್ಪಿಸವೇಟ್ಟಿಪ್ಪದೆ ಪುರುಡಿನೊಳ್ ಪೆಂಡಿರ್ಗೆ ಪಾಂಡಿತ್ಯಮುಂ, ಶರ್ಕರೆ ನಾಲಗೆ ನೃಪರೆರ್ದೆ ಕರ್ತರಿ, ಎರ್ದೆ ಕತ್ತರಿ ನಾಲಗೆ ಬೆಲ್ಲಂ, ಬೇಡಿದ ಕಾಡೊಳ್ ಮಡಕೊಂಡುದು, ನಚ್ಚಿನೆಮ್ಮೆ ಕೋಣನೀಹುದು, ಸೊರ್ಕಾನೆ ದಿಂಬಂಗಾಡು ಹೋಳಿಗೆ, ಆನೆಯುತ್ತುವಂಗಾಡು ಚಿಕ್ಕಾಡು, ಕನಸಿನ ಬತ್ತಕ್ಕೆ ಗೋಣಿಯಾಂಪರೆ, ಪಯೋರಸದಿಂಪಂ ಹಂಸೆ ಗುಪದೇಶಿಪ ಗಾಂಪನುಮೊಳನೆ–ಇವೇ ಮೊದಲಾದ ಉಕ್ತಿಗಳು ಕಾವ್ಯದಲ್ಲಿ ಆತ್ಮೀಯತೆಯನ್ನುಂಟುಮಾಡುತ್ತವೆ.

ನೇಮಿಚಂದ್ರನಿಗೆ ಮೃದುಪದ ಬಂಧುರತೆಯಿದೆ, ಪ್ರೌಢಿಮೆ ಯಿದೆ, ಪ್ರತಿಭೆ ಕಡಿಮೆ. ಬಹುಶಃ ಕಾಲದ ಜನರ ಅಭಿರುಚಿಗೆ ಮಾರುಹೋಗಿದ್ದಾನೆ. ವಸ್ತುವಿನ ಆಯ್ಕೆಯಲ್ಲಿಯೂ ಸ್ವಲ್ಪ ತಪ್ಪು ಮಾಡಿದ್ದಾನೆಂದು ಹೇಳಬಹುದು. ಲೀಲಾವತಿಯಂತಹ ಶೃಂಗಾರಕಾವ್ಯಕ್ಕಿಂತ ಪಂಪರನ್ನಾದಿಗಳಂತೆಯೇ ಆಗ ಅಭಿ ವೃದ್ಧಿಯಾಗುತ್ತಿದ್ದ ಹೊಯ್ಸಳರಾಜರಲ್ಲೊಬ್ಬರನ್ನು ನಾಯಕ

ರನ್ನಾಗಿ ಮಾಡಿಕೊಂಡು ವೀರರಸ ಪ್ರಧಾನವಾದ ಗ್ರಂಥವನ್ನು ರಚಿಸಿದ್ದರೆ ಅವನ ಶಕ್ತಿ ಹೆಚ್ಚು ಪ್ರಕಾಶವಾಗುತ್ತಿತ್ತೆಂದು ಕಾಣುತ್ತದೆ. ಕವಿ ಪಂಕ್ತಿಯಲ್ಲಿ ನೇಮಚಂದ್ರನಿಗೆ ಪ್ರಥಮ ಸ್ಥಾನವಿಲ್ಲದಿದ್ದರೂ ದ್ವಿತೀಯ ಸ್ಥಾನಕ್ಕೆ ಸಂದೇಹವೇನೂ ಇಲ್ಲ.

ಓಂ ತತ್ಸತ್.

WO 62—MUPM—3000—2-1-1959

೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್
೨೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ
೨೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ
೩೦. ರಕ್ತ—ಡಿ. ಶಾಮಣ್ಣ
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೩೩. ಗಣಿತಶಾಸ್ತ್ರದ ಸ್ವರೂಪ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು
—ವಿ. ರಾಘವೇಂದ್ರರಾವ್
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ
೩೯. ಮಕ್ಕಳ ಭಾವಜೀವನ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು
೪೦. ಸಹಕಾರ—ಎಸ್. ಗೋಪಾಲಸ್ವಾಮಿ
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ
೪೨. ಕೌಟಲ್ಯ—ಡಾ॥ ಎಂ. ವಿ. ಕೃಷ್ಣರಾವ್
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೪೬. ರುಚಿ—ಎಸ್. ವಿ. ರಂಗಣ್ಣ
೪೭. ಕೀಟಗಳು—ಡಿ. ಎಸ್. ವೀರಯ್ಯ
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್
೪೯. ಮುದ್ರಣ—ಟಿ. ಎಸ್. ಶಾಮರಾವ್
೫೦. ಐವರು ಭೌತ ವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್
೫೧. ಕೃತಕರೇಷ್ಮೆ—ಎಂ. ಷಡಕ್ಷರಸ್ವಾಮಿ
೫೨. ಚೀನರ ಇತಿಹಾಸ ಮತ್ತು ನಾಗರಿಕತೆ
—ಎಸ್. ವೆಂಕಟದೇಶಿಕಾಚಾರ್

೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು
—ಎಸ್. ಲಕ್ಷ್ಮೀನರಸಿಂಹನ್

೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್

೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ

೫೭. ಪ್ರಜಾಭಿಪ್ರಾಯ—ಟಿ.ಎಸ್. ರಾಜಗೋಪಾಲ ಅಯ್ಯಂಗಾರ್

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್

೫೯. ಜನಪದಮುಕ್ತಕಗಳು—ಎಚ್.ಎಂ. ಶಂಕರನಾರಾಯಣರಾವ್

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ

೬೨. ಭಾರತದಲ್ಲಿ ಪ್ರಜಾಪ್ರಭುತ್ವ
—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೬೩. ಆರೋಗ್ಯಸಾಧನೆ—ಮೊಟಗಾನಹಳ್ಳಿ ಮಹದೇವಶಾಸ್ತ್ರೀ

೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್
ಮತ್ತು ಚಂದ್ರಭಾಗಾದೇವಿ

ಸಾದಾ ಪ್ರತಿ ೫೦ ನ. ಪೈಸೆ; ಉತ್ತಮ ಪ್ರತಿ ೭೫ ನ. ಪೈಸೆ

೬೬. ಚುನಾವಣೆಗಳು—ಗ. ಸ. ಹಾಲಪ್ಪ

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜಸರ್ಕಾರ್

೬೮. ಕ್ಷಯ—ಡಾ॥ ಎಸ್. ಟಿ. ಪುಟ್ಟಣ್ಣ

೬೯. ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್

೭೦. ಪರತಂತ್ರ ಜೀವಿಗಳು ಮತ್ತು ಪರತಂತ್ರ ಜೀವನ
—ಎಚ್. ಬಿ. ದೇವರಾಜ ಸರ್ಕಾರ್

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ

೭೨. ವಿನೋದ ಗಣಿತ—ವಿ. ಕೆ. ದೊರೆಸ್ವಾಮಿ

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್

೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣ

ಸಾದಾ ಪ್ರತಿ ೨೫ ನ. ಪೈಸೆ; ಉತ್ತಮ ಪ್ರತಿ ೩೭ ನ. ಪೈಸೆ

---

* ಈ ಪುಸ್ತಕ ಅಚ್ಚಿನಲ್ಲಿದೆ.